**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3.**

ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್-2019/21/2018-19 ದಿನಾಂಕ: 20.09.2018

# ಅಧಿಸೂಚನೆ

ವಿಷಯ: 2019ನೇ ಮಾರ್ಚ್/ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ. ಪರೀಕ್ಷಾ ಪ್ರಕ್ರಿಯೆಯ ಕುರಿತು ಮಾರ್ಗಸೂಚಿ.

**ಉಲ್ಲೇಖ:** 1) ಸರ್ಕಾರದ ಆದೇಶದ ಸಂಖ್ಯೆ:ಇಡಿ.254.ಎಸ್.ಎಲ್.ಬಿ.2015, ದಿನಾಂಕ:18.08.2015.
2) ಸರ್ಕಾರದ ಆದೇಶದ ಸಂಖ್ಯೆ:ಇಡಿ 355 ಎಸ್‌ಎಲ್‌ಬಿ 2017 ದಿನಾಂಕ:06.01.2018

* * * * *

2019ನೇ ಮಾರ್ಚ್/ಏಪ್ರಿಲ್ ಮಾಹೆಯಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ರಾಜ್ಯದ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ, ಅನುದಾನರಹಿತ ಶಾಲಾ/ ಕಾಲೇಜುಗಳಿಂದ ಹಾಜರಾಗುವ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇದಲ್ಲದೆ ಖಾಸಗಿ ಅಭ್ಯರ್ಥಿಗಳು ಮತ್ತು ಪುನರಾವರ್ತಿತ ಅಭ್ಯರ್ಥಿಗಳು ಕೂಡ ಈ ಪರೀಕ್ಷೆಗೆ ಹಾಜರಾಗಲು ಅರ್ಜಿಗಳನ್ನು ಶಾಲೆಗಳ ಮುಖಾಂತರ ಸಲ್ಲಿಸಬಹುದಾಗಿದೆ. ಸದರಿ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಯಲ್ಲಿನ ಮಾರ್ಚ್/ಏಪ್ರಿಲ್-2019ರ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುವ ಅರ್ಹ **ಶಾಲಾ ವಿದ್ಯಾರ್ಥಿಗಳ** (CCERF), **ಖಾಸಗಿ ಅಭ್ಯರ್ಥಿಗಳ** (CCEPF) **ಮತ್ತು ಪುನರಾವರ್ತಿತ ಅಭ್ಯರ್ಥಿಗಳ** (CCERR, CCEPR, NSR ಮತ್ತು NSPR) ವಿವರಗಳನ್ನು ಅನ್‌ಲೈನ್ (SATS) ಮೂಲಕ ಅಪ್‌ಲೋಡ್ ಮಾಡಲು ಸೂಚಿಸಿದೆ.

## I. ಶೈಕ್ಷಣಿಕ ವಿಭಾಗ

ಸರ್ಕಾರಿ ಆದೇಶದ ಸಂಖ್ಯೆ:ಇಡಿ.156.ಮಾಹಿತಿ.2014, ದಿನಾಂಕ:26.06.2014 ರನ್ವಯ, 2018-19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಮಾರ್ಚ್/ಏಪ್ರಿಲ್-2019 ರಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ(ಸಿ.ಸಿ.ಇ) ಪದ್ಧತಿಯನ್ನು ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳಲ್ಲಿ ಮುಂದುವರೆಸಲಾಗಿದೆ. ಈ ಹಿನ್ನೆಲೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ(ಸಿ.ಸಿ.ಇ.) ಅಳವಡಿಸುವ ವಿಧಿವಿಧಾನಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

1. ವಿದ್ಯಾರ್ಥಿಗಳನ್ನು ಪ್ರಗತಿಶೀಲರನ್ನಾಗಿಸಲು, ಸರ್ವತೋಮುಖ ಅಭಿವೃದ್ಧಿಗೆ ಪ್ರೇರೇಪಿಸಲು ಶಿಕ್ಷಣ ಮಹತ್ತರವಾದ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳಲ್ಲಿ ಗುಣಮಟ್ಟದ ಕಲಿಕೆ ಉಂಟಾಗಬೇಕಾದಲ್ಲಿ ಅವರಲ್ಲಿ ಶಿಸ್ತು, ಕಾರ್ಯತತ್ಪರತೆ, ಸೃಜನಶೀಲತೆ, ಕಲಾತ್ಮತೆಗಳಿಗೆ ಶಿಕ್ಷಣ ಒತ್ತು ನೀಡಬೇಕಾಗಿದೆ. ಇದನ್ನು ಸಾಧಿಸಲು ಪಠ್ಯ ವಿಷಯಗಳ ಮೌಲ್ಯಮಾಪನದ ಜೊತೆಗೆ ಸಹಪಠ್ಯ ಚಟುವಟಿಕೆಗಳ ಮೌಲ್ಯಮಾಪನದ ಅಗತ್ಯತೆ ಇರುವುದನ್ನು ಮನಗಂಡಿದೆ.

2. ಶೈಕ್ಷಣಿಕ ವರ್ಷದಲ್ಲಿ ವಿಷಯವಾರು ಒಟ್ಟು 04 ರೂಪಣಾತ್ಮಕ ಮೌಲ್ಯಮಾಪನಗಳನ್ನು ಮಾಡಲಾಗುತ್ತಿದ್ದು, ಪ್ರತಿ ರೂಪಣಾತ್ಮಕ ಮೌಲ್ಯಮಾಪನದಲ್ಲಿ(ಎರಡು ಚಟುವಟಿಕೆಗಳನ್ನು) ಒಂದು ಕಿರು ಪರೀಕ್ಷೆಯನ್ನು ನಡೆಸಬೇಕಾಗುತ್ತದೆ. ಒಟ್ಟಾರೆ 04 ರೂಪಣಾತ್ಮಕ ಮೌಲ್ಯಮಾಪನಗಳಿಂದ 08 ಚಟುವಟಿಕೆಗಳು ಹಾಗೂ 04 ಕಿರು ಪರೀಕ್ಷೆಗಳನ್ನು ನಡೆಸಬೇಕಾಗುತ್ತದೆ.

3. 2014-15ನೇ ಸಾಲಿನಿಂದ ಜಾರಿಗೆ ಬರುವಂತೆ(2015ನೇ ಏಪ್ರಿಲ್ ಪರೀಕ್ಷೆಯಿಂದ) ಈ ಕೆಳಕಂಡ ಮಾನದಂಡಗಳನ್ನು ಆಧರಿಸಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಪದ್ಧತಿ(ಸಿ.ಸಿ.ಇ.)ಯನ್ನು ಅಳವಡಿಸಿ ಏಪ್ರಿಲ್-2015ರಲ್ಲಿ ಹಾಗೂ ತದನಂತರದಲ್ಲಿ ನಡೆಸುವ ಎಸ್.ಎಸ್.ಎಲ್.ಸಿ.

ಪರೀಕ್ಷಾ ಫಲಿತಾಂಶವನ್ನು (ಮುಂಬರುವ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶಗಳನ್ನು) ಅಂಕಗಳು ಹಾಗೂ ಶ್ರೇಣಿಗಳ ಆಧಾರದ ಮೇರೆಗೆ ಪ್ರಕಟಿಸಲಾಗುವುದು.

**I(A) ಮಾನದಂಡಗಳು:–**

1. ಹತ್ತು ವರ್ಷದ ಔಪಚಾರಿಕ ಶಿಕ್ಷಣವನ್ನು ಮುಗಿಸಿದ ಎಲ್ಲಾ ವಿದ್ಯಾರ್ಥಿಗಳು, ಹತ್ತನೇ ವರ್ಷದ ಅಂತ್ಯದಲ್ಲಿ ಎಸ್.ಎಸ್.ಎಲ್.ಸಿ. ಅಂತಿಮ ಪರೀಕ್ಷೆ ಬರೆಯತಕ್ಕದ್ದು.
2. ಪರೀಕ್ಷೆಯು ವಿದ್ಯಾರ್ಥಿಯ ಆಂತರಿಕ ಮೌಲ್ಯಮಾಪನ ಹಾಗೂ ಬಾಹ್ಯ ಪರೀಕ್ಷಾ ವಿಧಾನದಿಂದ ಕೂಡಿರಬೇಕು.
3. ಬಾಹ್ಯ ಪರೀಕ್ಷೆಗೆ ಶೇ.80 ಹಾಗೂ ಆಂತರಿಕ ಮೌಲ್ಯಮಾಪನಕ್ಕೆ ಶೇ.20 ಅಂಕಗಳನ್ನು ಮೀಸಲಿಡತಕ್ಕದ್ದು.
4. ವಿದ್ಯಾರ್ಥಿಗಳ ಪ್ರಗತಿಯನ್ನು ಭಾಗ–ಎ(ಪಠ್ಯ ವಿಷಯಗಳು), ಭಾಗ–ಬಿ(ಸಹ ಪಠ್ಯ ವಿಷಯಗಳು) ಆಧಾರದ ಮೇಲೆ ಪರಿಗಣಿಸಬೇಕಾಗುತ್ತದೆ.
5. ಭಾಗ–ಎ ಯಲ್ಲಿ ಬರುವ ಪ್ರತಿ ವಿಷಯಗಳಿಗೆ ಅಂಕಗಳು ಹಾಗೂ ಶ್ರೇಣಿಗಳನ್ನು ಒಟ್ಟಾರೆ ಅಂಕಗಳು ಮತ್ತು ಶ್ರೇಣಿ (Cumulative Grade Average) CGA ಯನ್ನು ನೀಡಲಾಗುತ್ತದೆ.
6. ಎಲ್ಲಾ ವಿಷಯಗಳಲ್ಲಿ ಬಾಹ್ಯ ಪರೀಕ್ಷೆಗೆ ಒಟ್ಟು 500 ಅಂಕಗಳು ಮತ್ತು ಆಂತರಿಕ ಮೌಲ್ಯಮಾಪನಕ್ಕೆ 125 ಅಂಕಗಳನ್ನು ನಿಗದಿಪಡಿಸಿದೆ. ವಿಷಯವಾರು ಅಂಕಗಳ ವಿಂಗಡಣೆ ಕೆಳಕಂಡಂತ್ತಿದೆ.

| ವಿಷಯ | ಬಾಹ್ಯ | ಆಂತರಿಕ | ಒಟ್ಟು |
|---|---|---|---|
| ಪ್ರಥಮ ಭಾಷೆ | 100 | 25 | 125 |
| ದ್ವಿತೀಯ ಭಾಷೆ | 80 | 20 | 100 |
| ತೃತೀಯ ಭಾಷೆ | 80 | 20 | 100 |
| ಗಣಿತ | 80 | 20 | 100 |
| ವಿಜ್ಞಾನ | 80 | 20 | 100 |
| ಸಮಾಜ ವಿಜ್ಞಾನ | 80 | 20 | 100 |
| ಒಟ್ಟು | 500 | 125 | 625 |

7. ಭಾಗ–ಬಿಯಲ್ಲಿ (P1) ದೈಹಿಕ ಮತ್ತು ಆರೋಗ್ಯ ಶಿಕ್ಷಣ, (P2) ಮನೋಭಾವ ಮತ್ತು ಮೌಲ್ಯಗಳು, (P3)ಕಾರ್ಯಾನುಭವ, (P4)ಕಲಾ ಶಿಕ್ಷಣ ಈ ಸಹ ಪಠ್ಯ ವಿಷಯಗಳಿಗೆ ಎ, ಬಿ ಅಥವಾ ಸಿ ಶ್ರೇಣಿಗಳನ್ನು ನೀಡತಕ್ಕದ್ದು.

4. ಅಂಕಗಳು ಮತ್ತು ಶ್ರೇಣಿಗಳ ವಿವರ :

**ಒಟ್ಟು 625 ಅಂಕಗಳಿಗೆ**

| ಅಂಕಗಳು | ಶೇಕಡಾ | ಶ್ರೇಣಿ |
|---|---|---|
| 563–625 | 90 ರಿಂದ 100 | ಎ+ |
| 500–562 | 80 ರಿಂದ 90 ರವರೆಗೆ | ಎ |
| 438–499 | 70 ರಿಂದ 80 ರವರೆಗೆ | ಬಿ+ |
| 375–437 | 60 ರಿಂದ 70 ರವರೆಗೆ | ಬಿ |
| 313–374 | 50 ರಿಂದ 60 ರವರೆಗೆ | ಸಿ+ |
| 219–312 | 35 ರಿಂದ 50 ರವರೆಗೆ | ಸಿ |

**ಒಟ್ಟು 100 ಅಂಕಗಳಿಗೆ(ವಿಷಯವಾರು)**

| ಶೇಕಡಾ | ಶ್ರೇಣಿ |
|---|---|
| 90 ರಿಂದ 100 | ಎ+ |
| 80 ರಿಂದ 90 ರವರೆಗೆ | ಎ |
| 70 ರಿಂದ 80 ರವರೆಗೆ | ಬಿ+ |
| 60 ರಿಂದ 70 ರವರೆಗೆ | ಬಿ |
| 50 ರಿಂದ 60 ರವರೆಗೆ | ಸಿ+ |
| 35 ರಿಂದ 50 ರವರೆಗೆ | ಸಿ |

**ಒಟ್ಟು 125 ಅಂಕಗಳಿಗೆ(ಪ್ರಥಮ ಭಾಷಾ ವಿಷಯದಲ್ಲಿ) ಭಾಗ'ಬಿ'ಯ ಸಹಪಠ್ಯ ವಿಷಯಗಳಿಗೆ ಗಳಿಸಿದ ಅಂಕಗಳ ಆಧಾರದ ಮೇಲೆ ನೀಡುವ ಗ್ರೇಡ್(ಶ್ರೇಣಿ)**

| ಅಂಕಗಳು | ಶೇಕಡಾ | ಶ್ರೇಣಿ |
|---|---|---|
| 113–125 | 90 ರಿಂದ 100 | ಎ+ |
| 100–112 | 80 ರಿಂದ 90 ರವರೆಗೆ | ಎ |
| 88–99 | 70 ರಿಂದ 80 ರವರೆಗೆ | ಬಿ+ |
| 75–87 | 60 ರಿಂದ 70 ರವರೆಗೆ | ಬಿ |
| 63–74 | 50 ರಿಂದ 60 ರವರೆಗೆ | ಸಿ+ |
| 44–62 | 35 ರಿಂದ 50 ರವರೆಗೆ | ಸಿ |

| ಶೇಕಡಾ | ಶ್ರೇಣಿ |
|---|---|
| 100 ರಿಂದ 80 | ಎ |
| 50 ರಿಂದ 79 ರವರೆಗೆ | ಬಿ |
| 35 ರಿಂದ 49 ರವರೆಗೆ | ಸಿ |

5. ಬಾಹ್ಯ ಪರೀಕ್ಷೆಯಲ್ಲಿ ಪ್ರಥಮ ಭಾಷೆಯಲ್ಲಿ 100 ಅಂಕಗಳಿಗೆ ಕನಿಷ್ಠ 35 ಹಾಗೂ ಇತರೆ ವಿಷಯಗಳಲ್ಲಿ 80 ಅಂಕಗಳಿಗೆ ಕನಿಷ್ಠ 28 ಅಂಕಗಳನ್ನು ಪಡೆದಿರತಕ್ಕದ್ದು.

6. ವಿದ್ಯಾರ್ಥಿಯು ತೇರ್ಗಡೆಯಾಗಲು ಬಾಹ್ಯ ಪರೀಕ್ಷೆಯ 500 ಅಂಕಗಳಿಗೆ ಕನಿಷ್ಠ 175 ಅಂಕಗಳನ್ನು(ಶೇ.35) ಪಡೆದಿರಲೇಬೇಕು.

7. ವಿದ್ಯಾರ್ಥಿ ತೇರ್ಗಡೆಯಾಗಲು ಬಾಹ್ಯ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ ಶೇ.30 ಹಾಗೂ ಬಾಹ್ಯ ಪರೀಕ್ಷೆಯ ಎಲ್ಲಾ ವಿಷಯಗಳ ಸರಾಸರಿ ಶೇ.35 ಹಾಗೂ ಬಾಹ್ಯ ಪರೀಕ್ಷೆ ಮತ್ತು ಆಂತರಿಕ ಮೌಲ್ಯಮಾಪನದ ಎಲ್ಲಾ ವಿಷಯಗಳ ಒಟ್ಟು ಸರಾಸರಿ ಶೇ.35 ಆಗಿರಬೇಕು.

**ರೂಪಣಾತ್ಮಕ ಮೌಲ್ಯಮಾಪನದ(Formative Assessment) ಚಟುವಟಿಕೆಗಳು:**

**8.** ಆಂತರಿಕ ಮೌಲ್ಯಮಾಪನದ ಅಂಕಗಳನ್ನು ನಾಲ್ಕು ರೂಪಣಾತ್ಮಕ ಮೌಲ್ಯಮಾಪನದ ಆಧಾರದ ಮೇಲೆ ನಿರ್ಧರಿಸುವುದು. FA1, FA2, FA3, FA4

**9.** ಪ್ರತಿಯೊಂದು ರೂಪಣಾತ್ಮಕ ಮೌಲ್ಯಮಾಪನದಲ್ಲಿ 20 ಅಂಕಗಳ ಕಿರುಪರೀಕ್ಷೆ, (ಉಪಾಧ್ಯಾಯರ ನಿರ್ಧಾರದಂತೆ) ಹಾಗೂ 15 ಅಂಕಗಳ ಎರಡು ಚಟುವಟಿಕೆಗಳು ಇದ್ದು, ಪ್ರತಿ ರೂಪಣಾತ್ಮಕ ಮೌಲ್ಯಮಾಪನಕ್ಕೆ 50 ಅಂಕಗಳು ನಿಗದಿಯಾಗಿರುತ್ತದೆ. ಒಟ್ಟು ನಾಲ್ಕು ರೂಪಣಾತ್ಮಕ ಮೌಲ್ಯಮಾಪನದ ಅಂಕ 200 ಆಗಿರುತ್ತದೆ. ವಿದ್ಯಾರ್ಥಿಯು ಗಳಿಸಿದ ಒಟ್ಟು ಅಂಕಗಳನ್ನು, 200 ಅಂಕಗಳಿಗೆ ಪರಿಮಾಣಾತ್ಮಕವಾಗಿ ಪ್ರಥಮ ಭಾಷೆಗೆ 25 ಅಂಕಗಳಿಗೂ, ಉಳಿದ 05 ವಿಷಯಗಳಲ್ಲಿ 20 ಅಂಕಗಳಿಗೂ ಲೆಕ್ಕ ಹಾಕಿ ಆಂತರಿಕ ಮೌಲ್ಯಮಾಪನಕ್ಕೆ ಪರಿಗಣಿಸತಕ್ಕದ್ದು.

**10.** ಆಂತರಿಕ ಮೌಲ್ಯಮಾಪನದಲ್ಲಿ ನಡೆಸುವ ಕಿರುಪರೀಕ್ಷೆ ಹಾಗೂ ಚಟುವಟಿಕೆಗಳು ಸಿ.ಸಿ.ಇ. ಆಧಾರವಾಗಿರಬೇಕು.

**11.** ಪ್ರತಿ ರೂಪಣಾತ್ಮಕ ಮೌಲ್ಯಮಾಪನದ ಚಟುವಟಿಕೆಗಳು ಮತ್ತು ಕಿರು ಪರೀಕ್ಷೆಗಳ ಅಂಕಗಳು ದಶಮಾಂಶ ರೂಪದಲ್ಲಿದ್ದರೆ, ಉದಾಹರಣೆಗೆ:–39.25, 34.50, 43.75, 44.00 ಹೀಗೆ ಪಡೆದಿದ್ದಲ್ಲಿ ಕೊನೆಯವರೆಗೂ ಹಾಗೇ ಉಳಿಸಿಕೊಂಡಿದ್ದು, 04 ರೂಪಣಾತ್ಮಕ ಮೌಲ್ಯಮಾಪನಗಳು ಮತ್ತು ಚಟುವಟಿಕೆಗಳು ಪೂರ್ಣಗೊಂಡ ನಂತರ ಮುಂದಿನ ಪೂರ್ಣಾಂಕಕ್ಕೆ ಪರಿವರ್ತಿಸುವುದು.

**ಉದಾಹರಣೆಗೆ:–**

| Subject | FA1 | | | | FA2 | | | | FA3 | | | | FA4 | | | | GRAND TOTAL | |
|---|---|---|---|---|---|---|---|---|---|---|---|---|---|---|---|---|---|---|
| | Test | Activity 1 | Activity 2 | Total | Test | Activity 1 | Activity 2 | Total | Test | Activity 1 | Activity 2 | Total | Test | Activity 1 | Activity 2 | Total | | |
| | 20 | 15 | 15 | 50 | 20 | 15 | 15 | 50 | 20 | 15 | 15 | 50 | 20 | 15 | 15 | 50 | 200 | |
| Ist Language | 18 | 14 | 10.5 | 42.5 | 17 | 13 | 14.5 | 44.5 | 16 | 14 | 13 | 43 | 15 | 12 | 13 | 43 | 173 | (173/200) X 25= 21.62 = 22 |
| Other Subjects | 13 | 14 | 12 | 39 | 14 | 14 | 13 | 41 | 15 | 12 | 11 | 38 | 14 | 13 | 14 | 41 | 159 | (159/200) X 20 = 15.9 = 16 |
| | 17 | 15 | 13 | 45 | 11 | 13 | 15 | 39 | 19 | 12 | 15 | 46 | 09 | 11 | 12 | 32 | 162 | (162/200) X 20 = 16.2 = 17 |

12. **ವಿದ್ಯಾರ್ಥಿಗಳು ತೇರ್ಗಡೆಯಾಗಲು ಆಂತರಿಕ ಮೌಲ್ಯಮಾಪನದಲ್ಲಿ ಇಂತಿಷ್ಟೇ ಕನಿಷ್ಠ ಅಂಕಗಳನ್ನು ಪಡೆಯಬೇಕು ಎಂಬ ನಿಯಮವಿರುವುದಿಲ್ಲ.**

13. ವಿದ್ಯಾರ್ಥಿಗಳ ತೇರ್ಗಡೆಗೆ ಅಂತಿಮ ಫಲಿತಾಂಶವನ್ನು ನಿರ್ಧರಿಸುವಾಗ(ಪರೀಕ್ಷಾ ಮಂಡಳಿ ನಡೆಸುವ) ಬಾಹ್ಯ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲೂ ಕನಿಷ್ಟ ಶೇ.30ರಷ್ಟು ಅಂಕಗಳನ್ನು ಗಳಿಸಿರಬೇಕಾಗುತ್ತದೆ ಹಾಗೂ ಒಟ್ಟಾರೆ ಶೇ.35 ಅಂಕಗಳನ್ನು ಪಡೆದಿರತಕ್ಕದ್ದು.

14. ವಿದ್ಯಾರ್ಥಿಗಳ ಚಟುವಟಿಕೆಗಳ ದಾಖಲೀಕರಣವನ್ನು ಮುಖ್ಯ ಶಿಕ್ಷಕರು ನಿರ್ವಹಣೆ ಮಾಡುವುದು ತುಂಬಾ ಪ್ರಾಮುಖ್ಯತೆ ಹೊಂದಿರುತ್ತದೆ. ಇಲಾಖೆ, ಪೋಷಕರು ಹಾಗೂ ವಿದ್ಯಾರ್ಥಿಗಳು ಮೌಲ್ಯಮಾಪನ ಮಾಡಿದ

ವಿದ್ಯಾರ್ಥಿಗಳ ಚಟುವಟಿಕೆಗಳು ಹಾಗೂ ಕಿರು ಪರೀಕ್ಷೆಯ ಉತ್ತರ ಪತ್ರಿಕೆಗಳ ಮಾಹಿತಿಯನ್ನು, ಮಾಹಿತಿ ಹಕ್ಕು ಅಧಿನಿಯಮಗಳ ಅಡಿಯಲ್ಲಿ ಮಾಹಿತಿಗಳನ್ನು ಪಡೆಯುವ ಸಂಭವಗಳಿರುತ್ತದೆ. ಆದ್ದರಿಂದ ಸರ್ಕಾರಿ/ ಅನುದಾನಿತ/ ಅನುದಾನರಹಿತ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಚಟುವಟಿಕೆ ಮತ್ತು ಕಿರು ಪರೀಕ್ಷೆಗಳ ದಾಖಲೀಕರಣಗಳನ್ನು ಮಂಡಳಿಯ ಕಾಯ್ದೆ 1966ರ Annexure-3 ನಿಯಮ–20(ಎ) ಅನ್ವಯ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ ಪ್ರಕಟವಾದ ನಂತರ ಕನಿಷ್ಠ 05 ತಿಂಗಳವರೆಗೆ ಸುರಕ್ಷಿತವಾಗಿ ಮುಖ್ಯ ಗುರುಗಳ ವಶದಲ್ಲಿ ಸಂರಕ್ಷಿಸಿಡಬೇಕು. ಉಳಿದಂತೆ ಕ್ರೋಢೀಕೃತ ವಹಿಗಳನ್ನು ದಾಖಲಾತಿ ವಹಿಯಂತೆ ಖಾಯಂ ಆಗಿ ಸಂರಕ್ಷಿಸಬೇಕಾಗುತ್ತದೆ.

15. ಪ್ರತಿ ರೂಪಣಾತ್ಮಕ ಮೌಲ್ಯಮಾಪನ ಮತ್ತು ಕಿರುಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳನ್ನು ವಿದ್ಯಾರ್ಥಿಗೆ ಮತ್ತು ಪೋಷಕರುಗಳಿಗೆ ತಿಳಿಸಬೇಕು. ಈ ಮಾಹಿತಿಯನ್ನು ತಿಳಿಸಿದ ಬಗ್ಗೆ ಪೋಷಕರುಗಳಿಂದ ಕಡ್ಡಾಯವಾಗಿ ಸಹಿ ಪಡೆಯತಕ್ಕದ್ದು.

16. **ಖಾಸಗಿ ಅಭ್ಯರ್ಥಿಗಳಿಗೆ:–**

ಭಾಗ–ಎ ಯ ಪಠ್ಯ ವಿಷಯಗಳಿಗಷ್ಟೆ ಅಂತಿಮ ಪರೀಕ್ಷೆಯನ್ನು ನಡೆಸತಕ್ಕದ್ದು.

| | | |
|---|---|---|
| ಪ್ರಥಮ ಭಾಷೆ | : | 125 |
| ದ್ವಿತೀಯ ಭಾಷೆ | : | 100 |
| ತೃತೀಯ ಭಾಷೆ | : | 100 |
| ಗಣಿತ | : | 100 |
| ವಿಜ್ಞಾನ | : | 100 |
| ಸಮಾಜ ವಿಜ್ಞಾನ | : | 100 |
| **ಒಟ್ಟು** | **:** | **625 ಅಂಕಗಳು** |

ಆಂತರಿಕ ಮೌಲ್ಯಮಾಪನ ಹಾಗೂ ಭಾಗ–ಬಿ ಗೆ ಪರೀಕ್ಷೆಗಳಿರುವುದಿಲ್ಲ.
ಭಾಗ–ಎ ಪರೀಕ್ಷೆಯನ್ನು 625 ಅಂಕಗಳಿಗೆ ನಡೆಸಲಾಗುವುದು.

17. **ಇತರೆ ವಿಷಯಗಳು:**

- ಅರ್ಧ ವಾರ್ಷಿಕ ಪರೀಕ್ಷೆಯ ಅಂಕಗಳನ್ನು ರೂಪಣಾತ್ಮಕ ಮೌಲ್ಯಮಾಪನದೊಡನೆ ಸೇರಿಸುವ ಅವಶ್ಯಕತೆ ಇಲ್ಲ.
- ಸತತ 06 ಪ್ರಯತ್ನಗಳಲ್ಲಿ ಅನುತ್ತೀರ್ಣವಾಗಿದ್ದಲ್ಲಿ ಮುಂದಿನ ಪರೀಕ್ಷೆಗೆ ಹೊಸದಾಗಿ ಖಾಸಗಿ ಅಭ್ಯರ್ಥಿಯಾಗಿ ನೋಂದಣಿ ಮಾಡಿಸಿ ಸಿ.ಸಿ.ಇ. ಆಧಾರಿತ ಹೊಸ ಪಠ್ಯಕ್ರಮದಲ್ಲಿ ಪರೀಕ್ಷೆಗೆ ಹಾಜರಾಗತಕ್ಕದ್ದು ಹಾಗೂ 06 ವಿಷಯಗಳಿಗೂ ಹೊಸದಾಗಿ ಪರೀಕ್ಷೆಗೆ ಹಾಜರಾಗತಕ್ಕದ್ದು.
- ಸರ್ಕಾರದ ಆದೇಶ ಸಂಖ್ಯೆ:ಇಡಿ 156 ಎಸ್ಎಲ್‌ಬಿ 2016 ದಿನಾಂಕ:11.08.2016 ರಂತೆ ಶಾಲಾ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪುನ: ಮುಂದಿನ ಒಂದು ಶೈಕ್ಷಣಿಕ ವರ್ಷದಲ್ಲಿ ಶಾಲಾ ಅಭ್ಯರ್ಥಿಯಾಗಿ ಪ್ರವೇಶ ಪಡೆಯಲು ಅವಕಾಶವಿರುತ್ತದೆ. ಅನುತ್ತೀರ್ಣರಾದ ಶಾಲಾ ವಿದ್ಯಾರ್ಥಿಗಳು ಮರು ಶಾಲಾ ಪ್ರವೇಶ ಪಡೆಯಲು ಎಲ್ಲಾ ಆರು (06) ವಿಷಯಗಳನ್ನು ವ್ಯಾಸಂಗ ಮಾಡಿ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿರುತ್ತದೆ.

**18 ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳು:–**

ಭಾಷಾ ವಿನಾಯಿತಿ, ಹೆಚ್ಚುವರಿ ಸಮಯ, ಸಹಾಯಕರ ಸೌಲಭ್ಯ, ಪರ್ಯಾಯ ವಿಷಯಗಳನ್ನು ತೆಗೆದುಕೊಳ್ಳಲು ಅವಕಾಶವಿದೆ. ವಿನಾಯಿತಿ ಪಡೆದ ಭಾಷಾ ವಿಷಯಗಳಿಗೆ ಶಾಲಾ ಹಂತದ ಮೌಲ್ಯಮಾಪನದಿಂದ ವಿನಾಯಿತಿ ನೀಡಲಾಗಿದೆ ಸದರಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡಿದ ವಿಷಯಗಳಿಗನುಗುಣವಾಗಿ ನೀಡಲಾಗುವುದು.

18. ಈ ವ್ಯವಸ್ಥೆಯ ಕುರಿತು ರಾಜ್ಯದ ಎಲ್ಲಾ ಶಿಕ್ಷಕರಿಗೆ, ಪೋಷಕರಿಗೆ ವ್ಯಾಪಕವಾದ ಮಾಹಿತಿಯನ್ನು ವೆಬ್‌ಸೈಟ್ ಮೂಲಕ ಪ್ರಕಟಿಸಲಾಗಿದೆ.

**ಪಠ್ಯ ಪುಸ್ತಕ ಪರಿಷ್ಕರಣೆ ಕುರಿತು**

- 2017-18ನೇ ಶೈಕ್ಷಣಿಕ ವರ್ಷದಿಂದ 10ನೇ ತರಗತಿಯ ಭಾಷಾವಾರು ವಿಷಯಗಳಲ್ಲಿ ಪ್ರಥಮ ಭಾಷೆಗಳಾದ ಕನ್ನಡ, ಹಿಂದಿ, ಮರಾಠಿ, ಸಂಸ್ಕೃತ ವಿಷಯಗಳ ಪಠ್ಯಪುಸ್ತಕಗಳನ್ನು ಪರಿಷ್ಕೃತಗೊಳಿಸಲಾಗಿದೆ.
- ಪ್ರಥಮ ಭಾಷೆಗಳಾದ ತೆಲುಗು, ತಮಿಳು, ಉರ್ದು, ಇಂಗ್ಲಿಷ್ ವಿಷಯಗಳ ಪಠ್ಯಪುಸ್ತಕಗಳು ಪರಿಷ್ಕೃತವಾಗಿರುವುದಿಲ್ಲ.
- ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ ವಿಷಯಗಳ ಪಠ್ಯಪುಸ್ತಕಗಳು ಪರಿಷ್ಕೃತವಾಗಿರುತ್ತದೆ.
- ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಉರ್ದು, ಸಂಸ್ಕೃತ, ತುಳು ವಿಷಯಗಳ ಪಠ್ಯಪುಸ್ತಕಗಳು ಪರಿಷ್ಕೃತವಾಗಿರುತ್ತವೆ.
- ತೃತೀಯ ಭಾಷೆಗಳಾದ ಇಂಗ್ಲಿಷ್, ಅರೇಬಿಕ್, ಕೊಂಕಣಿ ವಿಷಯಗಳ ಪಠ್ಯಪುಸ್ತಕಗಳು ಪರಿಷ್ಕೃತವಾಗಿರುವುದಿಲ್ಲ.
- ಮಾರ್ಚ್/ಏಪ್ರಿಲ್-2019ರ ಪರೀಕ್ಷೆಗೆ ಹಾಜರಾಗುತ್ತಿರುವ ಶಾಲಾ ಅಭ್ಯರ್ಥಿಗಳು (Regular Freshers) ಹಾಗೂ 2018ನೇ ಸಾಲಿನ ಪುನರಾವರ್ತಿತ ಅಭ್ಯರ್ಥಿಗಳು ಪರಿಷ್ಕೃತವಾಗಿರುವ ಭಾಷಾವಾರು ಪಠ್ಯಪುಸ್ತಕಗಳನ್ನು ಅಭ್ಯಾಸಮಾಡಿ ಪರೀಕ್ಷೆಗೆ ಹಾಜರಾಗುವುದು.
- ಮಾರ್ಚ್/ಏಪ್ರಿಲ್-2017ರ ಹಾಗೂ ಜೂನ್ 2017ರ ಪರೀಕ್ಷೆಗೆ ಹಾಜರಾಗಿ ಭಾಷಾವಾರು ವಿಷಯಗಳಲ್ಲಿ ಅನುತ್ತೀರ್ಣರಾಗಿರುವ ಪುನರಾವರ್ತಿತ ಅಭ್ಯರ್ಥಿಗಳು ಪರಿಷ್ಕೃತವಾಗುವ ಪೂರ್ವದಲ್ಲಿದ್ದ ಭಾಷಾವಾರು ಪಠ್ಯಪುಸ್ತಕಗಳನ್ನು ಅಭ್ಯಾಸಮಾಡಿ ಮಾರ್ಚ್/ಏಪ್ರಿಲ್-2019ರ ಪರೀಕ್ಷೆಗೆ ಹಾಜರಾಗುವುದು.
- ಪರಿಷ್ಕೃತವಾಗದೇ ಯಥಾವತ್ತು ಮುಂದುವರೆದಿರುವ ಭಾಷಾವಾರು ವಿಷಯಗಳನ್ನು ಶಾಲಾ ಅಭ್ಯರ್ಥಿಗಳು ಹಾಗೂ ಪುನರಾವರ್ತಿತ ಅಭ್ಯರ್ಥಿಗಳು ಅಭ್ಯಾಸಮಾಡಿ, ಮಾರ್ಚ್/ಏಪ್ರಿಲ್-2019ರ ಪರೀಕ್ಷೆಗೆ ಹಾಜರಾಗುವುದು.
- 2018-19ನೇ ಶೈಕ್ಷಣಿಕ ವರ್ಷದಿಂದ 10ನೇ ತರಗತಿಯ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನಗಳ ಪಠ್ಯಪುಸ್ತಕಗಳು ಪರಿಷ್ಕೃತವಾಗಿರುತ್ತದೆ.
- ಮಾರ್ಚ್/ಏಪ್ರಿಲ್-2019ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ಶಾಲಾ ಅಭ್ಯರ್ಥಿಗಳು ಪರಿಷ್ಕೃತವಾಗಿರುವ ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಅಭ್ಯಾಸ ಮಾಡಿ ಪರೀಕ್ಷೆಗೆ ಹಾಜರಾಗುವುದು.
- ಮಾರ್ಚ್/ಏಪ್ರಿಲ್-2017ರ ನಂತರದ ಹಾಗೂ ಜೂನ್-2018ರ ಪೂರ್ವದ ಪುನರಾವರ್ತಿತ ಅಭ್ಯರ್ಥಿಗಳು ಹಳೆ ಪಠ್ಯಕ್ರಮದ ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಅಭ್ಯಾಸ ಮಾಡಿ ಪರೀಕ್ಷೆಗೆ ಹಾಜರಾಗುವುದು.

**ಪರಿಷ್ಕೃತಗೊಂಡಿರುವ ಪಠ್ಯ ಪುಸ್ತಕಗಳ ವಿವರ ಈ ಕೆಳಕಂಡಂತಿದೆ.**

| ವರ್ಷ | ಪರಿಷ್ಕೃತಗೊಂಡ ವಿಷಯಗಳು |
|---|---|
| 2017-18 | **1. ಪ್ರಥಮ ಭಾಷೆ:**<br>ಕನ್ನಡ, ಹಿಂದಿ, ಮರಾಠಿ, ಸಂಸ್ಕೃತ<br>**2. ದ್ವಿತೀಯ ಭಾಷೆ:**<br>ಇಂಗ್ಲಿಷ್ ಮತ್ತು ಕನ್ನಡ<br>**3. ತೃತೀಯ ಭಾಷೆ**<br>ಹಿಂದಿ, ಕನ್ನಡ, ಉರ್ದು, ಸಂಸ್ಕೃತ, ತುಳು |
| 2018-19 | **ಕೋರ್ ವಿಷಯಗಳು**<br>ಗಣಿತ, ವಿಜ್ಞಾನ, ಸಮಾಜ ವಿಜ್ಞಾನ |

**ಪ್ರಶ್ನೆಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳನ್ನು ಪ್ರತ್ಯೇಕವಾಗಿ ಮುದ್ರಿಸಿರುವ ಬಗ್ಗೆ**

- SATS ಜಾಲತಾಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಮಾಹಿತಿಯನ್ನು ದಾಖಲಿಸಬೇಕು.

- ಪ್ರಶ್ನೆಪತ್ರಿಕೆ ಹಾಗೂ ಉತ್ತರಪತ್ರಿಕೆ ಪ್ರತ್ಯೇಕವಾಗಿರುವುದರಿಂದ, ಗಣಿತ ವಿಷಯಕ್ಕೆ ಗ್ರಾಫ್(ನಕ್ಷೆ) ಒಳಗೊಂಡಿರುವ ಮುಖ್ಯ ಉತ್ತರಪತ್ರಿಕೆಗಳನ್ನು ನೀಡಲಾಗುವುದು.

- ಗಣಿತ ವಿಷಯಕ್ಕೆ ಗ್ರಾಫ್(ನಕ್ಷೆ) ಒಳಗೊಂಡಿರುವ ಮುಖ್ಯ ಉತ್ತರಪತ್ರಿಕೆಗಳನ್ನು ಪರೀಕ್ಷಾ ಕೇಂದ್ರದ ಕೊಠಡಿ ಮೇಲ್ವಿಚಾರಕರಿಗೆ ನೀಡಿ ವಿದ್ಯಾರ್ಥಿಗಳಿಗೆ ವಿತರಿಸಲು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಹಾಗೂ ಪರೀಕ್ಷಾ ದಿನದಂದು ಯಾವುದೇ ವ್ಯತ್ಯಾಸವಾಗದಂತೆ ಮುಖ್ಯ ಉತ್ತರಪತ್ರಿಕೆಗಳನ್ನು ವಿತರಿಸಲು ಅಗತ್ಯ ಕ್ರಮಕೈಗೊಳ್ಳುವುದು. ಮುಖ್ಯ ಉತ್ತರಪತ್ರಿಕೆಗಳನ್ನು ವಿತರಿಸುವಲ್ಲಿ ಲೋಪದೋಷ ಕಂಡುಬಂದಲ್ಲಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನೇ ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.

- ಪರೀಕ್ಷಾ ಕೇಂದ್ರದಲ್ಲಿ ಮುಖ್ಯ ಅಧೀಕ್ಷಕರು ಮುಖ್ಯ ಉತ್ತರಪತ್ರಿಕೆ ಹಾಗೂ ಹೆಚ್ಚುವರಿ ಪುರವಣಿ ಉತ್ತರಪತ್ರಿಕೆಗಳ ಲೆಕ್ಕಾಚಾರ ನಿರ್ವಹಣೆಗಾಗಿ ದಾಸ್ತಾನುವಹಿ ನಿರ್ವಹಿಸುವುದು.

- ಪ್ರತಿ ಪರೀಕ್ಷಾ ದಿನದಂದು ಕ್ರಮಸಂಖ್ಯೆಯ ಸರಣಿವಾರು ಮುಖ್ಯ ಉತ್ತರಪತ್ರಿಕೆಗಳನ್ನು ಅಭ್ಯರ್ಥಿಗಳಿಗೆ ವಿತರಿಸುವುದು. ಗೈರುಹಾಜರಾದ ವಿದ್ಯಾರ್ಥಿಗಳ ಮುಖ್ಯ ಉತ್ತರಪತ್ರಿಕೆಗಳ ಲೆಕ್ಕಾಚಾರ ನಿರ್ವಹಿಸಿ, ಅಂತಿಮ ಪರೀಕ್ಷಾ ದಿನದಂದು ಮುಖ್ಯ ಉತ್ತರಪತ್ರಿಕೆಗಳ ಕೊರತೆ ಕಂಡುಬಂದಲ್ಲಿ ಮಾತ್ರ ಉಪಯೋಗಿಸಿಕೊಳ್ಳುವುದು.

- ಅಂತಿಮ ಪರೀಕ್ಷಾ ದಿನದಂದು ಪರೀಕ್ಷೆಯಾದ ನಂತರ ಉಳಿಕೆ ಮುಖ್ಯ ಉತ್ತರಪತ್ರಿಕೆಗಳನ್ನು ಪ್ರಶ್ನೆಪತ್ರಿಕೆ ವಿತರಿಸುವ ಮಾರ್ಗಾಧಿಕಾರಿಗಳ ಮುಖಾಂತರ ಉಳಿಕೆ ಮುಖ್ಯ ಉತ್ತರಪತ್ರಿಕೆಗಳು ಹಾಗೂ ಹೆಚ್ಚುವರಿ ಪುರವಣಿ ಉತ್ತರಪತ್ರಿಕೆಗಳನ್ನು ವಾಪಸ್ಸು ನೀಡಿ ಸ್ವೀಕೃತಿ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳ ವಶಕ್ಕೆ ನೀಡುವುದು.

- ಕೊಠಡಿ ಮೇಲ್ವಿಚಾರಕರು ಪರೀಕ್ಷಾ ಕೊಠಡಿಗೆ ನಿಗದಿಪಡಿಸಿದ ಕ್ರಮವಾಗಿರುವ ಉತ್ತರಪತ್ರಿಕೆಗಳನ್ನು ಹಾಗೂ ಲಾಗ್‌ಬುಕ್‌ನ್ನು ಮುಖ್ಯ ಅಧೀಕ್ಷಕರಿಂದ ಪಡೆದು ಪರೀಕ್ಷಾ ಕೊಠಡಿಗೆ ತೆರಳುವುದು.

- ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಆಸೀನರಾದ ನಂತರ ಕ್ರಮವಾಗಿ ಹಂಚಿಕೆಯಾದ ನೋಂದಣಿ ಸಂಖ್ಯೆವಾರು, ಕ್ರಮವಾಗಿರುವ ಸರಣಿವಾರು ಮುಖ್ಯ ಉತ್ತರಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುವುದು.

- ಮುಖ್ಯ ಉತ್ತರಪತ್ರಿಕೆಯಲ್ಲಿ ವಿದ್ಯಾರ್ಥಿಯು ನೋಂದಣಿ ಸಂಖ್ಯೆಯನ್ನು ಸರಿಯಾಗಿ, ಸ್ಪಷ್ಟವಾಗಿ, ನಿಗದಿಪಡಿಸಿದ ಸ್ಥಳದಲ್ಲಿ ಯಾವುದೇ ದೋಷವಿಲ್ಲದಂತೆ ಬರೆಯಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ತಿದ್ದುಪಡಿಯಾದಲ್ಲಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಸಹಿಮಾಡಿ ದೃಢೀಕರಿಸುವುದು.

- ಪರೀಕ್ಷೆ ಪ್ರಾರಂಭವಾಗುವ ಬೆಳಿಗ್ಗೆ 9.30ರ ಬೆಲ್ ಆದನಂತರ ಪಶ್ನೆಪತ್ರಿಕೆಗಳನ್ನು ಕ್ರಮವಾಗಿ ಸರಣಿವಾರು ವಿದ್ಯಾರ್ಥಿಗಳಿಗೆ ಅವರ ಪ್ರವೇಶ ಪತ್ರದಲ್ಲಿ ನಮೂದಿಸಿರುವಂತೆ ಪ್ರಶ್ನೆಪತ್ರಿಕೆಗಳನ್ನು ವಿತರಿಸುವುದು.

- ವಿದ್ಯಾರ್ಥಿಗಳು ಹೆಚ್ಚುವರಿ ಪುರವಣಿ ಉತ್ತರಪತ್ರಿಕೆ ಪಡೆದಿದ್ದಲ್ಲಿ ಮುಖ್ಯ (main) ಉತ್ತರಪತ್ರಿಕೆಯಲ್ಲಿ ಹೆಚ್ಚುವರಿ ಪುರವಣಿ ಉತ್ತರಪತ್ರಿಕೆ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯ. ಹೆಚ್ಚುವರಿ ಪುರವಣಿ ಉತ್ತರಪತ್ರಿಕೆ ಸಂಖ್ಯೆಯನ್ನು ವಿದ್ಯಾರ್ಥಿಯು ನಮೂದಿಸಿರುವುದನ್ನು ಕೊಠಡಿ ಮೇಲ್ವಿಚಾರಕರು ಖಾತರಿಪಡಿಸಿಕೊಳ್ಳುವುದು.

- ಪರೀಕ್ಷಾ ಕೇಂದ್ರದಲ್ಲಿ ಕೊಠಡಿ ಮೇಲ್ವಿಚಾರಕರು ಉತ್ತರಪತ್ರಿಕೆಯ ನಿಗದಿಪಡಿಸಿದ ಸ್ಥಳದಲ್ಲಿ ಸಹಿಮಾಡುವುದು ಕಡ್ಡಾಯ. ಕೆಲವೊಂದು ಜಿಲ್ಲೆಯ ಕೊಠಡಿ ಮೇಲ್ವಿಚಾರಕರು ಉತ್ತರಪತ್ರಿಕೆಯಲ್ಲಿ ಸಹಿ ಮಾಡದೇ ಇರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ.

- ಕೊಠಡಿ ಮೇಲ್ವಿಚಾರಕರು ಪರೀಕ್ಷಾ ಕೊಠಡಿಯಲ್ಲಿ ಪ್ರೊಫಾರ್ಮದ ನಮೂನೆಯಲ್ಲಿನ ವಿವರವನ್ನು ಸಂಪೂರ್ಣವಾಗಿ ಪಡೆಯುವುದು. ಮುಖ್ಯ ಉತ್ತರಪತ್ರಿಕೆ ಹಾಗೂ ಹೆಚ್ಚುವರಿ ಪುರವಣಿ ಉತ್ತರಪತ್ರಿಕೆ ಸಂಖ್ಯೆಯನ್ನು ಪ್ರೊಫಾರ್ಮದ ನಮೂನೆಯಲ್ಲಿ ಕಡ್ಡಾಯವಾಗಿ ನಮೂದಿಸುವುದು.

- ಉತ್ತರಪತ್ರಿಕೆ ಹಾಗೂ ಹೆಚ್ಚುವರಿ ಪುರವಣಿ ಉತ್ತರಪತ್ರಿಕೆಗಳಿಗೆ ಸರಿಯಾಗಿ ಪಂಚಿಂಗ್ ಮಾಡಿ ಟ್ಯಾಗ್‌ನಿಂದ ಭದ್ರವಾಗಿ ಬಿಚ್ಚಿ ಹೋಗದಂತೆ ಕಟ್ಟಿರುವುದನ್ನು ಖಾತರಿಪಡಿಸಿಕೊಳ್ಳುವುದು.

- ಕೊಠಡಿ ಮೇಲ್ವಿಚಾರಕರು ಮುಖ್ಯ ಉತ್ತರಪತ್ರಿಕೆ ಹಾಗೂ ಹೆಚ್ಚುವರಿ ಪುರವಣಿ ಉತ್ತರಪತ್ರಿಕೆಗಳ ಒಟ್ಟು ಪುಟಗಳ ಸಂಖ್ಯೆಗಳನ್ನು ವಿದ್ಯಾರ್ಥಿಯು ಕಡ್ಡಾಯವಾಗಿ ಬರೆದ ನಂತರವೇ ಪ್ರೊಫಾರ್ಮದ ನಮೂನೆಯಲ್ಲಿ ಉತ್ತರಪತ್ರಿಕೆ ವಾಪಸ್ಸು ಪಡೆದ ನಂತರ ಸಹಿ ಮಾಡಿಸುವ ಕಾಲಂನಲ್ಲಿ ಸಹಿ ಪಡೆಯುವುದು.

**ಪರೀಕ್ಷಾ ದಿನದಂದು ಲಾಂಗ್ ಬೆಲ್ ಹೊಡೆಯುವ ಸಮಯದ ಬಗ್ಗೆ**

ಎಸ್.ಎಸ್.ಎಲ್.ಸಿ. ಪರೀಕ್ಷಾ ದಿನದಂದು ಪರೀಕ್ಷೆಯು ಬೆಳಿಗ್ಗೆ 9.30 ರಿಂದ ಪ್ರಾರಂಭವಾಗುತ್ತಿದ್ದು, ಬೆಳಿಗ್ಗೆ 9.15ಕ್ಕೆ ಪರೀಕ್ಷಾ ಕೇಂದ್ರದ ಪರೀಕ್ಷಾ ಕೊಠಡಿಗಳಲ್ಲಿ ವಿದ್ಯಾರ್ಥಿಗಳು ಆಸೀನರಾಗಲು ಮೊದಲ ಲಾಂಗ್ ಬೆಲ್ ಮಾಡಲಾಗುವುದು. ಬೆಳಿಗ್ಗೆ 9.15ಕ್ಕೆ ಲಾಂಗ್‌ಬೆಲ್ ಆದ ನಂತರ ಪರೀಕ್ಷಾ ಅಭ್ಯರ್ಥಿಗಳು ಹಾಗೂ ಕೊಠಡಿ ಮೇಲ್ವಿಚಾರಕರು ನಿಗದಿಪಡಿಸಿದ ಪರೀಕ್ಷಾ ಕೊಠಡಿಗೆ ಹಾಜರಾಗುವುದು. ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳಿಗೆ ಮುಖ್ಯ ಉತ್ತರಪತ್ರಿಕೆಗಳನ್ನು ವಿತರಿಸುತ್ತಾರೆ. ಸಮಯ ಬೆಳಿಗ್ಗೆ 9.25ಕ್ಕೆ ಎರಡನೆಯ ಲಾಂಗ್ ಬೆಲ್ ಮಾಡಲಾಗುವುದು. ಎರಡನೆಯ ಲಾಂಗ್ ಬೆಲ್ ಆದ ನಂತರ ಪರೀಕ್ಷಾ ಕೊಠಡಿವಾರು ಮುಖ್ಯ ಅಧೀಕ್ಷಕರು ಹಾಗೂ ಕಸ್ಟೋಡಿಯನ್‌ರವರು ಪ್ರಶ್ನೆಪತ್ರಿಕೆಯ ಲಕೋಟೆಗಳನ್ನು ಕೊಠಡಿ ಮೇಲ್ವಿಚಾರಕರಿಗೆ ವಿತರಿಸುತ್ತಾರೆ. ಬೆಳಿಗ್ಗೆ 9.30ಕ್ಕೆ ಮೂರನೆಯ ಲಾಂಗ್ ಬೆಲ್ ಆದ ನಂತರ ಅಭ್ಯರ್ಥಿಗಳಿಗೆ ಪ್ರಶ್ನೆಪತ್ರಿಕೆಗಳನ್ನು ವಿತರಿಸಲಾಗುತ್ತದೆ. ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಪ್ರಾರಂಭವಾದ ಸಮಯ ಬೆಳಗ್ಗೆ 9.30 ರಿಂದ 9.45ರವರೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೊಠಡಿಯ ಪ್ರವೇಶಕ್ಕೆ ಅವಕಾಶ ಮಾಡಿಕೊಡಲು ಅನುಮತಿ ನೀಡಿದೆ. ಅಂದರೆ ಪರೀಕ್ಷೆ ಪ್ರಾರಂಭವಾದ ನಂತರ 15 ನಿಮಿಷ ತಡವಾಗಿ ಬಂದರೂ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ.

**II. <u>ಖಾಸಗಿ ಪ್ರೌಢಶಾಲೆಗಳ ನೋಂದಣಿ ಮತ್ತು ಮಾನ್ಯತೆ :-</u>**

- The Karnataka Education Act-1983 ನಿಯಮ-30, 31, 33, 36 ಹಾಗೂ 38 ರನ್ವಯ ಖಾಸಗಿ ಪ್ರೌಢಶಾಲೆಗಳು ನೊಂದಣಿ ಮತ್ತು ಮಾನ್ಯತೆಯನ್ನು ಕಡ್ಡಾಯವಾಗಿ ನವೀಕರಿಸಬೇಕು ಹಾಗೂ ಪ್ರೌಢಶಾಲೆಯಲ್ಲಿ ಬೋಧನೆ ಮಾಡುವ ಮಾಧ್ಯಮಗಳಿಗನುಗುಣವಾಗಿ ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆಯು ನವೀಕರಣವಾಗಿರಬೇಕು.
- 2018-19ನೇ ಸಾಲಿನ ಮಾನ್ಯತೆ ನವೀಕರಣವನ್ನು ಸಕ್ಷಮ ಪ್ರಾಧಿಕಾರದಿಂದ ಸಕಾಲದಲ್ಲಿ ಪಡೆಯುವುದು.

**III. <u>ಆಡಳಿತ ವಿಭಾಗ :-</u>**

**<u>ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳನ್ನು ಕೆಳಕಂಡಂತೆ ವರ್ಗೀಕರಿಸಲಾಗಿದೆ:-</u>**

**1. <u>ಶಾಲಾ ಅಭ್ಯರ್ಥಿಗಳು</u>:-**

- ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ–1966ರ **ChapterVI** ನಿಯಮ–37(**i**)(**ii**) ಮತ್ತು **Annexure-III** ನಿಯಮ–7ರನ್ವಯ, ರಾಜ್ಯದ ಅಧಿಕೃತ ಪ್ರೌಢ ಶಾಲೆಯಲ್ಲಿ 8 ರಿಂದ 10ನೇ ತರಗತಿಯವರೆಗೆ ವಿದ್ಯಾರ್ಥಿ ವ್ಯಾಸಂಗ ಮಾಡಿರಬೇಕು ಇಂತಹ ವಿದ್ಯಾರ್ಥಿಯನ್ನು ಶಾಲಾ ವಿದ್ಯಾರ್ಥಿಯೆಂದು ಪರಿಗಣಿಸಲಾಗುತ್ತದೆ.

- 2018–19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಸರ್ಕಾರಿ ಮತ್ತು ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನ ರಹಿತ ಶಾಲಾ ಕಾಲೇಜುಗಳಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಶಾಲಾ ಅಭ್ಯರ್ಥಿಗಳೆಂದು ಪರಿಗಣಿಸಿದೆ. ಈ ವರ್ಗದ ಸಂಕೇತ ಸಿ.ಸಿ.ಇ.–**ಆರ್.ಎಫ್.**(**CCERF**) ಎಂದು ವರ್ಗೀಕರಿಸಿದೆ.

**2. <u>ಪುನರಾವರ್ತಿತ ಅಭ್ಯರ್ಥಿಗಳು:–</u>**

- ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ **CCE** ಪದ್ಧತಿಯಲ್ಲಿ ಪರೀಕ್ಷೆಗೆ ಕುಳಿತು ಅನುತ್ತೀರ್ಣರಾಗಿದ್ದು, ಪುನಃ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ಅರ್ಹ ವಿದ್ಯಾರ್ಥಿಗಳನ್ನು **CCERR** ಎಂಬುದಾಗಿ ವರ್ಗೀಕರಿಸಲಾಗಿದೆ.
- ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ 2015ಕ್ಕಿಂತ ಪೂರ್ವದಲ್ಲಿ **ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಕುಳಿತು ಅನುತ್ತೀರ್ಣರಾಗಿದ್ದು, ಪುನ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ತೆಗೆದುಕೊಳ್ಳುವ ಅರ್ಹ ವಿದ್ಯಾರ್ಥಿಗಳನ್ನು NSR** ಎಂಬುದಾಗಿ ವರ್ಗೀಕರಿಸಲಾಗಿದೆ.

**<u>ಈ NSR ಅಭ್ಯರ್ಥಿಗಳನ್ನು ಕೆಳಕಂಡಂತೆ ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ.</u>**

1) 2002 ಮತ್ತು ಅದಕ್ಕಿಂತ ಹಿಂದಿನ ವರ್ಷಗಳ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು.
2) 2003 ರಿಂದ 2015ಕ್ಕಿಂತ ಪೂರ್ವದಲ್ಲಿನ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ಅಭ್ಯರ್ಥಿಗಳು.

**<u>3. ಖಾಸಗಿ ಅಭ್ಯರ್ಥಿಗಳು:–</u>**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ–1966ರ **ChapterVI** ನಿಯಮ–39(**i**)(**iii**)(**iv**), **40,42,43** ಮತ್ತು **Annexure-III** ನಿಯಮ–9**(a)(b),10,11** ರನ್ವಯ, ಖಾಸಗಿ ಅಭ್ಯರ್ಥಿಯಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗಬಹುದು. ಖಾಸಗಿ ಅಭ್ಯರ್ಥಿಯಾಗಿ ಹಾಜರಾಗಲು ಬಯಸುವ ಅಭ್ಯರ್ಥಿಗಳು ಆಯಾ ವರ್ಷದ ಮಾರ್ಚ್–1ನೇ ತಾರೀಖಿಗೆ 15 ವರ್ಷ ವಯೋಮಿತಿ ಹೊಂದಿರಬೇಕು ಹಾಗೂ ಜಿಲ್ಲಾ ಉಪನಿರ್ದೇಶಕರುಗಳ ಕಛೇರಿಗಳಲ್ಲಿ ನೊಂದಾವಣೆ ಮಾಡಿಸಿಕೊಂಡಿರಬೇಕು.

ಮಾನ್ಯತೆ ಪಡೆದ ಮತ್ತು ಶಾಲಾ ಸಂಕೇತ ಪಡೆದ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡದಿರುವ/ಅರ್ಧದಲ್ಲಿಯೇ ವ್ಯಾಸಂಗ ಮೊಟಕುಗೊಳಿಸಿರುವ ಅಥವಾ ದಿನಾಂಕ:01.03.2019**ಕ್ಕೆ** 15 ವರ್ಷಗಳ ವಯೋಮಾನ ಪೂರ್ಣಗೊಳಿಸಿ ನೇರವಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಲು ಅಪೇಕ್ಷಿಸುವವರನ್ನು ಖಾಸಗಿ ಅಭ್ಯರ್ಥಿಗಳೆಂದು ಪರಿಗಣಿಸಲಾಗುತ್ತದೆ. ಇವರುಗಳು ತಮ್ಮ ಹೆಸರು ಮತ್ತು ಇತರೆ ವಿವರಗಳನ್ನು ಸಂಬಂಧಿಸಿದ ಶಾಲೆಗಳ ಮುಖಾಂತರ ನೋಂದಣಿ ಶುಲ್ಕ ರೂ.180+5=ರೂ.185/– ಪಾವತಿಸಿ ಜಿಲ್ಲಾ ಉಪನಿರ್ದೇಶಕರವರ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಈ ಹಿಂದಿನ ವರ್ಷಗಳಲ್ಲಿ ಉಪನಿರ್ದೇಶಕರ ಕಛೇರಿಯಲ್ಲಿ ನಿಗದಿತ ನೋಂದಣಿ ಶುಲ್ಕ ಪಾವತಿಸಿ ನೋಂದಣಿ ಮಾಡಿಸಿಕೊಂಡು ಆ ವರ್ಷದಲ್ಲಿ ಪರೀಕ್ಷೆ ತೆಗೆದುಕೊಳ್ಳದಿದ್ದಲ್ಲಿ ಪ್ರಸ್ತಕ ಸಾಲಿಗೆ ರೂ.50/–ನ್ನು ಪಾವತಿಸಿ ನವೀಕರಿಸಿಕೊಂಡು ಪರೀಕ್ಷೆಗೆ ಹಾಜರಾಗಬಹುದು. ಈ ವರ್ಗದ ಸಂಕೇತ ಸಿ.ಸಿ.ಇ.ಪಿ.ಎಫ್.(**CCEPF**) ಎಂದು ವರ್ಗೀಕರಿಸಿದೆ. ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ:**15.10.2018** ಆಗಿರುತ್ತದೆ. ಖಾಸಗಿ ಅಭ್ಯರ್ಥಿಯಾಗಿ ನೋಂದಾವಣೆ ಮಾಡಿಕೊಂಡ ವಿದ್ಯಾರ್ಥಿಗಳು **ಪ್ರಸಕ್ತ ಸಾಲಿನ ಪಠ್ಯಪುಸ್ತಕಗಳನ್ನು ಅಭ್ಯಾಸಮಾಡಿ ಪರೀಕ್ಷೆಗೆ ಹಾಜರಾಗಬೇಕಾಗಿರುತ್ತದೆ.**

**ಏಪ್ರಿಲ್–2011 ಮತ್ತು ನಂತರದ ಅವಧಿಗಳಲ್ಲಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು ಸತತ 06 ಪ್ರಯತ್ನಗಳಲ್ಲಿ ತೇರ್ಗಡೆಯಾಗಬೇಕು.** ಇಲ್ಲವಾದಲ್ಲಿ, ಖಾಸಗಿ ಅಭ್ಯರ್ಥಿಗಳಾಗಿ ಪುನಃ ಎಲ್ಲಾ 06 ವಿಷಯಗಳಿಗೆ ಪರೀಕ್ಷೆ ಬರೆಯಬೇಕಾಗುತ್ತದೆ. ಇವರುಗಳಿಗೂ ಸಹ ಮೇಲೆ ವಿವರಿಸಿದಂತೆ ಖಾಸಗಿ ಅಭ್ಯರ್ಥಿಗಳಿಗೆ ಅನುಸರಿಸುವ ವಿಧಿವಿಧಾನಗಳನ್ನು ಪಾಲಿಸಬೇಕಾಗುತ್ತದೆ.

**ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು:–**

- **CCE** ಪದ್ಧತಿಯಲ್ಲಿ ಪರೀಕ್ಷೆಗೆ ಕುಳಿತು ಅನುತ್ತೀರ್ಣರಾಗಿದ್ದು, ಪುನಃ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ಅರ್ಹ ಖಾಸಗಿ ಅಭ್ಯರ್ಥಿಗಳನ್ನು **CCEPR** ಎಂಬುದಾಗಿ ವರ್ಗೀಕರಿಸಲಾಗಿದೆ.
- 2015ಕ್ಕಿಂತ ಪೂರ್ವದಲ್ಲಿ ಎಸ್.ಎಸ್.ಎಲ್.ಸಿ. **ಪರೀಕ್ಷೆಗಳಲ್ಲಿ ಕುಳಿತು ಅನುತ್ತೀರ್ಣರಾಗಿದ್ದು, ಪುನಃ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ಅರ್ಹ ಖಾಸಗಿ ಅಭ್ಯರ್ಥಿಗಳನ್ನು NSPR** ಎಂಬುದಾಗಿ ವರ್ಗೀಕರಿಸಲಾಗಿದೆ.

**ಈ NSPR ಅಭ್ಯರ್ಥಿಗಳನ್ನು ಕೆಳಕಂಡಂತೆ ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ.**

1. 2002 ಮತ್ತು ಅದಕ್ಕಿಂತ ಹಿಂದಿನ ವರ್ಷಗಳ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು.
2. 2003 ರಿಂದ 2015ಕ್ಕಿಂತ ಪೂರ್ವದಲ್ಲಿನ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ಅಭ್ಯರ್ಥಿಗಳು.

- ಈ ಅಭ್ಯರ್ಥಿಗಳು ಪ್ರಸಕ್ತ ಸಾಲಿನ ಪಠ್ಯಪುಸ್ತಕಗಳನ್ನು ಅಭ್ಯಾಸಮಾಡಿ ಏಪ್ರಿಲ್–2019ರ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗುತ್ತದೆ.

**IV. ಅರ್ಜಿಗಳ ಸ್ವರೂಪ:–**

**ಶಾಲಾ ವಿದ್ಯಾರ್ಥಿಗಳ** (CCERF), **ಖಾಸಗಿ ಅಭ್ಯರ್ಥಿಗಳ** (CCEPF), **ಪುನರಾವರ್ತಿತ ಅಭ್ಯರ್ಥಿಗಳ** (CCERR, CCEPR) ಮತ್ತು NSR } → (2003 ರಿಂದ 2015ಕ್ಕಿಂತ ಪೂರ್ವದಲ್ಲಿನ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ
NSPR } ಅಭ್ಯರ್ಥಿಗಳು)

ಪರೀಕ್ಷಾ ಅರ್ಜಿಗಳನ್ನು SATS ಜಾಲತಾಣದ ಮೂಲಕ ಸಲ್ಲಿಸುವುದು. ಇದೇ ಸಮಯದಲ್ಲಿ ವಿದ್ಯಾರ್ಥಿಗಳ ಭಾವಚಿತ್ರ 25 ರಿಂದ 30 kb ಹಾಗೂ ಸಹಿಯನ್ನು 12 ರಿಂದ 15 kb ಯಲ್ಲಿ ಅಪ್‌ಲೋಡ್ ಮಾಡುವುದು.

**ಎಂ.ಎಸ್.ಎ. ಅರ್ಜಿಗಳು:–**

- 2002 ಮತ್ತು ಅದಕ್ಕಿಂತ ಹಿಂದಿನ ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ NSR ಮತ್ತು NSPR ಪುನರಾವರ್ತಿತ ಅಭ್ಯರ್ಥಿಗಳ ವಿವರಗಳನ್ನು ಶಾಲೆಯಲ್ಲಿ ಲಭ್ಯವಿರುವ ಎಂಎಸ್‌ಎ ಹಾಗೂ ಶಾಲೆಯಲ್ಲಿ ಲಭ್ಯವಿಲ್ಲದಿದ್ದಲ್ಲಿ ಸಂಬಂಧಿಸಿದ ವಿಭಾಗೀಯ ಕಛೇರಿಯಿಂದ ದ್ವಿತೀಯ ಪ್ರತಿ ಎಂಎಸ್‌ಎಯನ್ನು ಪಡೆದು ಅದರಲ್ಲಿರುವಂತೆ ಮಾಹಿತಿಯನ್ನು SATS ಜಾಲತಾಣದಲ್ಲಿ ದಾಖಲಿಸುವುದು. ನಂತರ ಸದರಿ ಎಂಎಸ್‌ಎಗಳನ್ನು ಮಂಡಳಿಗೆ ಭೌತಿಕವಾಗಿ ರವಾನಿಸುವುದು ಕಡ್ಡಾಯವಾಗಿರುತ್ತದೆ.

**V. ಪರೀಕ್ಷಾ ಶುಲ್ಕ:–** ಸರ್ಕಾರದ ಆದೇಶ ಸಂಖ್ಯೆ:ಇಡಿ.355.ಎಸ್.ಎಲ್.ಬಿ.2017, ದಿನಾಂಕ:06.01.2018 ರನ್ವಯ ಏಪ್ರಿಲ್–2019ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ವಿದ್ಯಾರ್ಥಿಗಳ ವಿವರ | ಶುಲ್ಕದ ವಿವರ |
|---|---|---|
| 1 | ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ಶಾಲಾ ಅಭ್ಯರ್ಥಿಗಳು (CCERF) ಮತ್ತು ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ಖಾಸಗಿ ಅಭ್ಯರ್ಥಿಗಳು (CCEPF) | ಪರೀಕ್ಷಾ ಶುಲ್ಕ ರೂ.440/– + ರೂ.20/– (ಲ್ಯಾಮಿನೇಷನ್ ಶುಲ್ಕ) **ಒಟ್ಟು ರೂ.460/– (ಪ್ರತಿ ವಿದ್ಯಾರ್ಥಿಗೆ)** |
| 2 | ಪುನರಾವರ್ತಿತ ಅಭ್ಯರ್ಥಿಗಳು:(CCERR+CCEPR+NSR+NSPR)<br>1. ಒಂದು ವಿಷಯಕ್ಕೆ | ಪ್ರತಿ ವಿದ್ಯಾರ್ಥಿಗೆ<br>ರೂ.290/ |

| | | |
|---|---|---|
| | 2. ಎರಡು ವಿಷಯಕ್ಕೆ<br>3. ಮೂರು ವಿಷಯ ಹಾಗೂ ಮೂರಕ್ಕಿಂತ ಹೆಚ್ಚಿನ ವಿಷಯಗಳಿಗೆ | ರೂ.350/<br>ರೂ.470/- |
| 3 | ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ | ರೂ.180/-+ರೂ.5/- ಅರ್ಜಿ ಶುಲ್ಕ (ಪ್ರತಿ ವಿದ್ಯಾರ್ಥಿಗೆ) |
| 4 | ಖಾಸಗಿ ಅಭ್ಯರ್ಥಿಗಳ ನೋಂದಣಿ ನವೀಕರಣ ಶುಲ್ಕ | ರೂ.50/- ಪ್ರತಿ ವಿದ್ಯಾರ್ಥಿಗೆ |

- ಪ್ರಥಮ ಬಾರಿಗೆ ಪರೀಕ್ಷೆಗೆ ಕುಳಿತುಕೊಳ್ಳುವ ಎಲ್ಲಾ ವರ್ಗದ ವಿದ್ಯಾರ್ಥಿಗಳು ಅಂಕಪಟ್ಟಿಯ ಲ್ಯಾಮಿನೇಷನ್ ಶುಲ್ಕ ರೂ.20/-(ರೂ.ಇಪ್ಪತ್ತು ಮಾತ್ರ) ಗಳನ್ನು ಕಡ್ಡಾಯವಾಗಿ ಪಾವತಿಸಬೇಕು. **ಯಾವುದೇ ವಿದ್ಯಾರ್ಥಿಗೂ ಲ್ಯಾಮಿನೇಷನ್ ಶುಲ್ಕ ಪಾವತಿಯಿಂದ ವಿನಾಯಿತಿ ಇರುವುದಿಲ್ಲ.**
- ಪುನರಾವರ್ತಿತ ವಿದ್ಯಾರ್ಥಿಗಳು ಪುನ: ಲ್ಯಾಮಿನೇಷನ್ ಶುಲ್ಕ ಪಾವತಿಸುವ ಅಗತ್ಯವಿಲ್ಲ.
- **ಶಾಲಾ ಮುಖ್ಯೋಪಾಧ್ಯಾಯರು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಯ ಪರೀಕ್ಷಾ ಶುಲ್ಕ ಪ್ರತಿ ವಿದ್ಯಾರ್ಥಿಗೆ ರೂ.440=00ಗಳನ್ನು ಮಂಡಳಿಗೆ ಪಾವತಿಸುವ ಸಂದರ್ಭದಲ್ಲಿ, SATS ಜಾಲತಾಣದಲ್ಲಿ ವಿದ್ಯಾರ್ಥಿಗಳ ಮಾಹಿತಿ ನೋಂದಣಿ ಮಾಡುವ ಹಾಗೂ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದ ವೆಚ್ಚ ಪ್ರತಿ ವಿದ್ಯಾರ್ಥಿಗೆ ರೂ.20/- ರಂತೆ (ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಸೇರಿದಂತೆ) ಕಟಾಯಿಸಿಕೊಂಡು ಉಳಿದ ಮೊತ್ತ ರೂ.420=00 ಗಳಂತೆ (ಪ್ರತಿ ವಿದ್ಯಾರ್ಥಿಗೆ) ಪಾವತಿಸುವುದು.**
- CCERF, CCEPF, CCERR, CCEPR, NSR ಮತ್ತು NSPR ಅಭ್ಯರ್ಥಿಗಳ ಪರೀಕ್ಷಾ ನೋಂದಣಿಯನ್ನು

SATS ಜಾಲತಾಣದ ಮೂಲಕವೇ ಅಪ್‌ಲೋಡ್ ಮಾಡಬೇಕು. ನಿಗದಿಪಡಿಸಿದ ಅವಧಿಯೊಳಗೆ ನೋಂದಣಿ ಪ್ರಕ್ರಿಯೆ ಪೂರ್ಣ ಗೊಂಡ ನಂತರ ಶಾಲಾವಾರು ಪರೀಕ್ಷಾ ಶುಲ್ಕ ಪಾವತಿಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ ಚಲನ್ ಜನರೇಟ್ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಸದರಿ ಚಲನ್ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ನಮೂದಿಸಿರುವ ಮೊತ್ತವನ್ನು ಅದೇ ಚಲನ್ ಬಳಸಿ NEFT ಮೂಲಕ ಶುಲ್ಕವನ್ನು ಬ್ಯಾಂಕಿನಲ್ಲಿ ಪಾವತಿಸುವುದು.

## VI. ಪರೀಕ್ಷಾ ಶುಲ್ಕ ವಿನಾಯಿತಿ:

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ. ಈ ವಿದ್ಯಾರ್ಥಿಗಳ ಜಾತಿ ಪ್ರಮಾಣ ಪತ್ರಗಳನ್ನು ಕಳುಹಿಸುವ ಅಗತ್ಯವಿರುವುದಿಲ್ಲ.
2. ಹಿಂದುಳಿದ ವರ್ಗಗಳ ಇಲಾಖೆಯ ಸರ್ಕಾರಿ ಆದೇಶದ ಸಂಖ್ಯೆ: ಬಿ.ಸಿ.ಡಬ್ಲ್ಯೂ 07 ಬಿ.ಎಂ. ಎಸ್-2015 ಬೆಂಗಳೂರು ದಿನಾಂಕ:24.01.2015ರ ಅನ್ವಯ ಮೊದಲ ಬಾರಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳುವ (FRESHERS ONLY) ವಿವಿಧ ಪ್ರವರ್ಗಗಳ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದ ವಿನಾಯಿತಿ ಇರುತ್ತದೆ. ಈ ಸೌಲಭ್ಯ ಪಡೆಯಲು ಬಯಸುವ ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ ಹಾಗೂ ಪ್ರವರ್ಗ-3ಎ, ಪ್ರವರ್ಗ-3ಬಿ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳ/ ಪೋಷಕರ ವಾರ್ಷಿಕ ಆದಾಯ ಮಿತಿ ಕೆಳಕಾಣಿಸಿದಂತೆ ನಿಗದಿಗೊಳಿಸಿದೆ (ಹೆಚ್ಚಿನ ವಿವರಗಳಿಗೆ ಸಂಬಂಧಿಸಿದ ಹಿಂದುಳಿದ ವರ್ಗಗಳ ಕಛೇರಿಯನ್ನು ಸಂಪರ್ಕಿಸತಕ್ಕದ್ದು).

| **ನಿಗದಿಪಡಿಸಿರುವ ವಾರ್ಷಿಕ ಆದಾಯ ಮಿತಿ** | |
|---|---|
| **ಪ್ರವರ್ಗ-1 ರಲ್ಲಿ ಬರುವ ವಿದ್ಯಾರ್ಥಿಗಳಿಗೆ** | **ಪ್ರವರ್ಗ-2ಎ, 2ಬಿ, 3ಎ ಮತ್ತು 3ಬಿ ಗಳಿಗೆ** |
| ರೂ.1.00 ಲಕ್ಷ (ಒಂದು ಲಕ್ಷ ರೂಪಾಯಿಗಳು ಮಾತ್ರ) | ರೂ.44,500/- (ನಲವತ್ತಾಲ್ಕು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) |

ಪ್ರವರ್ಗ ಗುಂಪಿನಲ್ಲಿ ಬರುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯಲು ಸಕ್ಷಮ ಪ್ರಾಧಿಕಾರದಿಂದ ಪಡೆದ **ಜಾತಿ ಮತ್ತು ಆದಾಯ ಪ್ರಮಾಣ ಪತ್ರ**ಗಳ ಆರ್ ಡಿ ಸಂಖ್ಯೆಯನ್ನು SATS ಜಾಲತಾಣದಲ್ಲಿ

ನಮೂದಿಸುವುದು ಕಡ್ಡಾಯವಾಗಿರುತ್ತದೆ. ಮತ್ತು ಈ ಪ್ರಮಾಣಪತ್ರಗಳನ್ನು ಶಾಲೆಯಲ್ಲಿ ಸಂರಕ್ಷಿಸಿ ಇಡಲು ತಿಳಿಸಿದೆ. ಆದ್ದರಿಂದ ಶಾಲೆಯ ಮುಖ್ಯ ಗುರುಗಳು ಪರೀಕ್ಷಾ ಶುಲ್ಕದ ವಿನಾಯಿತಿಯನ್ನು ದೃಢೀಕರಿಸುವ ಸಂದರ್ಭದಲ್ಲಿಯೇ ವಿದ್ಯಾರ್ಥಿಗಳಿಂದ/ ಪೋಷಕರಿಂದ ಈ ಪ್ರಮಾಣಪತ್ರಗಳನ್ನು ಪಡೆಯತಕ್ಕದ್ದು, **ಈ ಪ್ರಮಾಣ ಪತ್ರಗಳನ್ನು ಸಲ್ಲಿಸದೇ ಶುಲ್ಕ ವಿನಾಯಿತಿ ನೀಡುವಂತಿಲ್ಲ**. ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸಲು ಸಾಧ್ಯವಾಗದೇ ಇರುವ ಸಂದರ್ಭಗಳಲ್ಲಿ, ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಮಂಡಳಿಗೆ ಪಾವತಿಸಬೇಕಾಗುತ್ತದೆ. ಈ ಅಂಶವನ್ನು ಎಲ್ಲಾ ಮುಖ್ಯ ಗುರುಗಳು ತಪ್ಪದೇ ಪಾಲಿಸತಕ್ಕದ್ದು ಹಾಗೂ ಈ ಬಗ್ಗೆ ಅನಗತ್ಯವಾಗಿ ಮಂಡಳಿಗೆ ಪತ್ರ ವ್ಯವಹಾರ ಮಾಡತಕ್ಕದ್ದಲ್ಲ.

3. ಪ್ರವರ್ಗಗಳಿಗೆ ಸೇರಿದ ಹಾಗೂ ಪರೀಕ್ಷಾ ಶುಲ್ಕ ವಿನಾಯಿತಿ ಪಡೆದ ಅರ್ಹ ವಿದ್ಯಾರ್ಥಿಗಳ ಜಾತಿ ಮತ್ತ ಆದಾಯ ಪ್ರಮಾಣ ಪತ್ರಗಳ ಪ್ರತಿಗಳನ್ನು ಮುಖ್ಯೋಪಾಧ್ಯಾಯರು ದೃಢೀಕರಿಸಿ ಮಂಡಳಿಗೆ ಸಲ್ಲಿಸಬೇಕು. ಈ ಪ್ರಮಾಣ ಪತ್ರಗಳನ್ನು ಲಗತ್ತಿಸದೆ ಶುಲ್ಕ ಪಾವತಿಸಿಲ್ಲದಿದ್ದ ಸಂದರ್ಭದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರವನ್ನು ನೀಡಲಾಗುವುದಿಲ್ಲ. ಆದ್ದರಿಂದ ಪ್ರವರ್ಗದ ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ಪಡೆಯುವಲ್ಲಿ ಮುಖ್ಯೋಪಾಧ್ಯಾಯರು ಬಹಳ ಮುನ್ನೆಚ್ಚರಿಕೆ ವಹಿಸುವಂತೆ ತಿಳಿಸಿದೆ.

4. ಪ.ಜಾ/ಪ.ಪಂ ಪುನರಾವರ್ತಿತ ಅಭ್ಯರ್ಥಿಗಳಿಗೆ ಮಾತ್ರ ಶುಲ್ಕ ವಿನಾಯಿತಿ ಇರುತ್ತದೆ.

5. ಮೇಲೆ ವಿವರಿಸಿರುವ ಹಿಂದುಳಿದ ಪ್ರವರ್ಗಗಳ ಪುನರಾವರ್ತಿತ ಅಭ್ಯರ್ಥಿಗಳಿಗೆ (REPEATERS) ಪರೀಕ್ಷಾ ಶುಲ್ಕದ ವಿನಾಯಿತಿ ಇರುವುದಿಲ್ಲ.

6. ಸರ್ಕಾರಿ ಆದೇಶದ ಸಂಖ್ಯೆ:ಇಡಿ.119.ಯೋಯೋಕಾ, ದಿನಾಂಕ:16.07.2001ರ ಅನ್ವಯ ಸರ್ಕಾರಿ ಪ್ರೌಢ ಶಾಲೆ/ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶಾಲಾ ಅಭ್ಯರ್ಥಿಗಳಾಗಿ ಪ್ರಥಮ ಬಾರಿಗೆ ಎಸ್.ಎಸ್. ಎಲ್.ಸಿ. ಪರೀಕ್ಷೆಗೆ ಹಾಜರಾಗುವ ಹೆಣ್ಣುಮಕ್ಕಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ.

7. ಸರ್ಕಾರಿ ಆದೇಶದ ಸಂಖ್ಯೆ:ಇಡಿ.98.ಎಸ್.ಎಕ್ಸ್.ಎಂ.98, ದಿನಾಂಕ:20.01.1997 ಕಿವುಡ/ ಮೂಗ/ ಅಂಧತ್ವ ಹಾಗೂ ಅರ್ಬುದ ರೋಗಗಳಿಂದ ನರಳುತ್ತಿರುವ ಶಾಲಾ ಅಭ್ಯರ್ಥಿ/ ಖಾಸಗಿ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ. ಈ ಸೌಲಭ್ಯ ಪಡೆಯಲು ಜಿಲ್ಲಾ ಆರೋಗ್ಯಾಧಿಕಾರಿಗಳ ವೈದ್ಯಕೀಯ ಪ್ರಮಾಣ ಪತ್ರ ಪಡೆದು ಶಾಲಾ ಮುಖ್ಯಸ್ಥರಿಗೆ ಹಾಜರು ಪಡಿಸಬೇಕು. ಎಲ್ಲಾ ಮುಖ್ಯೋಪಾಧ್ಯಾಯರು ಮಂಡಳಿ ಸರಬರಾಜು ಮಾಡಿರುವ ಮಾರ್ಗದರ್ಶಿ ಪುಸ್ತಕದಲ್ಲಿ ಮತ್ತು ಸರ್ಕಾರದ ಆದೇಶಗಳಲ್ಲಿ ನಮೂದಿಸಿರುವ ಸೌಲಭ್ಯಗಳನ್ನು ಈ ವಿದ್ಯಾರ್ಥಿಗಳಿಗೆ ಒದಗಿಸಲು ತಿಳಿಸಿದೆ.

## VII. ಪರೀಕ್ಷಾ ಶುಲ್ಕವನ್ನು ಪಾವತಿಸುವ ಸ್ವರೂಪ:–

**ಪರೀಕ್ಷಾ ಶುಲ್ಕವನ್ನು ಪ್ರಸಕ್ತ ಸಾಲಿನಲ್ಲಿ ಆನ್‌ಲೈನ್ ಚಲನ್ ಜನರೇಟ್ ಮಾಡಿಕೊಂಡು ಬ್ಯಾಂಕ್ ಮುಖಾಂತರವೇ ಭರಿಸಬೇಕಾಗಿರುತ್ತದೆ. CCERF, CCEPF, CCERR, CCEPR, NSR ಮತ್ತು NSPR ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿಯ ಲ್ಯಾಮಿನೇಷನ್ ಶುಲ್ಕವನ್ನು ಒಟ್ಟಿಗೆ ಸೇರಿಸಿ ಪಾವತಿ ಮಾಡಬೇಕಾಗಿರುತ್ತದೆ. ಯಾವುದೇ ಕಾರಣಕ್ಕೂ ಹುಂಡಿಗಳನ್ನು ಖರೀದಿಸಬಾರದಾಗಿ ತಿಳಿಸಿದೆ. ಒಂದು ವೇಳೆ ಖರೀದಿಸಿ ಮಂಡಳಿಗೆ ಸಲ್ಲಿಸಿದರೆ ಅಂತಹ ಹುಂಡಿಗಳನ್ನು ತಿರಸ್ಕರಿಸಲಾಗುವುದು.**

**VII. ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ವಿದ್ಯಾರ್ಥಿಗಳ ನೋಂದಣಿ:**

1. ಕೇಂದ್ರ ಪಠ್ಯಕ್ರಮ ಸಿ.ಬಿ.ಎಸ್.ಇ., ಐಸಿಎಸ್ಇ ಹಾಗೂ ಹೊರ ರಾಜ್ಯ ಪಠ್ಯಕ್ರಮಗಳಿಂದ ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ವಿದ್ಯಾರ್ಥಿಗಳು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ ರೂ.1,000+ರೂ.10=ಒಟ್ಟು ರೂ.**1010**/–ಗಳ ನೋಂದಣಿ ಶುಲ್ಕ ಸಲ್ಲಿಸಿ ರಾಜ್ಯ ಪಠ್ಯಕ್ರಮಕ್ಕೆ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ರಾಜ್ಯ ಪಠ್ಯಕ್ರಮದಲ್ಲಿ ಅಭ್ಯಾಸ ಮಾಡಲು ಜಿಲ್ಲಾ ಉಪನಿರ್ದೇಶಕರ ಪೂರ್ವಾನುಮತಿ ಪಡೆಯುವುದು ಕಡ್ಡಾಯ. ಈ ಆದೇಶದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು. ವಲಸೆ ಬಂದ ವಿದ್ಯಾರ್ಥಿಗಳ ಮಾಹಿತಿಯನ್ನು ಸಲ್ಲಿಸುವುದು.

**ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬಂದ ವಿದ್ಯಾರ್ಥಿಗಳು ಮತ್ತು ಖಾಸಗಿ ವಿದ್ಯಾರ್ಥಿಗಳ ನೋಂದಣಿ ಶುಲ್ಕಗಳನ್ನು ಬ್ಯಾಂಕ್ NEFT ಚಲನ್ ಮೂಲಕ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಾವತಿಸುವಂತೆ ಜಿಲ್ಲಾ ಉಪನಿರ್ದೇಶಕರುಗಳು ಕ್ರಮವಹಿಸಬೇಕು.**

**NEFT ಚಲನ್ ಮುಖೇನ ಪಾವತಿ ಮಾಡುವ ವಿವರ :**

| ಕ್ರಮಸಂಖ್ಯೆ | ವಿವರಗಳು | ಉದ್ದೇಶಿತ ಕೋಡ್ |
|---|---|---|
| 1 | ಖಾಸಗಿ ವಿದ್ಯಾರ್ಥಿಗಳ ನೋಂದಣಿ ಶುಲ್ಕ | S-14 |
| 2 | ರಾಜ್ಯ ಪಠ್ಯಕ್ರಮ ಬದಲಾವಣೆಯ ನೋಂದಣಿ ಶುಲ್ಕ | S-15 |

ಸದರಿ ಶುಲ್ಕವನ್ನು ಕಳೆದ ಸಾಲಿನಂತೆ ನೆಫ್ಟ್ ಚಲನ್ ಮೂಲಕ ಪಾವತಿಸುವುದು.

ಶಾಲಾ ಸಂಕೇತದೊಂದಿಗೆ ಉದ್ದೇಶದ ಕೋಡ್ ಬಳಸಿ **NEFT ಚಲನ್ ಭರ್ತಿ** ಮಾಡಿ ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಪಾವತಿಸಬೇಕು. ನೋಂದಣಿ ಶುಲ್ಕ ಪಾವತಿಸಿದ ಬಗ್ಗೆ ಚಲನ್‌ನಲ್ಲಿ ಬ್ಯಾಂಕಿನ ಮೊಹರು ಮತ್ತು ಟಿ.ಎಸ್.ಎಲ್. ಅಥವಾ ಯು.ಟಿ.ಆರ್ (TSL or UTR) ಸಂಖ್ಯೆ ಇರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

ಪಾವತಿಸಿದ ಮೂಲ ಚಲನ್ ಪ್ರತಿಗಳನ್ನು ಲಗತ್ತಿಸಿ, ಪೂರ್ಣ ವಿವರಗಳೊಂದಿಗೆ ಕ್ರೂಢೀಕೃತ ವರದಿಯನ್ನು ಮಂಡಳಿಗೆ ದಿನಾಂಕ:20.11.2018 ರೊಳಗಾಗಿ ಸಲ್ಲಿಸಬೇಕು.

## NEFT ಚಲನ್ ಹಾಗೂ ಅರ್ಜಿಗಳನ್ನು ಸಲ್ಲಿಸಲು ನಿಗಧಿಗೊಳಿಸಿರುವ ದಿನಾಂಕಗಳ ವಿವರ.

| ಕ್ರ ಸಂ | ವಿವರ | ನಿಗಧಿಪಡಿಸಿರುವ ದಿನಾಂಕ |
|---|---|---|
| 1 | SATS ಮೂಲಕ CCERF, CCEPF, CCERR , CCEPR, NSR ಮತ್ತು NSPR ವಿದ್ಯಾರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡಲು ನಿಗದಿಪಡಿಸಿದ ದಿನಾಂಕ | 01.10.2018 |
| 2 | SATS ಮೂಲಕ CCERF, CCEPF CCERR , CCEPR, NSR ಮತ್ತು NSPR ವಿದ್ಯಾರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕ: | 20.10.2018 |
| 3 | SATS ಮೂಲಕ CCERF, CCEPF, CCERR , CCEPR, NSR ಮತ್ತು NSPR ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ಚಲನ್ ಮುದ್ರಿಸಿಕೊಂಡು ನೆಫ್ಟ್ ಮೂಲಕ ಬ್ಯಾಂಕ್‌ಗೆ ಜಮೆ ಮಾಡಲು ನಿಗಧಿಪಡಿಸಿದ ದಿನಾಂಕ | 01.11.2018 ರಿಂದ 16.11.2018 |
| 4 | 2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪುನರಾವರ್ತಿತ ಅಭ್ಯರ್ಥಿಗಳ (NSR & NSPR) ಎಂಎಸ್‌ಎ, ನಾಮಿನಲ್‌ರೋಲ್ ಮತ್ತು ಸಂಬಂಧಿಸಿದ ದಾಖಲೆಗಳನ್ನು ಮಂಡಳಿಗೆ ಸಲ್ಲಿಸಲು ಕೊನೆಯ ದಿನಾಂಕ | 20.11.2018 |

5. **ಪರೀಕ್ಷಾ ಅರ್ಜಿಗಳ ಸಂಕೇತ ಮತ್ತು ಅರ್ಜಿ ಸಲ್ಲಿಸುವ ವಿಧಾನ :–**

| ಕ್ರಮ ಸಂ. | ವಿದ್ಯಾರ್ಥಿಗಳ ವರ್ಗೀಕರಣ | ಸಂಕೇತ | ಅರ್ಜಿ ನಮೂನೆಯ ಸ್ವರೂಪ |
|---|---|---|---|
| 1 | ಶಾಲಾ ಅಭ್ಯರ್ಥಿಗಳು | ಸಿಸಿಇಆರ್‌ಎಫ್ , CCERF | SATS |
| 2 | ಖಾಸಗಿ ಅಭ್ಯರ್ಥಿಗಳು | ಸಿಸಿಇಪಿಎಫ್, CCEPF | SATS |
| 3 | ಪುನರಾವರ್ತಿತ ಅಭ್ಯರ್ಥಿಗಳು | ಸಿಸಿಇಆರ್‌ಆರ್, CCERR | SATS |
| | | ಎನ್‌ಎಸ್‌ಆರ್ – NSR (2003 ಮತ್ತು ನಂತರ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ) | SATS |
| | | ಎನ್‌ಎಸ್‌ಆರ್ – NSR (2002 ಮತ್ತು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು) | SATS ಮತ್ತು ಎಂ.ಎಸ್.ಎ |
| 4 | ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು | ಸಿಸಿಇಪಿಆರ್ – CCEPR | SATS |
| | | ಎನ್‌ಎಸ್‌ಪಿಆರ್ - NSPR (2003 ಮತ್ತು ನಂತರ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ) | SATS |
| | | ಎನ್‌ಎಸ್‌ಪಿಆರ್ - NSPR (2002 ಮತ್ತು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು) | SATS ಮತ್ತು ಎಂ.ಎಸ್.ಎ |

**ಶಾಲಾ ಸಂಕೇತ:**

ಶಾಲಾ ಮುಖ್ಯಸ್ಥರು ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಮಂಡಳಿಗೆ ಸಲ್ಲಿಸುವ ಮುನ್ನ ಮಂಡಳಿಯಿಂದ ಶಾಲಾ ಸಂಕೇತ ಪಡೆಯುವುದು ಕಡ್ಡಾಯ. ಶಾಲಾ ಸಂಕೇತವಿಲ್ಲದೆ ಅರ್ಜಿಗಳನ್ನು ಸಲ್ಲಿಸತಕ್ಕದ್ದಲ್ಲ.

1. ಕೆಲವು ಶಾಲೆಗಳಲ್ಲಿ 10ನೇ ತರಗತಿ ಪ್ರಾರಂಭವಾಗಿ ಸುಮಾರು 5 ರಿಂದ 6 ವರ್ಷಗಳಾದರೂ ಮಾನ್ಯತೆ ಪಡೆಯದೇ ಪರೀಕ್ಷಾ ಮಂಡಳಿಯಿಂದ ಶಾಲಾ ಸಂಕೇತ ಪಡೆಯದೆ ಅರ್ಜಿಗಳನ್ನು ಸಲ್ಲಿಸುತ್ತಿರುವುದು ಮಂಡಳಿ ಗಮನಿಸಿದೆ.

2. ಶಾಲಾ ಸಂಕೇತ ಪಡೆಯದ ಸಂಸ್ಥೆಯನ್ನು ಪರೀಕ್ಷಾ ಮಂಡಳಿ ಮಾನ್ಯ ಮಾಡುವುದಿಲ್ಲ. ಈ ಶಾಲೆಗಳು ಮಾನ್ಯತೆ ಪಡೆಯದೇ ಇದ್ದಲ್ಲಿ / ಮಂಡಳಿಯಿಂದ ಶಾಲಾ ಸಂಕೇತ ಸಂಖ್ಯೆಯನ್ನು ಪಡೆಯದಿದ್ದಲ್ಲಿ, ಇಂತಹ ಶಾಲೆಗಳಿಂದ ಸಲ್ಲಿಕೆಯಾಗುವ ಅರ್ಜಿಗಳನ್ನು ಖಾಸಗಿ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು. ಖಾಸಗಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅನುಸರಿಸಬೇಕಾದ ಕ್ರಮಗಳನ್ನೇ ಇಂತಹ ಪ್ರಕರಣಗಳಲ್ಲಿ ಪಾಲಿಸಬೇಕಾಗುತ್ತದೆ.

3. ಶಾಲಾ ಸಂಕೇತ ಅರ್ಜಿ ನಮೂನೆಯಲ್ಲಿ ವಿವರವಾದ ಮಾಹಿತಿಯನ್ನು ಭರ್ತಿ ಮಾಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಉಪನಿರ್ದೇಶಕರು ದೃಢೀಕರಿಸುವುದು. ದೃಢೀಕರಿಸದ ಅರ್ಜಿಯನ್ನು ಮಾನ್ಯ ಮಾಡುವುದಿಲ್ಲ.

4. ಪ್ರೌಢಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡಿರುವ ಆದೇಶದ ಪ್ರತಿಯನ್ನು ದೃಢೀಕರಿಸಿ

5. ಸಲ್ಲಿಸುವುದು ಕಡ್ಡಾಯ.

6. ಪ್ರಸ್ತುತ ವರ್ಷದ ಶೈಕ್ಷಣಿಕ ವರ್ಷಕ್ಕೆ ಮಾನ್ಯತೆ/ಮಾನ್ಯತೆ ನವೀಕರಣದ ಪ್ರತಿಗೆ ದೃಢೀಕರಿಸಿ ಸಲ್ಲಿಸುವುದು ಕಡ್ಡಾಯ.

7. ಸರ್ಕಾರಿ ಪ್ರೌಢ ಶಾಲೆ / ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ)ಆದಲ್ಲಿ ಶಾಲಾಸಂಕೇತಕ್ಕಾಗಿ ನಿಗದಿಪಡಿಸಿದ ರೂ 5000/– ಹಾಗೂ ಖಾಸಗಿ ಪ್ರೌಢಶಾಲೆಗಳಿಗೆ ಶಾಲಾ ಸಂಕೇತಕ್ಕಾಗಿ ನಿಗದಿಪಡಿಸಿದ ರೂ. 10,000/– ಮೊತ್ತವನ್ನು ಮಂಡಳಿಯ ಓಇಈಖಿ ಚಲನ್ ಮುಖೇನ ಪಾವತಿಸುವುದು.

8. ಈ ಮೇಲ್ಕಂಡ ಅಗತ್ಯ ದಾಖಲೆಗಳೊಂದಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು / ಉಪನಿರ್ದೇಶಕರು ಇವರಿಂದ ಪ್ರತಿ ಪುಟವಾರು ದೃಢೀಕರಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳು / ಉಪನಿರ್ದೇಶಕರಿಂದ ಪ್ರಸ್ತಾವನೆ ಸಲ್ಲಿಸುವುದು.

. ಸರ್ಕಾರಿ ಪ್ರೌಢಶಾಲೆಗಳಲ್ಲಿ ಕನ್ನಡ, ಆಂಗ್ಲ ಮಾಧ್ಯಮಗಳೆರಡೂ ಇದ್ದಲ್ಲಿ ಈಗಾಗಲೇ ಪಡೆದಿರುವ ಶಾಲಾ ಸಂಕೇತವನ್ನೇ ಮುಂದುವರೆಸುವುದು.

- ಶಾಲೆಯನ್ನು ಪ್ರಸ್ತುತ ಇರುವ ವಿಳಾಸದಿಂದ ತಾಲ್ಲೂಕಿನೊಳಗೆ/ ಜಿಲ್ಲೆಯೊಳಗೆ/ ಅಂತರ ಜಿಲ್ಲೆಯೊಳಗೆ ಸ್ಥಳಾಂತರಿಸಿದ ಸಂದರ್ಭದಲ್ಲಿ, ಸದರಿ ಶಾಲೆಯನ್ನು ಹೊಸ ಶಾಲೆ ಎಂದು ಪರಿಗಣಿಸಿ, ಅದೇ ಶಾಲಾ ಸಂಕೇತವನ್ನು ಮುಂದುವರೆಸುವುದಕ್ಕಾಗಲೀ ಅಥವಾ ಬೇರೆ ಶಾಲಾ ಸಂಕೇತವನ್ನು ನೀಡುವುದಕ್ಕಾಗಲೀ ಪ್ರಸ್ತಾವನೆಯೊಂದಿಗೆ ರೂ.10,000/– ಗಳನ್ನು ನೆಫ್ಟ್ ಚಲನ್ ಮೂಲಕ ಮಂಡಳಿಗೆ ಪಾವತಿಸಬೇಕಾಗುತ್ತದೆ.
- ಶಾಲಾ ಸಂಕೇತದ ದ್ವಿತೀಯ ಪ್ರತಿಯನ್ನು(SECOND COPY)ಪಡೆಯಲು ರೂ.2,000/– (ಎರಡು ಸಾವಿರ ಮಾತ್ರ) ಪಾವತಿಸಬೇಕಾಗುತ್ತದೆ.
- ನಿಗದಿಪಡಿಸಿರುವ ಶುಲ್ಕಗಳನ್ನು ನೆಫ್ಟ್ ಚಲನ್ ಮುಖೇನ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸಿರಬೇಕು.
- ದಿನಾಂಕ:15.10.2018 ರೊಳಗಾಗಿ ಶಾಲಾ ಸಂಕೇತ ಪಡೆಯುವುದು ಕಡ್ಡಾಯ.

**NEFT ಚಲನ್ ಮುಖೇನ ಪಾವತಿ ಮಾಡುವ ವಿವರ :**

| ಕ್ರ.ಮಸಂಖ್ಯೆ | ವಿವರಗಳು | ಉದ್ದೇಶಿತ ಕೋಡ್ |
|---|---|---|
| 1 | ಹೊಸ ಶಾಲಾ ಸಂಕೇತ ಪಡೆಯಲು ನೋಂದಣಿ ಶುಲ್ಕ | S-12 |

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
|---|---|---|---|---|---|---|---|---|---|---|---|---|---|---|---|---|---|
| K | S | E | - | - | - | - | - | - | - | - | - | - | - | - | **S** | **1** | **2** |

## XI. ವಿಭಿನ್ನ ಸಾಮರ್ಥ್ಯವುಳ್ಳ(Differently Abled) ಮಕ್ಕಳಿಗೆ ನೀಡುವ ಸೌಲಭ್ಯಗಳು ಮತ್ತು ವಿನಾಯಿತಿ:

ಭಾರತ ಸರ್ಕಾರದ Ministry of Social Justice and Empowerment Department of Disability Affairs ಸಂಸ್ಥೆಯ ಪತ್ರ ಸಂಖ್ಯೆ:F.No.16-110/2003-DDIII ದಿನಾಂಕ:26.02.2013 ಹಾಗೂ ಕರ್ನಾಟಕ ಸರ್ಕಾರ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸುತ್ತೋಲೆ ಸಂಖ್ಯೆ:ವಿಹಿನಾಸಿಇ/ ಅಧಿನಿಯಮ/07/2012–13, ದಿನಾಂಕ:20.05.2013 ರನ್ವಯ ಕೆಳಕಂಡ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಿದೆ.

1. ಸರ್ಕಾರದ ಆದೇಶದ ಸಂಖ್ಯೆ:ಮಮಅ.65.ಪಿಹೆಚ್‌ಪಿ.2000, ಬೆಂಗಳೂರು ದಿನಾಂಕ:10.03.2000 ರನ್ವಯ, ಅಧಿಕೃತ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಸ್ಪಾಸ್ಟಿಕ್/ ಕಿವುಡು/ ಮೂಗ ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿಮಾಂದ್ಯ ವಿದ್ಯಾರ್ಥಿಗಳು ಶಿಕ್ಷಣ ಮಾಧ್ಯಮದ ಭಾಷೆಯ ಒಂದನ್ನು ಮಾತ್ರ ತೆಗೆದುಕೊಳ್ಳಬಹುದು. ಉಳಿದ ಎರಡು ಭಾಷಾ ವಿಷಯಗಳಿಗೆ ವಿನಾಯಿತಿ ಇರುತ್ತದೆ. ಈ ಬಗ್ಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಂದ ಅನುಮತಿ ಪಡೆದುಕೊಳ್ಳುವುದು. ನೇರವಾಗಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಬಾರದು ಈ ವಿಷಯದಲ್ಲಿ ಅಂತಹ ವಿದ್ಯಾರ್ಥಿಯ, ಪೋಷಕರಿಗೆ ಅನವಶ್ಯಕ ತೊಂದರೆ ನೀಡಬಾರದಾಗಿ ತಿಳಿಸಿದೆ.
2. ಭಾಷಾ ವಿನಾಯಿತಿಗಳ ಪ್ರಸ್ತಾವನೆಗಳನ್ನು ಜಿಲ್ಲಾ ಉಪನಿರ್ದೇಶಕರು ಕೂಲಂಕುಷವಾಗಿ ಪರಿಶೀಲಿಸಿ ವಿನಾಯಿತಿ ನೀಡುವ ಭಾಷಾ ವಿಷಯ ಮತ್ತು ವಿಷಯ ಸಂಕೇತಗಳನ್ನು ವಿವರಿಸಿರಬೇಕು. ವಿಕಲಚೇತನ(Physicaly challenged) ಮತ್ತು ಅಂಧ ವಿದ್ಯಾರ್ಥಿಗಳಿಗೆ ಭಾಷಾ ವಿನಾಯಿತಿ ನೀಡಲು ಅವಕಾಶವಿರುವುದಿಲ್ಲ. ಇದನ್ನು ಹೊರತುಪಡಿಸಿ ಉಳಿದಂತೆ ನೀಡುವ ಸೌಲಭ್ಯಗಳನ್ನು ವಿವರಿಸಿದ್ದು, ಅದರಂತೆ ಕ್ರಮವಹಿಸುವುದು.
3. ವಿಕಲ ಚೇತನ ಮಕ್ಕಳು ಬರಹಗಾರರ/ ಓದುಗಾರರ/ ಪ್ರಯೋಗ ಶಾಲಾ ಸಹಾಯಕರ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. ಬರಹಗಾರರ/ ಓದುಗಾರರ/ ಪ್ರಯೋಗ ಶಾಲಾ ಸಹಾಯಕರನ್ನು ಆಯ್ಕೆ ಮಾಡಿಕೊಳ್ಳುವುದು ವಿದ್ಯಾರ್ಥಿಗಳ ವಿವೇಚನೆಗೆ ಬಿಟ್ಟಿದ್ದು, ಅವರಿಗೆ ಯಾವುದೇ ವಿದ್ಯಾರ್ಹತೆ ಮತ್ತು ವಯೋಮಿತಿಯನ್ನು ನಿಗದಿಪಡಿಸುವಂತಿಲ್ಲ. ಬರಹಗಾರರ/ ಓದುಗಾರರ/ ಪ್ರಯೋಗ ಶಾಲಾ ಸಹಾಯಕರನ್ನು ಮಧ್ಯದಲ್ಲಿ ಬದಲಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
4. ವಿಕಲಚೇತನ ಮಕ್ಕಳಿಗೆ 3–00 ಗಂಟೆ ಅವಧಿಯ ಪರೀಕ್ಷೆಗೆ 1–00 ಗಂಟೆ "ಪರಿಹಾರ ಅವಧಿ"(Compensatory time) ಎಂಬುದಾಗಿ ಪರಿಗಣಿಸುವುದು. ಸದರಿ ಅಭ್ಯರ್ಥಿಗಳಿಗೆ ಸೂಕ್ತ ಆಸನ ವ್ಯವಸ್ಥೆಯನ್ನು ನೆಲಮಹಡಿಯಲ್ಲಿರುವಂತೆ ಮಾಡುವುದು.
5. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.142.ಯೋಯೋಕ.2009, ದಿನಾಂಕ:16.07.2009 ರನ್ವಯ ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳು ನಿಮ್ಹಾನ್ಸ್/ ಅಖಿಲ ಭಾರತ ದೃಕ್–ಶ್ರವಣ ಸಂಸ್ಥೆ ಮೈಸೂರು/ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ಮನ:ಶಾಸ್ತ್ರಜ್ಞರು/ ಕನಿಷ್ಠ ಎಂ.ಫಿಲ್. ವಿದ್ಯಾರ್ಹತೆ ಹೊಂದಿರುವ ಕ್ಲಿನಿಕಲ್ ಮನ:ಶಾಸ್ತ್ರಜ್ಞರು ನೀಡಿರುವ ಪ್ರಮಾಣ ಪತ್ರಕ್ಕೆ ಜಿಲ್ಲಾ ಸರ್ಜನ್ ಶ್ರೇಣಿಗಿಂತಲೂ ಕಡಿಮೆ ಇಲ್ಲದ ಸರ್ಕಾರಿ ವೈದ್ಯರಿಂದ ದೃಢೀಕರಣ ಅಥವಾ ಮಲ್ಲೇಶ್ವರಂ ಡಿಸ್ ಲೆಕ್ಸಿಯಾ ಅಸೋಷಿಯೇಷನ್(ರಿ), ಬೆಂಗಳೂರು ಅಥವಾ ಭಾರತ ದೇಶದ ಯಾವುದೇ ಭಾಗದಿಂದ ಅಧೀಕೃತ ಜಿಲ್ಲಾ ಸರ್ಜನ್‌ಗಿಂತಲೂ ಕಡಿಮೆ ಇಲ್ಲದ ವೈದ್ಯರಿಂದ ಪಡೆದ ಪ್ರಮಾಣ ಪತ್ರವನ್ನು ಮುಖ್ಯ ಶಿಕ್ಷಕರು ತಮ್ಮ ಹಂತದಲ್ಲಿಯೇ ಸಂರಕ್ಷಿಸಿಡುವುದು ಕಡ್ಡಾಯ. ಈ ಅಧಿಸೂಚನೆಯ ನಗಧಿತ ಅವಧಿಯ ನಂತರ ವಿನಾಯಿತಿ ಕೋರಿ ಬರುವ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ. ಈ ಬಗ್ಗೆ ವಿನಾಯಿತಿ ಪಡೆದುಕೊಳ್ಳಲು ಮುಖ್ಯಶಿಕ್ಷಕರು ಪೂರ್ವಭಾವಿ ಕ್ರಮವಹಿಸಿ ಜಿಲ್ಲಾ ಉಪನಿರ್ದೇಶಕರ ಅನುಮತಿ ಪಡೆದು ಅಂತಹ ವಿದ್ಯಾರ್ಥಿಗಳಿಗೆ ಸದರಿ ಸೌಲಭ್ಯ ಒದಗಿಸುವುದು ಮುಖ್ಯಶಿಕ್ಷಕರ ಆಧ್ಯ ಕರ್ತವ್ಯವಾಗಿರುತ್ತದೆ. ಸದರಿ ಮಾಹಿತಿಯನ್ನು ಎಸ್‌ಎಟಿಎಸ್ ಜಾಲತಾಣದಲ್ಲಿ ಭರ್ತಿ ಮಾಡುವಾಗ ಈ ವಿಷಯವನ್ನು ಕ್ರಮಬದ್ಧವಾಗಿ ದಾಖಲಿಸುವುದು ಕಡ್ಡಾಯವಾಗಿರುತ್ತದೆ.

6. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.142.ಯೋಯೋಕಾ.2008, ದಿ:21.02.2009ರ ಅನ್ವಯ, ರಾಜ್ಯದಲ್ಲಿ ಮಾನ್ಯತೆ ಪಡೆದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕಲಿಕಾ ನ್ಯೂನತೆ ಹೊಂದಿರುವ ಮಕ್ಕಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಈ ಕೆಳಕಂಡ ಸೌಲಭ್ಯವನ್ನು ಒದಗಿಸಲಾಗಿದೆ.

- ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯಲೇಟರ್ ಉಪಯೋಗಿಸಲು ಅನುಮತಿಸಲಾಗಿದೆ.
- ಈ ಮಕ್ಕಳಿಗೆ ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿ ಸಹಾಯಕರನ್ನು ಪಡೆಯಲು ಅನುಮತಿಸಿದೆ.

**ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳಿಗೆ ನೀಡಬಹುದಾದ ವಿಶೇಷ ಸೌಲಭ್ಯದ ವಿವರಗಳನ್ನು ಕೆಳಕಂಡಂತೆ ವಿವರಿಸಲಾಗಿದೆ:–**

| ನ್ಯೂನ್ಯತೆ | ಸೌಲಭ್ಯಗಳು/ವಿನಾಯಿತಿಗಳು |
|---|---|
| ಕಿವುಡ ಮತ್ತು ಮೂಗ<br>Deaf & Dumb | ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿಯಿರುತ್ತದೆ. ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಕಲಿಕಾ ನ್ಯೂನ್ಯತೆ / ಡಿಸ್‌ಲೆಕ್ಸಿಯಾ<br>(Dyslexia)<br>Specific learning disability | ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿ ಇರುತ್ತದೆ<br>ಗಣಿತ ಹಾಗೂ ವಿಜ್ಞಾನ ವಿಷಯಗಳ ಬದಲು ಸಮಾಜಶಾಸ್ತ್ರ–95, ಅರ್ಥಶಾಸ್ತ್ರ–96, ರಾಜ್ಯಶಾಸ್ತ್ರ–97, ಕರ್ನಾಟಕಸಂಗೀತ ಅಥವಾ ಹಿಂದೂಸ್ತಾನಿಸಂಗೀತ–98 ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ಸಮಾಜವಿಜ್ಞಾನದ ಜೊತೆಗೆ ಆಯ್ಕೆಮಾಡಿಕೊಳ್ಳಬಹುದು.<br>ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿಯೇ ಸಹಾಯಕರನ್ನು ಪಡೆದುಕೊಳ್ಳಲು ಅವಕಾಶವಿರುವುದು.<br>ಇಂತಹ ಮಕ್ಕಳು ಮಾಡುವ ಸಣ್ಣಪುಟ್ಟ ದೋಷಗಳನ್ನು ಮೌಲ್ಯಮಾಪನದಲ್ಲಿ ಪರಿಗಣಿಸುವುದಿಲ್ಲ<br>ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯುಲೇಟರ್ ಉಪಯೋಗಿಸಲು ಅನುಮತಿಸಲಾಗಿದೆ.<br>ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ |
| ಬುದ್ಧಿಮಾಂದ್ಯ<br>Mentally Challenged | ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿಯಿರುತ್ತದೆ. ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಅಂಧ ವಿದ್ಯಾರ್ಥಿಗಳು/ ದೃಷ್ಟಿಮಾಂದ್ಯ ವಿದ್ಯಾರ್ಥಿ/ ಕ್ಷೀಣ ದೃಷ್ಟಿ (Low vision) | ಗಣಿತ ಹಾಗೂ ವಿಜ್ಞಾನ ವಿಷಯಗಳ ಬದಲು ಸಮಾಜಶಾಸ್ತ್ರ–95, ಅರ್ಥಶಾಸ್ತ್ರ–96, ರಾಜ್ಯಶಾಸ್ತ್ರ–97, ಕರ್ನಾಟಕಸಂಗೀತ ಅಥವಾ ಹಿಂದೂಸ್ತಾನಿಸಂಗೀತ–98 ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ಸಮಾಜ ವಿಜ್ಞಾನದ ಜೊತೆಗೆ ಆಯ್ಕೆಮಾಡಿಕೊಳ್ಳ ಬಹುದು. ಬರಹಗಾರರ ಸೌಲಭ್ಯ ನೀಡಲಾಗುವುದು, ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಮೆದುಳಿನ ಪಾರ್ಶ್ವವಾಯು, ಬಲತೋಳಿನ ಮತ್ತು ಬಲಗೈನ ಕೆಳತುದಿಯು ಸರಿಯಾಗಿ ಬೆಳವಣಿಗೆಯನ್ನು ಹೊಂದದೆ ಇರುವುದು, ಬಲಗೈ ಇದ್ದ ವ್ಯಕ್ತಿಯು ದಿನನಿತ್ಯದ ಕಾರ್ಯಗಳಿಗೆ ಬಲಗೈಯನ್ನೇ ಬಳಸುತ್ತಿದ್ದು ಎಡಗೈಯಲ್ಲಿ ಬರೆಯುವುದರಿಂದ ಬರವಣಿಗೆ ನಿಧಾನವಾಗುತ್ತದೆ ಎನ್ನುವವರಿಗೆ | **ಹೆಚ್ಚುವರಿ ಸಮಯ ನೀಡುವ ಸೌಲಭ್ಯ**<br>2.30 ಹಾಗೂ 3.00 ಗಂಟೆಗಳ ಅವಧಿಯ ಪ್ರಶ್ನೆ ಪತ್ರಿಕೆಗೆ ಒಂದು ಗಂಟೆ<br>2 ಗಂಟೆಗಳ ಅವಧಿಯ ಪ್ರಶ್ನೆ ಪತ್ರಿಕೆಗೆ 45 ನಿಮಿಷಗಳು<br>1 ಗಂಟೆಯ ಅವಧಿಯ ಪ್ರಶ್ನೆ ಪತ್ರಿಕೆಗೆ 30 ನಿಮಿಷಗಳು |
| ಎಲ್ಲಾ ರೀತಿಯ ನ್ಯೂನ್ಯತೆ<br>Other Disability | ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆಯಲು ನೆಲಮಹಡಿಯಲ್ಲಿ ಸೂಕ್ತ ಆಸನ ವ್ಯವಸ್ಥೆ ಮಾಡುವುದು.ಇಂತಹ ಮಕ್ಕಳನ್ನು ಗುರುತಿಸಲು ಪ್ರಶ್ನೋತ್ತರ ಪತ್ರಿಕೆಗಳಿಗೆ ಹಸಿರು ಸ್ಟಿಕ್ಕರ್ ಅಂಟಿಸುವುದು. |

ಪರೀಕ್ಷಾ ಸಮಯದಲ್ಲಿ ಸೆರೆಬ್ರಲ್‌ಪಾಲ್ಸಿ, ಆಟಿಸಂ, ಪಾರ್ಶ್ವವಾಯು, ಕುಷ್ಠರೋಗ ಹಾಗೂ ವಿವಿಧ ಇತರೆ ನ್ಯೂನ್ಯತೆಯಿರುವ ವಿದ್ಯಾರ್ಥಿ ಸೌಲಭ್ಯ ಪಡೆಯಲು ಅಪೇಕ್ಷಿಸಿದರೆ ಸೂಕ್ತ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಹೆಚ್ಚುವರಿ ಸಮಯ ಬರಹಗಾರರ, ಓದುಗಾರರ ಸೌಲಭ್ಯ ನೀಡುವ ಅಧಿಕಾರ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗಿರುತ್ತದೆ.

2018–19ನೇ ಸಾಲಿನಲ್ಲಿ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂಧ/ವಿಶೇಷ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನ ವಿಷಯದ ಬದಲಾಗಿ ವಿದ್ಯಾರ್ಥಿಗಳು ತೆಗೆದುಕೊಳ್ಳಬಹುದಾದ ಸಮಾಜಶಾಸ್ತ್ರ, ಅರ್ಥಶಾಸ್ತ್ರ ಹಾಗೂ ರಾಜ್ಯಶಾಸ್ತ್ರ ವಿಷಯಗಳನ್ನು ಪ್ರಸ್ತುತ ಪಠ್ಯಕ್ರಮದಲ್ಲಿ ಬೋಧನೆ ಮಾಡಲು ಹಾಗೂ ಪಬ್ಲಿಕ್ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ಮುಖ್ಯಶಿಕ್ಷಕರು ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

## XII. ಭಾಷಾ ಸಂಯೋಜನೆ:

1.ಅಭ್ಯರ್ಥಿಗಳು ತೆಗೆದುಕೊಳ್ಳಬೇಕಾದ ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಗಳ ಸಂಯೋಜನೆ ಬಗ್ಗೆ ಪರಿಪೂರ್ಣ ವಿವರಣೆಗಳನ್ನು 1999–2000 ರಿಂದ ಜಾರಿಗೊಂಡ ಪರಿಷ್ಕೃತ ಪಠ್ಯವಸ್ತುವಿನಲ್ಲಿ ವಿವರಿಸಲಾಗಿದೆ. ಆ ಕೋಷ್ಠಕದಂತೆ ಭಾಷಾ ಸಂಯೋಜನೆಯನ್ನು ರಾಜ್ಯದ ಭಾಷಾ ನೀತಿಯಂತೆ ಕಡ್ಡಾಯವಾಗಿ ತೆಗೆದುಕೊಂಡಿರಬೇಕು. ಆಯ್ಕೆ ಮಾಡಿಕೊಂಡಿರುವ ಭಾಷಾ ಸಂಯೋಜನೆ ಶಾಲೆಯಲ್ಲಿ ಬೋಧಿಸುತ್ತಿರುವ ಪಠ್ಯಕ್ರಮಕ್ಕೆ ಪೂರಕವಾಗಿರಬೇಕು. ಇದಕ್ಕೆ ಯಾವುದೇ ವಿನಾಯಿತಿ ನೀಡುವ ಪ್ರಶ್ನೆ ಬರುವುದಿಲ್ಲ. **(ಭಾಷಾ ಸಂಯೋಜನೆ ವಿವರಗಳನ್ನು ಅನುಬಂಧ–ಅ ನಲ್ಲಿ ವಿವರಿಸಲಾಗಿದೆ.) ಈ ಭಾಷಾ ಸಂಯೋಜನೆಯನ್ನು ಮುಖ್ಯಶಿಕ್ಷಕರು ಮತ್ತು ಶಾಲಾ ಸಿಬ್ಬಂದಿ ಅತಿ ಎಚ್ಚರಿಕೆಯಿಂದ ಸಂಯೋಜನೆ ಮಾಡಿ SATSನಲ್ಲಿ ನಮೂದು ಮಾಡುವುದು. ಈ ಭಾಷಾ ಸಂಯೋಜನೆಯನ್ನು ನಿಯಮಬದ್ದವಾಗಿ ಮಾಡದೇ ಇರುವ ಮುಖ್ಯಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರ ಮೇಲೆ ಸೂಕ್ತಕ್ರಮ ಜರುಗಿಸಲಾಗುವುದು.**

2. ಏಪ್ರಿಲ್–2012 ಮತ್ತು 2015ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಿಂದ ಕ್ರಮವಾಗಿ **ಕೊಂಕಣಿ ಮತ್ತು ತುಳು** ಭಾಷೆಗಳನ್ನು **ತೃತೀಯ** ಭಾಷೆಯನ್ನಾಗಿ ಅಭ್ಯಾಸ ಮಾಡಲು ಅವಕಾಶ ಕಲ್ಪಿಸಿದೆ. ತೃತೀಯ ಭಾಷೆ ಕೊಂಕಣಿ ವಿಷಯದ ಸಂಕೇತ–Subject code 68D/K ಎಂದು ನಿಗದಿಪಡಿಸಿದೆ. ತೃತೀಯ ತುಳು ಭಾಷೆಯ ವಿಷಯ ಸಂಕೇತ 69D/K ಎಂದು ನಿಗದಿಪಡಿಸಿದೆ. ಕೊಂಕಣಿ ಮತ್ತು ತುಳು ಭಾಷೆಗಳನ್ನು ಬೋಧಿಸುತ್ತಿರುವ ಶಾಲಾ ಮುಖ್ಯಶಿಕ್ಷಕರು ಎಚ್ಚರಿಕೆಯಿಂದ ಅಂತಹ ವಿದ್ಯಾರ್ಥಿಗಳಿಗೆ ಸೂಚನೆ ನೀಡಿ ನಿಖರವಾಗಿ ನಮೂದಿಸಲು ಕ್ರಮ ವಹಿಸುವುದು.

3. ಪರೀಕ್ಷಾ ಮಂಡಳಿಯಿಂದ ಪ್ರವೇಶ ಪತ್ರಗಳನ್ನು ವಿತರಿಸಿದ ನಂತರ ವಿದ್ಯಾರ್ಥಿಯ ಭಾಷಾ ವಿಷಯದಲ್ಲಾಗಲಿ ಅಥವಾ ಮಾಧ್ಯಮದ ವಿಷಯದಲ್ಲಾಗಲಿ, ಶಾಲಾ ಹಂತದಲ್ಲಿ ಅಥವಾ ಪರೀಕ್ಷಾ ಕೇಂದ್ರದಲ್ಲಿ ಬದಲಾವಣೆ ಮಾಡಲು ಅವಕಾಶವಿಲ್ಲ. ಆದರೆ ಹಿಂದಿನ ವರ್ಷಗಳಲ್ಲಿ ಕೆಲವು ಶಾಲಾ ಮುಖ್ಯಸ್ಥರು ಹಾಗೂ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅನುಮತಿ ಪಡೆಯದೇ ಭಾಷಾ ವಿಷಯಗಳನ್ನು ಮತ್ತು ಮಾಧ್ಯಮವನ್ನು ಅವರ ಹಂತದಲ್ಲೇ ಬದಲಾವಣೆ ಮಾಡಿರುವ ಪ್ರಕರಣಗಳು ಕಂಡುಬಂದಿದೆ. ಈ ಕ್ರಮ ಸರಿಯಲ್ಲ ಆದ್ದರಿಂದ ಪರೀಕ್ಷಾ ಮಂಡಳಿಯಿಂದ ಒಮ್ಮೆ ಪ್ರವೇಶಪತ್ರ ವಿತರಣೆಯಾದ ನಂತರ ಶಾಲಾ ಮುಖ್ಯಸ್ಥರು ಅಥವಾ ಪರೀಕ್ಷಾ ಕೇಂದ್ರದ ಅಧೀಕ್ಷಕರು ತಮ್ಮ ಹಂತದಲ್ಲೇ ಯಾವುದಾದರೂ ಬದಲಾವಣೆ ಮಾಡಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ನಿಯಮದಂತೆ ಶಿಸ್ತುಕ್ರಮ ಜರುಗಿಸಲಾಗುವುದು ಮತ್ತು ಸಂಬಂಧಪಟ್ಟ ವಿದ್ಯಾರ್ಥಿಯ ಪರೀಕ್ಷಾ ಫಲಿತಾಂಶವನ್ನು ತಡೆಹಿಡಿಯಲಾಗುವುದು.

4. ಕ್ಲಸ್ಟರ್ ಪರೀಕ್ಷಾ ಕೇಂದ್ರಗಳ ವಿಧಾನವು ಈ ವರ್ಷವೂ ಮುಂದುವರಿಯುತ್ತದೆ.

## XIII. ಮಕ್ಕಳ ಹಾಜರಾತಿ:

1. ಮಂಡಳಿಯ ಕಾಯ್ದೆ–1966 ನಿಯಮ–37 ರನ್ವಯ, ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳಲು 2018–19ನೇ ಸಾಲಿನಲ್ಲಿ ಶಾಲೆಯು ಕಾರ್ಯ ನಿರ್ವಹಿಸಲು ನಿಗದಿಪಡಿಸಿರುವ ದಿನಗಳಿಗೆ ಅನುಸಾರ ಕನಿಷ್ಠ ಶೇ.75ರಷ್ಟು ಹಾಜರಾತಿ ಕಡ್ಡಾಯ. ಪರೀಕ್ಷಾ ಮಂಡಳಿಯ ನಿಯಮ–1966 ಚಾಪ್ಟರ್–Vl ನಿಯಮ–37(2)(i) ರಂತೆ 15 ದಿನಗಳವರೆಗೆ ಹಾಜರಾತಿ ವಿನಾಯಿತಿ ನೀಡಲು ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರುಗಳು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ. ಮಂಡಳಿಯ ನಿಯಮ–1966 ಚಾಪ್ಟರ್–Vl ನಿಯಮ37(2)(ii) ರಂತೆ 15 ದಿನಗಳಿಗೂ ಮೇಲ್ಪಟ್ಟು 30 ದಿನಗಳವರೆಗೆ ಹಾಜರಾತಿ ವಿನಾಯಿತಿ ಪ್ರಸ್ತಾವನೆಯನ್ನು ಮಂಡಳಿಗೆ ಸಲ್ಲಿಸಿ ಅನುಮತಿ ಪಡೆಯಬೇಕಾಗಿರುತ್ತದೆ. 30ಕ್ಕೂ ಹೆಚ್ಚು ದಿನಗಳ ಹಾಜರಾತಿ ಕೊರತೆ ಇದ್ದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ.

2. ವೈದ್ಯಕೀಯ ಪ್ರಮಾಣಪತ್ರದ ಆಧಾರದ ಮೇಲೆ 30 ದಿವಸಗಳಿಗೂ ಮೀರಿದ ಅವಧಿಗೆ ಹಾಜರಾತಿ ವಿನಾಯಿತಿ ನೀಡುವ ಪ್ರಸ್ತಾವನೆಗಳು ಬಂದಿರುವುದನ್ನು ಮಂಡಳಿ ಗಮನಿಸಿದೆ. ಆದರೆ ಯಾವುದೇ ಸಂದರ್ಭದಲ್ಲಿಯೂ 30 ದಿವಸಗಳಿಗೆ ಮೀರಿದ ಹಾಜರಾತಿ ಕೊರತೆಯ ಅವಧಿಯನ್ನು ಮನ್ನಾ ಮಾಡಲು ಅವಕಾಶವಿರುವುದಿಲ್ಲವೆಂದು ಮತ್ತೊಮ್ಮೆ ಸ್ಪಷ್ಟಪಡಿಸಲಾಗಿದೆ. ಆದ್ದರಿಂದ ಮುಖ್ಯಗುರುಗಳು ಸಹ ಇದನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

3. ಇಂತಹ ಪ್ರಸ್ತಾವನೆಗಳನ್ನು ಶಾಲಾ ಮುಖ್ಯಶಿಕ್ಷಕರು ಮಂಡಳಿಗೆ ಸಲ್ಲಿಸಬಾರದಾಗಿ ತಿಳಿಸಿದೆ. ನಿಯಮ ಪ್ರಕಾರ ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ಈ ಬಗ್ಗೆ ನಿಯಮ ಮೀರಿ ಅನುಮತಿ ನೀಡಲು ಯಾರಿಗೂ ಅಧಿಕಾರವಿರುವುದಿಲ್ಲ. ಮಂಡಳಿಗೆ ಪ್ರವೇಶ ಪತ್ರಗಳನ್ನು ಹಾಜರಾತಿ ಕೊರತೆಯಿಂದ ಹಿಂದಿರುಗಿಸಿರುವ ಪ್ರಕರಣಗಳಲ್ಲಿ ಕೆಲವು ಅಧಿಕಾರಿಗಳು ಸ್ಥಳೀಯ ಒತ್ತಡಗಳಿಗೆ ಮಣಿದು ಮತ್ತೊಂದು ಪ್ರತಿಯ ಮೇಲೆ ಪರೀಕ್ಷೆ ತೆಗೆದುಕೊಳ್ಳಲು ಅನುಮತಿಸಿದ್ದು, ಅಂತಹ ಅಧಿಕಾರಿಗಳ ಮೇಲೆ ಶಿಸ್ತುಪ್ರಕರಣ ಹೂಡಿದೆ.

4. ಮಕ್ಕಳ ದಾಖಲಾತಿ ಮತ್ತು ಹಾಜರಾತಿಯ ವಿವರಗಳನ್ನು ದಿನಾಂಕ:31.01.2019ರಲ್ಲಿದ್ದಂತೆ SATS ಎಸ್‌ಎಟಿಎಸ್ ಜಾಲತಾಣದಲ್ಲಿ ದಿನಾಂಕ:01.02.2019 ರಿಂದ 15.02.2019ರೊಳಗೆ ದಾಖಲಿಸುವುದು ಮುಖ್ಯ ಶಿಕ್ಷಕರ ಜವಾಬ್ದಾರಿಯಾಗಿದೆ.

5. ವಿದ್ಯಾರ್ಥಿಯು ಶೇ.75 ರಷ್ಟು ಹಾಜರಾತಿ ಪಡೆಯುವುದು ಕಡ್ಡಾಯ. ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಯು ಆಂತರಿಕ ಮೌಲ್ಯಮಾಪನ ಮತ್ತು ಮಂಡಳಿಯು ನಡೆಸುವ ಬಾಹ್ಯ ಪರೀಕ್ಷೆಗೆ ಹಾಜರಾಗಲು ಅರ್ಹರಿರುವುದಿಲ್ಲ. ಉದಾ:ಸಿ.ಸಿ.ಇ. ಪದ್ಧತಿಯಲ್ಲಿನ ರೂಪಣಾತ್ಮಕ ಮೌಲ್ಯಮಾಪನದಲ್ಲಿ ಎಫ್.ಎ.–1, ಎಫ್.ಎ.–2 ಮೌಲ್ಯಮಾಪನ ಪರೀಕ್ಷೆಗಳಿಗೆ ಹಾಜರಾಗಿದ್ದು, ಉಳಿದ ಅವಧಿಗೆ ಗೈರು ಹಾಜರಾಗಿ ಹಾಜರಾತಿ ಕೊರತೆ ಇದ್ದಲ್ಲಿ, ಎಫ್.ಎ.–1, ಮತ್ತು ಎಫ್.ಎ.–2 ಮೌಲ್ಯಮಾಪನಗಳಲ್ಲಿ ಗಳಿಸಿದ ಅಂಕಗಳನ್ನು ಆಂತರಿಕ ಮೌಲ್ಯ ಮಾಪನಕ್ಕೆ ಪರಿಗಣಿಸುವಂತಿಲ್ಲ.

6. ರೂಪಣಾತ್ಮಕ ಮೌಲ್ಯಮಾಪನದ ಚಟುವಟಿಕೆಗಳಿಗೆ(FA-1 ರಿಂದ FA-4 ರವರೆಗೆ) ಹಾಜರಾತಿ ಕೊರತೆಯಿಂದ ಗೈರುಹಾಜರಾಗಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಮಂಡಳಿ ನಡೆಸುವ ಬಾಹ್ಯ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರಿರುವುದಿಲ್ಲ. ಕೆಲವು ಮುಖ್ಯ ಗುರುಗಳು ಹಾಜರಾತಿ ಪರಿಗಣಿಸುವ ವಿಷಯದಲ್ಲಿ ಗೊಂದಲವನ್ನು ಉಂಟು ಮಾಡಿಕೊಂಡಿರುವುದನ್ನು ಗಮನಿಸಿದೆ.

- ಆಂತರಿಕ ಮೌಲ್ಯಮಾಪನಕ್ಕೆ ಅಂಕಗಳನ್ನು ನೀಡಿ, ಬಾಹ್ಯ ಪರೀಕ್ಷೆಗೆ ಹಾಜರಾತಿ ಕೊರತೆ ಎಂಬುದಾಗಿ ತಿಳಿಸಿ ಪ್ರವೇಶ ಪತ್ರವನ್ನು ಮಂಡಳಿಗೆ ಹಿಂದಿರುಗಿಸುವುದು, ಆಂತರಿಕ ಮೌಲ್ಯಮಾಪನ "ಗೈರು ಹಾಜರಿ" ಎಂಬುದಾಗಿ ಪರಿಗಣಿಸಿ SATS ಜಾಲತಾಣದಲ್ಲಿ ದಾಖಲಿಸಿ, ಬಾಹ್ಯ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿಸುವುದು. ಇಂತಹ ಯಾವುದೇ ಗೊಂದಲಗಳಿಗೆ ಮುಖ್ಯಗುರುಗಳು ಅವಕಾಶ ನೀಡಬಾರದು.

**"ಹಾಜರಾತಿ ಕೊರತೆ" ಎಂದರೆ ಆಂತರಿಕ** ಮೌಲ್ಯಮಾಪನ ಮತ್ತು ಬಾಹ್ಯ ಪರೀಕ್ಷೆ ಎರಡಕ್ಕೂ ಕುಳಿತುಕೊಳ್ಳಲು ಅರ್ಹರಿರುವುದಿಲ್ಲ.

- FA1 ಮತ್ತು FA2 ಪರೀಕ್ಷೆಗೆ ಹಾಜರಾಗಿ, ಉಳಿದಂತೆ FA3 ಮತ್ತು FA4 ಗೈರುಹಾಜರಾಗಿದ್ದು, ವಿದ್ಯಾರ್ಥಿಯ ಹಾಜರಾತಿ ಶೇ.75 ಕ್ಕಿಂತ ಹೆಚ್ಚು ಇದ್ದು, ಶಾಲೆಗೆ ಅಂತಿಮ ದಿನಗಳಲ್ಲಿ ಹಾಜರಾಗದೇ ಇದ್ದಲ್ಲಿ ಅನಿವಾರ್ಯವಾಗಿ 02 ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಪರಿಗಣಿಸಿ ಪೂರ್ಣ ಪ್ರಮಾಣದಲ್ಲಿ 200 ಅಂಕಗಳಿಗೆ ಪರಿಮಾಣಿಸಿ SATS ಜಾಲತಾಣದಲ್ಲಿ ಭರ್ತಿಮಾಡುವುದು.
- FA1, FA2, FA3, ಹಾಗೂ FA4, ರೂಪಣಾತ್ಮಕ ಮೌಲ್ಯ ಮಾಪನಗಳಲ್ಲಿ ಯಾವುದಾದರು ಒಂದು ಅಥವಾ ಎರಡು(FA1, FA2, FA3, FA4) ಮೌಲ್ಯ ಮಾಪನದಲ್ಲಿ ಗೈರುಹಾಜರಾಗಿದ್ದು, ವಿದ್ಯಾರ್ಥಿಯ ಹಾಜರಾತಿ ಶೇ.75 ಕ್ಕಿಂತ ಹೆಚ್ಚು ಇದ್ದಲ್ಲಿ, ವಿದ್ಯಾರ್ಥಿಯ ಶಾಲೆಗೆ ಹಾಜರಾದ ದಿನಗಳಲ್ಲಿ ಗೈರು ಹಾಜರಾದ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡುವುದು.
- ಆಂತರಿಕ ಮೌಲ್ಯಮಾಪನದ ಅಂಕಗಳನ್ನು SATS ಜಾಲತಾಣದಲ್ಲಿ ಭರ್ತಿ ಮಾಡಿದ ನಂತರ ಶಾಲೆಯಲ್ಲಿರುವ ಇಬ್ಬರು ಶಿಕ್ಷಕರಿಂದ ಎರಡು ತಂಡಗಳನ್ನು ಮಾಡಿ, ಪ್ರತಿ ತಂಡವು ಕ್ರೋಢೀಕರಿಸಿ ದಾಖಲಿಸಿದ ವಹಿಯಲ್ಲಿರುವ ಅಂಕಗಳಿಗೂ ಹಾಗೂ SATS ಜಾಲತಾಣದಲ್ಲಿ ಭರ್ತಿಮಾಡಿರುವ ಅಂಕಗಳಿಗೂ ತಾಳೆ ಬರುತ್ತದೆಯೇ ಎಂಬುದನ್ನು ಪ್ರತ್ಯೇಕವಾಗಿ ಎರಡು ತಂಡಗಳು ಪರಿಶೀಲಿಸಿರುವುದನ್ನು ಮುಖ್ಯ ಶಿಕ್ಷಕರು ದೃಢೀಕರಿಸಿಕೊಳ್ಳುವುದು.
- ಪ್ರಥಮ ಭಾಷೆಗೆ 25 ಅಂಕಗಳಿಗೆ ಹಾಗೂ ಉಳಿದ ಐದು ವಿಷಯಗಳಿಗೆ 20 ಅಂಕಗಳಿಗೆ ಪರಿವರ್ತಿಸಿ ಅಂಕಗಳನ್ನು SATS ಜಾಲತಾಣದಲ್ಲಿ ಭರ್ತಿ ಮಾಡಲಾಗಿದೆಯೇ ಎಂಬುದನ್ನು ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ದೃಢೀಕರಿಸಿಕೊಳ್ಳುವುದು.
- ಶಿಕ್ಷಕರ ತಂಡವು ಪರಿಶೀಲಿಸಿ ದೃಢೀಕರಿಸಿದ ನಂತರ ಮುಖ್ಯ ಶಿಕ್ಷಕರು ಹಾಗೂ ಗುಮಾಸ್ತರು ಅಥವಾ ಸಹಾಯಕರಿಂದ ಇನ್ನೊಮ್ಮೆ ಪರಿಶೀಲಿಸಿ ಮುಖ್ಯ ಶಿಕ್ಷಕರು ದೃಢೀಕರಿಸಿ ಸಹಿಮಾಡುವುದು.
- ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಒಮ್ಮೆ ಮಂಡಳಿಗೆ SATS ಜಾಲತಾಣದ ಮುಖಾಂತರ ಸಲ್ಲಿಸಿದ ನಂತರ ಪರಿಷ್ಕರಿಸಲು ಅವಕಾಶವಿರುವುದಿಲ್ಲ.
- ಎಲ್ಲಾ ಆರೂ ವಿಷಯಗಳ ಆಂತರಿಕ ಮೌಲ್ಯ ಮಾಪನದ ಅಂಕಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು. ಭಾಗಶಃ ವಿಷಯಗಳಿಗೆ ಆಂತರಿಕ ಮೌಲ್ಯ ಮಾಪನದ ಅಂಕಗಳನ್ನು ನಮೂದಿಸಿ ದೃಢೀಕರಿಸುವುದನ್ನು ಪರಿಗಣಿಸಲಾಗುವುದಿಲ್ಲ. (ಉದಾ: 06 ವಿಷಯಗಳ ಪೈಕಿ 03 ಅಥವಾ 04 ವಿಷಯಗಳಿಗೆ ನಮೂದಿಸುವುದು) ಅಂದರೆ ಒರ್ವ ವಿದ್ಯಾರ್ಥಿ ಆರೂ ವಿಷಯಗಳಲ್ಲೂ ಗಳಿಸಿದ ಆಂತರಿಕ ಮೌಲ್ಯಮಾಪನದ ಅಂಕಗಳನ್ನು SATS ಜಾಲತಾಣದಲ್ಲಿ ನಮೂದಿಸುವುದು ಕಡ್ಡಾಯ.
- ಈ ಅಂಶಗಳು ಆಂತರಿಕ ಮೌಲ್ಯಮಾಪನದ PART-B ನಲ್ಲಿರುವ 04 ಸಹ ಶೈಕ್ಷಣಿಕ ವಿಷಯಗಳಿಗೂ ಅನ್ವಯಿಸುತ್ತದೆ. ಆಂತರಿಕ ಮೌಲ್ಯಮಾಪನದಲ್ಲಿ ಗೈರು ಹಾಜರಾಗಿದ್ದು ಬಾಹ್ಯ ಪರೀಕ್ಷೆಯಲ್ಲಿ ಕುಳಿತುಕೊಳ್ಳಲು ಮುಖ್ಯ ಗುರುಗಳು ಅನುಮತಿಸಿದ್ದಲ್ಲಿ ಇಂತಹ ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗುವುದು.

7. ಮಾರ್ಚ್/ಏಪ್ರಿಲ್–2019ರ ಎಸ್.ಎಸ್.ಎಲ್.ಸಿ ಪರೀಕ್ಷೆ ಪ್ರಾರಂಭ ದಿನಾಂಕದವರೆಗೆ ಹಾಜರಾತಿಯ ಲೆಕ್ಕಾಚಾರ ಮಾಡಿಕೊಳ್ಳಬಹುದಾಗಿದೆ.

8. **ಮಾರ್ಚ್/ಏಪ್ರಿಲ್–2019ರ ಎಸ್.ಎಸ್.ಎಲ್.ಸಿ ಪರೀಕ್ಷೆಯಿಂದ ಆಂತರಿಕ ಮೌಲ್ಯಮಾಪನದ ಪಾರ್ಟ್–ಎ ಮತ್ತು ಪಾರ್ಟ್–ಬಿ ಎಎಂಎಲ್‌ಗಳನ್ನು ಭೌತಿಕವಾಗಿ ಶಾಲೆಗಳಿಗೆ ರವಾನಿಸುವುದನ್ನು ರದ್ದುಪಡಿಸಲಾಗಿದೆ. ಪ್ರಸ್ತುತ ಸಾಲಿನಿಂದ ಆಂತರಿಕ ಮೌಲ್ಯಮಾಪನದ ಅಂಕಗಳನ್ನು/ಗ್ರೇಡ್‌ಗಳನ್ನು SATS ಜಾಲತಾಣದಲ್ಲಿ ದಾಖಲಿಸುವುದು.**

**XIV.** **ಸತತ 6 ಪ್ರಯತ್ನಗಳು:-**

1. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅಧಿಸೂಚನೆ ಸಂಖ್ಯೆ:ಎ8/ಪು.ಆ.ಪ್ರ/13/2010-11, ದಿನಾಂಕ:18.03.2011 ರನ್ವಯ ಏಪ್ರಿಲ್-2011ರ ನಂತರ ಪರೀಕ್ಷೆ ತೆಗೆದುಕೊಂಡ ಶಾಲಾ ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳು 6 ಸತತ ಪರೀಕ್ಷೆಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು. ಇಲ್ಲವಾದಲ್ಲಿ ನಂತರದ ಪ್ರಯತ್ನದಲ್ಲಿ ಖಾಸಗಿ ಅಭ್ಯರ್ಥಿಯಾಗಿ ಎಲ್ಲಾ ವಿಷಯಗಳಲ್ಲಿಯು ಹೊಸದಾಗಿ ಪರೀಕ್ಷೆ ತೆಗೆದುಕೊಳ್ಳಬೇಕು. ವಿದ್ಯಾರ್ಥಿಗೆ ಸರ್ಕಾರ ಒದಗಿಸಿರುವ 06 ಸತತ ಪರೀಕ್ಷೆಗಳಲ್ಲಿ ವಿದ್ಯಾರ್ಥಿಯು ಸಕಾರಣಗಳಿಂದ ಯಾವುದಾದರೂ ಪರೀಕ್ಷೆ ತೆಗೆದುಕೊಳ್ಳದೆ ಇದ್ದಲ್ಲಿ ಆ ಪರೀಕ್ಷೆಯನ್ನು ಕೂಡ ಒಂದು ಪ್ರಯತ್ನ(Attempt) ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು. ಏಪ್ರಿಲ್-2016 ರಲ್ಲಿ ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಜೂನ್ 2018ರ ಪರೀಕ್ಷೆಯು 6ನೇ ಪ್ರಯತ್ನವಾಗಿರುತ್ತದೆ.
2. ಏಪ್ರಿಲ್-2011 ಕ್ಕಿಂತ ಪೂರ್ವದ ಅವಧಿಗಳಲ್ಲಿ ನಡೆದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿ ಪುನಃ ಪರೀಕ್ಷೆಗೆ ಕುಳಿತುಕೊಳ್ಳುವಲ್ಲಿ ಹಲವಾರು ಮುಖ್ಯಗುರುಗಳಲ್ಲಿ ಇನ್ನೂ ಗೊಂದಲಗಳಿರುವುದನ್ನು ಮಂಡಳಿ ಗಮನಿಸಿದೆ. ಇಂತಹ ಅಭ್ಯರ್ಥಿಗಳು 2011ರ ನಂತರ ಪರೀಕ್ಷೆಗೆ ಕುಳಿತ ಅವಧಿಯಿಂದ ಸತತ 06 ಪ್ರಯತ್ನಗಳ ವ್ಯಾಪ್ತಿಗೆ ಒಳಪಡುತ್ತಾರೆ.

**ಉದಾಹರಣೆ:-** ಏಪ್ರಿಲ್ 2008ರಲ್ಲಿ ಕುಳಿತಿದ್ದ ಓರ್ವ ಅಭ್ಯರ್ಥಿ ಏಪ್ರಿಲ್-2011ರಲ್ಲಿ ಕುಳಿತಿದ್ದಲ್ಲಿ ಜೂನ್ 2013ರ ಪರೀಕ್ಷೆಯು ಅಂತಿಮ ಪ್ರಯತ್ನದ ಅವಧಿಯಾಗಿರುತ್ತದೆ.

- ಇದೇ ವಿದ್ಯಾರ್ಥಿ ಏಪ್ರಿಲ್-2017ರಲ್ಲಿ ಕುಳಿತಿದ್ದಲ್ಲಿ ಜೂನ್-2019ರ ಪರೀಕ್ಷೆಯ ಅವಧಿಯವರೆಗೂ ಕುಳಿತುಕೊಳ್ಳಲು ಅವಕಾಶವಿರುತ್ತದೆ.

| **ಸತತ 6 ಪ್ರಯತ್ನಗಳನ್ನು ಪೂರೈಸಿರುವ ವಿವರಗಳು** | |
|---|---|
| ಏಪ್ರಿಲ್-2011ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2013ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಜೂನ್-2011ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2014ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಏಪ್ರಿಲ್-2012ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2014ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಜೂನ್-2012ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2015ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಏಪ್ರಿಲ್-2013ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2015ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಜೂನ್-2013ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2016ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಏಪ್ರಿಲ್-2014ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2016ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಜೂನ್-2014ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2017ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಏಪ್ರಿಲ್-2015ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2017ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಜೂನ್-2015ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2018ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಏಪ್ರಿಲ್-2016ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2018ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಜೂನ್-2016ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2019ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿಯುತ್ತದೆ) |
| ಏಪ್ರಿಲ್-2017ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2019ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿಯುತ್ತದೆ) |

**ವಿಶೇಷ ಸೂಚನೆ:**– ಮೇಲೆ ವಿವರಿಸಿದಂತೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು ಸತತ 6 ಪ್ರಯತ್ನಗಳ ಅವಧಿಯಲ್ಲಿ ಪರೀಕ್ಷೆ ಬರೆದು ಅನುತ್ತೀರ್ಣನಾಗಿದ್ದರೆ, ಇಂತಹ ವಿದ್ಯಾರ್ಥಿಯು ತೇರ್ಗಡೆ ಹೊಂದಿದ್ದ ವಿಷಯಗಳನ್ನು ಸಹ ಪರಿಗಣಿಸಲಾಗುವುದಿಲ್ಲ. ಈ ವಿದ್ಯಾರ್ಥಿಗಳು ಏಪ್ರಿಲ್–2019ರ ಪರೀಕ್ಷೆಗೆ ಹೊಸದಾಗಿ ಎಲ್ಲಾ 06 ವಿಷಯಗಳನ್ನು ತೆಗೆದುಕೊಳ್ಳಬೇಕು ಹಾಗೂ ಖಾಸಗಿ ವಿದ್ಯಾರ್ಥಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗುತ್ತದೆ.ಖಾಸಗಿ ವಿದ್ಯಾರ್ಥಿ ಪರೀಕ್ಷೆಗೆ ಕುಳಿತುಕೊಳ್ಳಲು ವಿಧಿಸಿರುವ ಷರತ್ತುಗಳನ್ನು ಪಾಲಿಸಬೇಕು.

ಏಪ್ರಿಲ್–2015 ರಿಂದ ಸಿಸಿಇ ಪರೀಕ್ಷಾ ಪದ್ಧತಿ ಜಾರಿಯಲ್ಲಿದ್ದು, ಏಪ್ರಿಲ್–2015ರಲ್ಲಿ ಪರೀಕ್ಷೆಗೆ ಹಾಜರಾಗಿ ಅನುತ್ತೀರ್ಣನಾಗಿದ್ದಲ್ಲಿ ಪರೀಕ್ಷೆ ಬರೆದು ಉತ್ತೀರ್ಣನಾಗಲು ಏಪ್ರಿಲ್–2015ರ ಪರೀಕ್ಷೆಯು ಸೇರಿದಂತೆ 06 ಪ್ರಯತ್ನಗಳನ್ನು ಕಲ್ಪಿಸಲಾಗಿದ್ದು, ಜೂನ್–2017ರ ಪರೀಕ್ಷೆಯು ಅಂತಿಮ ಪ್ರಯತ್ನವಾಗಿರುತ್ತದೆ. ಜೂನ್–2017ರ ಪರೀಕ್ಷೆಯಲ್ಲೂ ಎಲ್ಲಾ ವಿಷಯಗಳಲ್ಲಿ ತೇರ್ಗಡೆಯಾಗದಿದ್ದಲ್ಲಿ ಖಾಸಗಿ ವಿದ್ಯಾರ್ಥಿಯಾಗಿ ನೋಂದಣಿ ಮಾಡಿಸಿ, ಹೊಸದಾಗಿ ಆರು ವಿಷಯಗಳಿಗೆ ಖಾಸಗಿ ವಿದ್ಯಾರ್ಥಿಗಳಿಗೆ ವಿಧಿಸಿರುವ ಷರತ್ತಿನನ್ವಯ ಪರೀಕ್ಷೆ ಬರೆಯಬೇಕು.

## XV. ಫಲಿತಾಂಶ ಉತ್ತಮ ಪಡಿಸಿಕೊಳ್ಳುವಿಕೆ:–

1. ಮಂಡಳಿಯ ಕಾಯ್ದೆ ಅನುಬಂಧ–3ರ ನಿಯಮ 22ರನ್ವಯ ಎಸ್.ಎಸ್.ಎಲ್.ಸಿ.ಪರೀಕ್ಷೆಗೆ ಹಾಜರಾಗಿ ನಿರೀಕ್ಷಿಸಿದ್ದ ಫಲಿತಾಂಶ ಬಾರದಿದ್ದ ಸಂದರ್ಭಗಳಲ್ಲಿ, ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.ಈ ಸೌಲಭ್ಯ ಬಯಸುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಮೊದಲನೇ ಬಾರಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆಹೊಂದಿದ್ದು, ತೇರ್ಗಡೆಯಾದ 02 ವರ್ಷಗಳ ಅವಧಿಯಲ್ಲಿ ಯಾವುದಾದರೂ ವಿಷಯ ಅಥವಾ ಎಲ್ಲಾ ವಿಷಯಗಳಲ್ಲಿ ಫಲಿತಾಂಶ ಉತ್ತಮಪಡಿಸಿಕೊಳ್ಳಬಹುದಾಗಿದೆ. ತೇರ್ಗಡೆಯಾದ ವಿದ್ಯಾರ್ಥಿಗಳು ಮರು ಪ್ರಯತ್ನದಲ್ಲಿ ಮೊದಲನೇ ಪ್ರಯತ್ನದಲ್ಲಿನ ಅಂಕಗಳಿಗಿಂತ ಕಡಿಮೆ ಅಂಕಗಳಿಸಿದಲ್ಲಿ ಮೊದಲನೇ ಪ್ರಯತ್ನದಲ್ಲಿ ಗಳಿಸಿರುವ ಅಂಕಗಳನ್ನು ಉಳಿಸಿಕೊಳ್ಳಬಹುದಾಗಿದೆ.

2. **ಅನುಸರಿಸಬೇಕಾದ ಕ್ರಮಗಳು:–**

- ಬಿಳಿ ಹಾಳೆಯಲ್ಲಿ ಅರ್ಜಿ ಬರೆದು ಮುಖ್ಯೋಪಾಧ್ಯಾಯರ ಮುಖಾಂತರ ಮಂಡಳಿಗೆ ನಿಗದಿತ ಶುಲ್ಕದೊಂದಿಗೆ ಮತ್ತು ಮೂಲ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಬೇಕು.
- ಮಂಡಳಿಯಿಂದ ಅನುಮತಿ ಪಡೆದನಂತರ ಪರೀಕ್ಷಾ ಶುಲ್ಕ ಪಾವತಿಸಬೇಕು.
- ಹಿಂದೆ ವ್ಯಾಸಂಗ ಮಾಡಿದ ಶಾಲೆಯಿಂದಲೇ ಪರೀಕ್ಷಾ ಶುಲ್ಕ ಪಾವತಿಸಬೇಕು ಆ ಶಾಲೆಗೆ ನಿಗದಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.
- ತಾನು ಯಾವುದೇ ಉನ್ನತ ವ್ಯಾಸಂಗವನ್ನು ಮುಂದುವರೆಸಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ಸಲ್ಲಿಸುವುದು.
- ಪ್ರಯತ್ನ ಪರೀಕ್ಷೆಯಲ್ಲಿ ಫಲಿತಾಂಶ ಉತ್ತಮವಾಗದಿದ್ದ ಪಕ್ಷದಲ್ಲಿ ಹಿಂದಿನ ಫಲಿತಾಂಶವನ್ನೇ ಉಳಿಸಿಕೊಳ್ಳಬಹುದು.
- ಅನುಮತಿ ಪತ್ರದೊಂದಿಗೆ ಪರೀಕ್ಷಾ ಶುಲ್ಕವನ್ನು ನಿಗದಿತ ಅವಧಿಯೊಳಗೆ ಮಂಡಳಿಗೆ ಸಲ್ಲಿಸುವುದು.

3. **ಶೇಕಡ 100 ರಷ್ಟು ಫಲಿತಾಂಶ ಪಡೆದ ಶಾಲೆಗಳ ಕುರಿತು:**

- ರಾಜ್ಯಾದ್ಯಾಂತ 10ನೇ ತರಗತಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ನೋಂದಾಯಿಸುವ ಸರ್ಕಾರಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಸಂಖ್ಯೆ ಏಕರೂಪದಿಂದ ಕೂಡಿರುವುದಿಲ್ಲ. ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 10 ರಿಂದ 200 ಕ್ಕಿಂತ ಹೆಚ್ಚಿನ ವ್ಯಾಪ್ತಿಯಲ್ಲಿರುವುದು ಮಂಡಳಿ ಗಮನಕ್ಕೆ ಬಂದಿದೆ. ಶೇಕಡ 100 ರಷ್ಟು ಫಲಿತಾಂಶ ಪಡೆಯುವ ಏಕೈಕ ಉದ್ದೇಶದಿಂದ ನಪಾಸಾಗುವ ಸಂಭವವಿರುವ ಶಾಲಾ ಅಭ್ಯರ್ಥಿಗಳನ್ನು ಖಾಸಗಿ ಅಭ್ಯರ್ಥಿಗಳನ್ನಾಗಿ ನೋಂದಾಯಿಸುತ್ತಿರುವ ಪ್ರವೃತ್ತಿಯನ್ನು ಕೆಲವು ಶಾಲೆಗಳು ಅನುಸರಿಸುತ್ತಿರುವುದನ್ನು ಗಮನಿಸಲಾಗಿದೆ.

4. ಈ ಹಿನ್ನೆಲೆಯಲ್ಲಿ ದಿನಾಂಕ:10.05.2014 ರಂದು ಮಂಡಳಿಯ 175ನೇ ಸಭೆಯಲ್ಲಿ ಈ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ ಕೆಳಕಂಡಂತೆ ನಿರ್ಣಯಿಸಲಾಯಿತು.

   1. ಶೇಕಡ.100 ಕ್ಕೆ 100ರಷ್ಟು ಫಲಿತಾಂಶ ಪಡೆದ ಶಾಲೆಗಳನ್ನು ನಿರ್ಧರಿಸಲು ಆಯಾ ಶೈಕ್ಷಣಿಕ ವರ್ಷದಲ್ಲಿ 10ನೇ ತರಗತಿಯಲ್ಲಿ ಕನಿಷ್ಠ 25 ವಿದ್ಯಾರ್ಥಿಗಳ ಹಾಜರಾತಿ ಇರತಕ್ಕದ್ದು ಹಾಗೂ 25 ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ಪರೀಕ್ಷೆ ತೆಗೆದುಕೊಂಡು ಉತ್ತೀರ್ಣರಾಗಿರಬೇಕು.

   2. 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯು ಅದೇ ಶಾಲೆಯಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮುಂದುವರೆಸಿ ಪರೀಕ್ಷೆ ತೆಗೆದುಕೊಂಡಿರಬೇಕು.

   3. ಶೇಕಡ.100 ರಷ್ಟು ಫಲಿತಾಂಶ ಪಡೆಯುವ ಉದ್ದೇಶದಿಂದ ಶಾಲಾ ಅಭ್ಯರ್ಥಿಗಳನ್ನು ಖಾಸಗಿ ಅಭ್ಯರ್ಥಿಗಳನ್ನಾಗಿ ನೋಂದಾಯಿಸಿದ ಶಾಲೆಗಳನ್ನು ಶೇಕಡ 100 ರಷ್ಟು ಫಲಿತಾಂಶ ಪಡೆದ ಶಾಲೆಗಳನ್ನಾಗಿ ಘೋಷಿಸಲು ಪರಿಗಣಿಸುವುದಿಲ್ಲ.

## XVI. ಕಿರಿಯ ತಾಂತ್ರಿಕ ಶಾಲೆಗಳು (Junior Technical Schools):-

1. ರಾಜ್ಯದ ಕೆಲವು ಅಧಿಕೃತ ಕಿರಿಯ ತಾಂತ್ರಿಕ ಶಾಲೆಗಳಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಸಾಮಾನ್ಯ ವಿಷಯಗಳ ಜೊತೆಗೆ 02 ತಾಂತ್ರಿಕ ವಿಷಯಗಳನ್ನು ಅಭ್ಯಾಸ ಮಾಡಿ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ. 02 ತಾಂತ್ರಿಕ ವಿಷಯಗಳಲ್ಲಿ ಒಂದು ಥಿಯರಿ ಮತ್ತೊಂದು ಪ್ರಾಯೋಗಿಕ ಪರೀಕ್ಷೆ ವಿಷಯವಾಗಿರುತ್ತದೆ. ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳಬೇಕಾಗಿರುವ ತಾಂತ್ರಿಕ ವಿಷಯಗಳ ವಿವರ ಕೆಳಕಂಡಂತಿದೆ.

| ಕ್ರ.ಸಂ | ವಿಷಯ (Theory) | ವಿಷಯ ಸಂಕೇತ |
|---|---|---|
| 1 | Elements of Mechanical and Electrical Engineering -2 | 71 |
| 2 | Engineering Graphics-2 | 72 |
| 3 | Elements of Electronics | 73 |
| 4 | Elements of Computer Science | 74 |
| | Practicals | |
| 5 | Craft Technology | 77 |
| 6 | Electronics lab | 75 |
| 7 | Computer lab | 76 |

*Elements of Mechanical and Electrical Engineering-2* **ವಿಷಯ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿ** *Engineering Graphics-2* **ವಿಷಯವನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕಾಗುತ್ತದೆ ಹಾಗೂ ಪ್ರಾಯೋಗಿಕ ಪರೀಕ್ಷೆಗೆ** craft technology ವಿಷಯವನ್ನು ಆಯ್ಕೆಮಾಡಿಕೊಂಡು ಪರೀಕ್ಷೆ ಬರೆಯುವುದು.

Elements of Electronics ಅಥವಾ Elements of Computer Science **ವಿಷಯಗಳ ಪೈಕಿ ಯಾವುದಾದರೊಂದು ವಿಷಯವನ್ನು ಥಿಯರಿ ವಿಷಯವಾಗಿ ಆಯ್ಕೆ ಮಾಡಿಕೊಳ್ಳಬಹುದಾಗಿದೆ.ಆಯ್ಕೆ ಮಾಡಿಕೊಳ್ಳುವ ವಿಷಯಗಳು ಶಾಲೆಯಲ್ಲಿ ಬೋಧನೆ ಮಾಡುವ ಪಠ್ಯಕ್ರಮಕ್ಕೆ ಅನುಗುಣವಾಗಿರಬೇಕು ಹಾಗೂ ಪ್ರಾಯೋಗಿಕ ಪರೀಕ್ಷೆಗೆ** Elements of Electronics ಥಿಯರಿ ವಿಷಯ ಆಯ್ಕೆ ಮಾಡಿಕೊಂಡಿದ್ದಲ್ಲಿ ಪ್ರಾಯೋಗಿಕ ಪರೀಕ್ಷೆಯಲ್ಲಿ Electronics lab ಆಯ್ಕೆಮಾಡಿಕೊಂಡು ಪರೀಕ್ಷೆ ಬರೆಯುವುದು ಮತ್ತು Elements of Computer Science ಥಿಯರಿ ವಿಷಯ ಆಯ್ಕೆ ಮಾಡಿಕೊಂಡಿದ್ದಲ್ಲಿ ಪ್ರಾಯೋಗಿಕ ಪರೀಕ್ಷೆಯಲ್ಲಿ Computer lab ಆಯ್ಕೆಮಾಡಿಕೊಂಡು ಪರೀಕ್ಷೆ ಬರೆಯುವುದು.

**XVII. ಪರೀಕ್ಷೆಗೆ ಸಂಬಂಧಿಸಿದಂತೆ ಜಿಲ್ಲಾ ಉಪನಿರ್ದೇಶಕರು(ಆಡಳಿತ) / ಕ್ಷೇತ್ರ ಶಿಕ್ಷಣಾಧಿಕಾರಿಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳು:**

1. ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿ ಬರುವ ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಪರೀಕ್ಷಾ ಕೇಂದ್ರಗಳಿಗೆ ಹಾಗೂ ಜಿಲ್ಲಾ ಖಾಸಗಿ ಪರೀಕ್ಷಾ ಕೇಂದ್ರ ರಚಿಸಿರುವ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ಕೇಂದ್ರದ ಶಾಲೆಯ ಮುಖ್ಯ ಶಿಕ್ಷಕರನ್ನು ಮುಖ್ಯ ಅಧೀಕ್ಷಕರನ್ನಾಗಿ ನೇಮಕ ಮಾಡದೇ ಬೇರೆ ಕ್ಲಸ್ಟರ್‌ನ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರನ್ನು ಮುಖ್ಯ ಅಧೀಕ್ಷಕರನ್ನಾಗಿ ನೇಮಕ ಮಾಡುವುದು. ಜಿಲ್ಲಾ ಖಾಸಗಿ ಪರೀಕ್ಷಾ ಕೇಂದ್ರಗಳಿಗೆ ಪ್ರೌಢಶಾಲಾ ಮುಖ್ಯ ಶಿಕ್ಷಕರನ್ನೇ ಮುಖ್ಯ ಅಧೀಕ್ಷಕರನ್ನಾಗಿ ನೇಮಕ ಮಾಡುವುದು ಕಡ್ಡಾಯ ಹಾಗೂ ಪ್ರೌಢಶಾಲಾ ಸಹಶಿಕ್ಷಕರನ್ನು ನೇಮಕಾತಿ ಮಾಡದಂತೆ ಎಚ್ಚರವಹಿಸುವುದು.

2. ಸರ್ಕಾರಿ/ಅನುದಾನಿತ/ಅನುದಾನರಹಿತ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಮುಖ್ಯ ಅಧೀಕ್ಷಕರು ಕಾರ್ಯನಿರ್ವಹಿಸಲು ಕಛೇರಿ ಮಾಡಿಕೊಂಡಿರುವ ಅಂದರೆ ಮಾರ್ಗಾಧಿಕಾರಿಗಳಿಂದ ಪ್ರಶ್ನೆಪತ್ರಿಕೆಗಳನ್ನು ಸ್ವೀಕರಿಸಿ ಆಲ್ಮೇರಾದಲ್ಲಿಟ್ಟುಕೊಳ್ಳುವ, ಪ್ರಶ್ನೆಪತ್ರಿಕೆಗಳನ್ನು ಪರೀಕ್ಷಾ ಕೊಠಡಿಗಳಿಗೆ ಹಂಚಿಕೆ ಮಾಡಿಕೊಳ್ಳುವ ಹಾಗೂ ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಗಳ ಬಂಡಲ್ ಮಾಡುವಂತಹ ಕಾರ್ಯಗಳನ್ನು ನಿರ್ವಹಿಸುವ ಕಛೇರಿಯ ಕೊಠಡಿಗೆ ಮತ್ತು ಕಾರಿಡಾರ್‌ಗಳಿಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸುವುದು ಕಡ್ಡಾಯ.
3. ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಗೆ ಬರುವ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರ ಸಭೆಯನ್ನು ಕರೆದು ಪರೀಕ್ಷೆ ವಿಧಿವಿಧಾನಗಳ ಬಗ್ಗೆ ತಿಳುವಳಿಕೆ ನೀಡುವುದು. ಎಲ್ಲಾ ಕೇಂದ್ರಗಳಿಗೆ ಕೊಠಡಿ ಮೇಲ್ವಿಚಾರಕರನ್ನು ನಿಯಮಾನುಸಾರ ನೇಮಿಸಲು ಕ್ರಮಕೈಗೊಳ್ಳುವುದು. ಉಪನಿರ್ದೇಶಕರಿಂದ ಪ್ರಶ್ನೆಪತ್ರಿಕೆಗಳ ಭಾಂಗಿಗಳನ್ನು ಸ್ವೀಕರಿಸಿ ಸಂಬಂಧಪಟ್ಟ ಖಜಾನೆಯಲ್ಲಿ ಸುರಕ್ಷಿತವಾಗಿ ಠೇವಣಿ ಮಾಡುವುದು. ವೇಳಾಪಟ್ಟಿಯಂತೆ ಆಯಾ ವಿಷಯವಾರು/ಮಾಧ್ಯಮವಾರು/ದಿನಾಂಕವಾರು ಪ್ರಶ್ನೆಪತ್ರಿಕೆಗಳ ಬಂಡಲ್‌ಗಳನ್ನು ಮಾರ್ಗಾಧಿಕಾರಿಗಳ ಮೂಲಕ ಮುಖ್ಯ ಅಧೀಕ್ಷಕರಿಗೆ ಪ್ರತಿನಿತ್ಯ ವಿತರಿಸಲು ಕ್ರಮವಹಿಸುವುದು.

4. ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಉಪನಿರ್ದೇಶಕರಿಂದ ಪ್ರಶ್ನೆಪತ್ರಿಕೆಗಳನ್ನು ಸ್ವೀಕರಿಸಿದ ನಂತರ ಪ್ರಶ್ನೆಪತ್ರಿಕೆಗಳನ್ನು ಸಾಗಾಣಿಕೆ ಮಾಡುವ ಸಮಯದಲ್ಲಿ ಪೊಲೀಸ್ ಎಸ್ಕಾರ್ಟ್‌ನ್ನು ತಪ್ಪದೇ ಪಡೆಯುವುದು.

5. ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಶ್ನೆಪತ್ರಿಕೆಗಳನ್ನು ಸಾಗಾಣಿಕೆ ಮಾಡುವ ವಾಹನದಲ್ಲಿ ಇಲಾಖೆಯ ಸಿಬ್ಬಂದಿಯನ್ನು ಹೊರತುಪಡಿಸಿ ಯಾವುದೇ ಖಾಸಗಿ ವ್ಯಕ್ತಿಗಳು ಇರಬಾರದು.

6. ಗೌಪ್ಯ ಪ್ರಶ್ನೆಪತ್ರಿಕೆಗಳನ್ನು ಸಾಗಾಣಿಕೆ ಮಾಡುವ ವಾಹನದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಡ್ಡಾಯವಾಗಿ ಇರುವುದು ಹಾಗೂ ತಾಲ್ಲೂಕು/ಜಿಲ್ಲಾ ಉಪಖಜಾನೆಯ ಭದ್ರತಾ ಕೊಠಡಿಯಲ್ಲಿ ಪ್ರಶ್ನೆಪತ್ರಿಕೆಗಳನ್ನು ಶೇಖರಿಸಿಡುವ

ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪಖಜಾನಾಧಿಕಾರಿಗಳು ಹಾಗೂ ತಹಶೀಲ್ದಾರ್‌ರವರು ಕಡ್ಡಾಯವಾಗಿ ಹಾಜರಿರುವುದು.

7. ಪರೀಕ್ಷಾ ಕೇಂದ್ರಕ್ಕೆ ಕಸ್ಟೋಡಿಯನ್ ನೇಮಕ ಮಾಡುತ್ತಿರುವುದರಿಂದ ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬ ಸ್ಥಾನಿಕ ಜಾಗೃತದಳದ ಸದಸ್ಯರನ್ನು ನೇಮಕ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.

8. ಕಸ್ಟೋಡಿಯನ್‌ರವರು ಪರೀಕ್ಷಾ ಕೇಂದ್ರದಲ್ಲಿ ಪ್ರಶ್ನೆಪತ್ರಿಕೆಯನ್ನು ವಿತರಿಸಿ ಗೈರುಹಾಜರಾದ ವಿದ್ಯಾರ್ಥಿಗಳ ಹಾಗೂ ಉಳಿಕೆ ಪ್ರಶ್ನೆಪತ್ರಿಕೆಗಳನ್ನು ಗೌಪ್ಯ ಲಕೋಟೆಯಲ್ಲಿಟ್ಟು, ಕೋರ ಬಟ್ಟೆಯಿಂದ ಬಂಡಲ್ ಮಾಡಿ ಮೊಹರು ಹಾಕಿ ಅಲ್ಮೇರಾದಲ್ಲಿಟ್ಟು ಬೀಗ ಹಾಕಿದ ನಂತರ ಕಸ್ಟೋಡಿಯನ್‌ರವರು ಪರೀಕ್ಷೆ ಮುಗಿಯುವವರೆಗೆ ಸ್ಥಾನಿಕ ಜಾಗೃತದಳದ ಕರ್ತವ್ಯ ನಿರ್ವಹಿಸುವ ಜವಾಬ್ದಾರಿಯನ್ನು ನಿರ್ವಹಿಸುವುದು.

9. ಉತ್ತರಪತ್ರಿಕೆಗಳನ್ನು ಮುಖ್ಯ ಅಧೀಕ್ಷಕರಿಂದ ವಾಪಸ್ಸು ಪಡೆದು ಆಯಾ ದಿನವೇ ಉಪನಿರ್ದೇಶಕರಿಗೆ ನೀಡುವುದು. ತಾಲ್ಲೂಕುಮಟ್ಟದಲ್ಲಿ ತಹಶೀಲ್ದಾರ್, ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಉಪಖಜಾನಾಧಿಕಾರಿ ಹಾಗೂ ಇತರೆ ಇಲಾಖೆ ಮುಖ್ಯಸ್ಥರನ್ನು ಸಂಪರ್ಕಿಸಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಸುವ್ಯವಸ್ಥಿತವಾಗಿ ನಡೆಸಲು ಅವರ ಸಹಕಾರವನ್ನು ಪಡೆಯುವುದು.

10. ತಮ್ಮ ವ್ಯಾಪ್ತಿಯಲ್ಲಿ ಬರುವ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಪ್ರದೇಶವನ್ನು ನಿಷೇದಿತ ಪ್ರದೇಶವೆಂದು ಘೋಷಿಸಲು ಕ್ರಮವಹಿಸುವುದು. ಸದರಿ ವ್ಯಾಪ್ತಿಯಲ್ಲಿ ಯಾವುದೇ ಜೆರಾಕ್ಸ್ ಅಂಗಡಿಗಳು ಪರೀಕ್ಷಾ ವೇಳೆಯಲ್ಲಿ ಕಾರ್ಯ ನಿರ್ವಹಿಸದಂತೆ ನಿಗಾವಹಿಸುವುದು.

11. ಯಾವುದೇ ಅವ್ಯವಹಾರ ಹಾಗೂ ಅಹಿತಕರ ಘಟನೆ ನಡೆಯದಂತೆ ಎಚ್ಚರವಹಿಸುವುದು.

12. ಪ್ರಶ್ನೆಪತ್ರಿಕೆಗಳ ಗೌಪ್ಯ ಸಾಮಗ್ರಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಉಪ ಖಜಾನೆಯಲ್ಲಿ ದಿನಾಂಕವಾರು, ವಿಷಯವಾರು, ಮಾಧ್ಯಮವಾರು ವಿಂಗಡಿಸಿ, ಪರೀಕ್ಷಾ ಕೇಂದ್ರಗಳಿಗೆ ಬೇಡಿಕೆಯಂತೆ ಪ್ರಶ್ನೆಪತ್ರಿಕೆಗಳ ಬಂಡಲ್‌ನ್ನು ಸರಬರಾಜು ಮಾಡಲು ಸಿದ್ಧಪಡಿಸಿಕೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

13. ತಾಲ್ಲೂಕಿನ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆಪತ್ರಿಕೆಗಳನ್ನು ತಲುಪಿಸಲು ಮಾರ್ಗನಕ್ಷೆ (Route Maps) ನಿಗದಿಪಡಿಸಿ ಮಾರ್ಗಾಧಿಕಾರಿಗಳ ಮುಖಾಂತರ ಸರಿಯಾದ ಸಮಯಕ್ಕೆ ಪರೀಕ್ಷೆ ಪ್ರಾರಂಭವಾಗುವ ಅರ್ಧ ಘಂಟೆಯಿಂದ ಒಂದು ಘಂಟೆ ಮುಂಚೆ ಪ್ರಶ್ನೆಪತ್ರಿಕೆಗಳನ್ನು ಮುಖ್ಯ ಅಧೀಕ್ಷಕರಿಗೆ ತಲುಪಿಸಿ ಸ್ವೀಕೃತಿ ಪಡೆಯುವುದು.

14. ತಾಲ್ಲೂಕಿನ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸುವ್ಯವಸ್ಥಿತ ಪೀಠೋಪಕರಣ/ಆಸನದ ವ್ಯವಸ್ಥೆ ಪರೀಕ್ಷಾ ಕೇಂದ್ರದ ಸಾಮರ್ಥ್ಯಕ್ಕನುಗುಣವಾಗಿದೆಯೇ ಎಂಬುದನ್ನು ಖುದ್ದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಭೇಟಿ ನೀಡಿ ಖಚಿತಪಡಿಸಿಕೊಳ್ಳುವುದು.

15. ಕೊಠಡಿ ಮೇಲ್ವಿಚಾರಕರನ್ನು ಪ್ರೌಢಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು. ಕೊರತೆ ಇದ್ದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನಿಯೋಜಿಸಿಕೊಳ್ಳುವುದು.

16. ಕೊಠಡಿ ಮೇಲ್ವಿಚಾರಕರನ್ನು ಅದೇ ಪರೀಕ್ಷಾ ಕೇಂದ್ರದ ಕ್ಲಸ್ಟರ್‌ನ್ನು ಬಿಟ್ಟು ಬೇರೊಂದು ಕ್ಲಸ್ಟರ್‌ನಿಂದ ತೆಗೆದುಕೊಳ್ಳುವುದು. ಪರೀಕ್ಷಾ ವಿಷಯ ದಿನದಂದು ವಿಷಯ ಶಿಕ್ಷಕರನ್ನು ಕೊಠಡಿ ಮೇಲ್ವಿಚಾರಕರನ್ನಾಗಿ ನೇಮಕ ಮಾಡದಂತೆ ಮುಖ್ಯ ಅಧೀಕ್ಷಕರಿಗೆ ತಿಳಿಸುವುದು.

17. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮುಖ್ಯ ಅಧೀಕ್ಷಕರ ಹಾಗೂ ಕಸ್ಟೋಡಿಯನ್‌ರವರ ಸಭೆ ಕರೆದು ಪರೀಕ್ಷೆಯು ಸುವ್ಯವಸ್ಥಿತವಾಗಿ ನಡೆಯಲು / ಪರೀಕ್ಷಾ ಅವ್ಯವಹಾರ ನಡೆಯದಂತೆ ಪರೀಕ್ಷಾ ಪಾವಿತ್ರ್ಯತೆಯನ್ನು ಕಾಪಾಡಲು ಪರೀಕ್ಷಾ ಪೂರ್ವ ಸಿದ್ಧತೆ, ಪರೀಕ್ಷಾ ಸಮಯದಲ್ಲಿ ಅನುಸರಿಸುವ ಕ್ರಮಗಳು ಹಾಗೂ ಪರೀಕ್ಷಾ ನಂತರದ ಕ್ರಮಗಳ ಬಗ್ಗೆ ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದು.

18. ಪರೀಕ್ಷಾ ಕೇಂದ್ರದಲ್ಲಿ ಸರದಿ ಪದ್ದತಿಯಲ್ಲಿ ಸ್ಥಾನಿಕ ಜಾಗೃತ ದಳದ ಸದಸ್ಯರನ್ನು ನಿಯೋಜಿಸಿ ಉತ್ತಮವಾಗಿ ಪರೀಕ್ಷೆ ನಡೆಯಲು ಕ್ರಮ ವಹಿಸುವುದು. ಪರೀಕ್ಷಾ ಕೇಂದ್ರದಲ್ಲಿ ಸ್ಥಾನಿಕ ಜಾಗ್ರುತ ದಳದ ಸದಸ್ಯರನ್ನು ಸರದಿ ಪದ್ಧತಿಯಲ್ಲಿ ನಿಯೋಜಿಸುವ ಸಂದರ್ಭದಲ್ಲಿ ಸ್ಥಾನಿಕ ಜಾಗೃತ ದಳದ ಸದಸ್ಯರ ಶಾಲೆಯ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಇಲ್ಲದಿರುವ ಬಗ್ಗೆ ಖಾತರಿಪಡಿಸಿಕೊಂಡು ನಿಯೋಜಿಸುವುದು. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬರಂತೆ ಸ್ಥಾನಿಕ ಜಾಗೃತದಳದ ಸದಸ್ಯರನ್ನು ನೇಮಕ ಮಾಡುವುದು.

19. ತಾಲ್ಲೂಕಿನಲ್ಲಿ ವಿಚಕ್ಷಣ ದಳವನ್ನು ರಚಿಸಿ, ಸೂಕ್ಷ್ಮ ಹಾಗೂ ಅತಿಸೂಕ್ಷ್ಮ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡುವುದು.

20. ರೆಗ್ಯೂಲರ್ ಪರೀಕ್ಷಾ ಕೇಂದ್ರಗಳಲ್ಲಿ CCERF ಮತ್ತು CCERR ಅಭ್ಯರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದು ಪ್ರಥಮ ಭಾಷೆ ಹಾಗೂ ಇನ್ನಿತರ ವಿಷಯಗಳಿಗೆ ಕ್ರಮವಾಗಿ 100 ಹಾಗೂ 80 ಅಂಕಗಳಿಗೆ ಉತ್ತರಿಸಲಿದ್ದಾರೆ. ಖಾಸಗಿ ಪರೀಕ್ಷಾ ಕೇಂದ್ರಗಳಲ್ಲಿ CCEPF, CCEPR, NSR ಮತ್ತು NSPR ಅಭ್ಯರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದು ಪ್ರಥಮ ಭಾಷೆ ಹಾಗೂ ಇನ್ನಿತರ ವಿಷಯಗಳಿಗೆ ಕ್ರಮವಾಗಿ 125 ಹಾಗೂ 100 ಅಂಕಗಳಿಗೆ ಉತ್ತರಿಸಲಿದ್ದಾರೆ. ಆದ್ದರಿಂದ ಅಂಕಗಳಿಗೆ ಅನುಸಾರವಾಗಿ ಸಮಯದ ಒಟ್ಟು ಅವಧಿಯ ಬಗ್ಗೆ ಮುಖ್ಯ ಅಧೀಕ್ಷಕರ ಸಭೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮನದಟ್ಟು ಮಾಡುವುದು.

21. ಪರೀಕ್ಷೆ ಮುಗಿದ ನಂತರ ಉತ್ತರಪತ್ರಿಕೆಗಳನ್ನು ಮಾರ್ಗಾಧಿಕಾರಿಗಳು ಸಂಗ್ರಹಣೆ ಮಾಡಿಕೊಂಡು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಎಲ್ಲಾ ಪರೀಕ್ಷಾ ಕೇಂದ್ರಗಳಿಂದ ಉತ್ತರಪತ್ರಿಕೆಗಳು ಬಂದಿರುವ ಬಗ್ಗೆ ಖಚಿತಪಡಿಸಿಕೊಂಡು ಜಿಲ್ಲಾ ಸ್ವೀಕೃತಿ ಸ್ಟ್ರಾಂಗ್ ರೂಂ ಕೇಂದ್ರಕ್ಕೆ ನಿಗದಿತ ಸಮಯದೊಳಗೆ ತಲುಪಿಸಿ ಸ್ವೀಕೃತಿ ಪಡೆಯುವುದು. ಸಭೆ ಹಾಗೂ ಪತ್ರಗಳ ಮುಖಾಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದಾಗ್ಯೂ ಕೆಲವು ಕ್ಷೇತ್ರ ಶಿಕ್ಷಣಾಧಿಕಾರಿಗಳು ಉತ್ತರಪತ್ರಿಕೆ ಬಂಡಲುಗಳನ್ನು ಕಛೇರಿಯಲ್ಲಿಯೇ ಉಳಿಸಿಕೊಂಡಿರುವ ನಿದರ್ಶನಗಳಿರುತ್ತವೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ತಾಲ್ಲೂಕಿನ ನೋಡಲ್ ಅಧಿಕಾರಿಗಳು ಪರೀಕ್ಷಾ ಕೇಂದ್ರಗಳಿಂದ ಸ್ವೀಕರಿಸಿದ ಉತ್ತರಪತ್ರಿಕೆಗಳನ್ನು ಜಿಲ್ಲಾ ಸ್ವೀಕೃತಿ ಕೇಂದ್ರಕ್ಕೆ ತಲುಪಿಸುವ ವ್ಯವಸ್ಥೆ ಮಾಡುವುದು.

22. ಪರೀಕ್ಷಾ ದಿನಗಳಲ್ಲಿ ಮುಖ್ಯ ಅಧೀಕ್ಷಕರು ಮಾರ್ಗಾಧಿಕಾರಿಗಳಿಂದ ಪ್ರಶ್ನೆಪತ್ರಿಕೆಗಳನ್ನು ಸಿಸಿಟಿವಿ ಕ್ಯಾಮೆರಾ ಇರುವ ಮುಖ್ಯ ಅಧೀಕ್ಷಕರ ಕೊಠಡಿಯಲ್ಲಿಯೇ ಸ್ವೀಕರಿಸಿ ಅಲ್ಲಿಯೇ ಆಲ್ಮೇರಾದಲ್ಲಿಟ್ಟು ಭದ್ರತೆಯನ್ನು ನೀಡುವುದು ಹಾಗೂ ಪರೀಕ್ಷೆ ಮುಗಿದ ನಂತರ ಉತ್ತರಪತ್ರಿಕೆಗಳ ಬಂಡಲ್‌ಗಳನ್ನು ಸಿಸಿಟಿವಿ ಕ್ಯಾಮೆರಾ ಇರುವ ಮುಖ್ಯ ಅಧೀಕ್ಷಕರ ಕೊಠಡಿಯಲ್ಲಿಯೇ ಕಾರ್ಯ ನಿರ್ವಹಿಸುವುದು.

23. ಗಣಿತ ವಿಷಯಕ್ಕೆ ಗ್ರಾಫ್(ನಕ್ಷೆ) ಒಳಗೊಂಡಿರುವ ಮುಖ್ಯ ಉತ್ತರಪತ್ರಿಕೆಗಳನ್ನು ಪರೀಕ್ಷಾ ಕೇಂದ್ರದ ಕೊಠಡಿ ಮೇಲ್ವಿಚಾರಕರಿಗೆ ನೀಡಿ ವಿದ್ಯಾರ್ಥಿಗಳಿಗೆ ವಿತರಿಸಲು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಹಾಗೂ ಪರೀಕ್ಷಾ ದಿನದಂದು ಯಾವುದೇ ವ್ಯತ್ಯಾಸವಾಗದಂತೆ ಮುಖ್ಯ ಉತ್ತರಪತ್ರಿಕೆಗಳನ್ನು ವಿತರಿಸಲು ಅಗತ್ಯ ಕ್ರಮಕೈಗೊಳ್ಳುವುದು. ಮುಖ್ಯ ಉತ್ತರಪತ್ರಿಕೆಗಳನ್ನು ವಿತರಿಸುವಲ್ಲಿ ಲೋಪದೋಷ ಕಂಡುಬಂದಲ್ಲಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನೇ ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು. ಉಪನಿರ್ದೇಶಕರು ಮುಖ್ಯ ಅಧೀಕ್ಷಕರ ಸಭೆಯಲ್ಲಿ ಸ್ಪಷ್ಟವಾಗಿ ತಿಳಿಸುವುದು. ಗಣಿತ ವಿಷಯದ ಪರೀಕ್ಷೆಯಲ್ಲಿ ಗ್ರಾಫ್(ನಕ್ಷೆ) ಇರುವ ಹಾಗೂ ಮುಖಪುಟದಲ್ಲಿ ಗಣಿತ ಎಂದು ಮುದ್ರಿಸಲಾಗಿರುವ ಮುಖ್ಯ ಉತ್ತರಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುವುದು. ಗಣಿತ ವಿಷಯದ ದಿನದಂದು ಗ್ರಾಫ್ ನಕ್ಷೆ ಹೊಂದಿರುವ ಉತ್ತರ ಪತ್ರಿಕೆ ವಿತರಿಸದೇ ಇತರೆ ವಿಷಯಗಳ ಉತ್ತರ ಪತ್ರಿಕೆ ಪುಟಗಳಿರುವ ವಿತರಿಸಿದಲ್ಲಿ ನೇರವಾಗಿ ಮುಖ್ಯ ಅಧೀಕ್ಷಕರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ಶಿಸ್ತುಕ್ರಮ ಜರುಗಿಸಲಾಗುವುದು.

24. ಪರೀಕ್ಷಾ ಕೇಂದ್ರಗಳಲ್ಲಿ ಕಡ್ಡಾಯವಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಸುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜವಾಬ್ದಾರಿ ತೆಗೆದುಕೊಳ್ಳುವುದು.

25. ಎನ್.ಎಸ್.ಕ್ಯೂ.ಎಫ್. ಯೋಜನೆಯಡಿಯಲ್ಲಿ ತೃತೀಯ ಭಾಷೆಗೆ ವಿನಾಯಿತಿ ನೀಡಿ ವೃತ್ತಿಶಿಕ್ಷಣದ ವಿಷಯಗಳಾದ ಮಾಹಿತಿ ತಂತ್ರಜ್ಞಾನ, ರಿಟೇಲ್, ಆಟೋಮೊಟೀವ್, ಹೆಲ್ತ್ ಕೇರ್ ಹಾಗೂ ಬ್ಯೂಟಿ ಮತ್ತು ವೆಲ್‌ನೆಸ್ ಇವುಗಳಲ್ಲಿ

ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ರಾಜ್ಯದ 100 ಸಂಯುಕ್ತ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ)ಗಳಿಂದ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ವೃತ್ತಿಶಿಕ್ಷಣದ ಪ್ರಶ್ನೆಪತ್ರಿಕೆ ಬಗ್ಗೆ, ಪರೀಕ್ಷಾ ಸಮಯದ ಬಗ್ಗೆ, ಉತ್ತರಪತ್ರಿಕೆಗಳನ್ನು ಬಂಡಲ್ ಮಾಡುವ ಬಗ್ಗೆ, ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾರ್ಗದರ್ಶನ ನೀಡುವುದು.

26. ಎನ್.ಎಸ್.ಕ್ಯೂ.ಎಫ್ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಸುತ್ತೋಲೆಯನ್ನು ಕಳುಹಿಸಲಾಗುವುದು.

**ಪರೀಕ್ಷೆಗೆ ಸಂಬಂಧಿಸಿದಂತೆ ಪರೀಕ್ಷಾ ಅರ್ಜಿ ಸಲ್ಲಿಸುವಾಗ ಕ್ಷೇತ್ರ ಶಿಕ್ಷಣಾಧಿಕಾರಿಗಳು ತೆಗೆದುಕೊಳ್ಳಬೇಕಾದ ಸೂಕ್ತ ಕ್ರಮಗಳು:**

1. ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 31ರ ಪ್ರಕಾರ ಪ್ರತಿಯೊಂದು ಪ್ರೌಢಶಾಲೆಯು ಬೋಧಿಸುವ ಮಾಧ್ಯಮಗಳಿಗನುಗುಣವಾಗಿ ಇಲಾಖೆಯ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯುವುದು ಕಡ್ಡಾಯ. ಎಸ್.ಎಸ್.ಎಲ್.ಸಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಆಂಗ್ಲ ಮಾಧ್ಯಮದಲ್ಲಿ ನೊಂದಾಯಿಸಿಕೊಳ್ಳಬೇಕಾದಲ್ಲಿ ಖಾಸಗಿ ಪ್ರೌಢಶಾಲೆಗಳು ಆಂಗ್ಲ ಮಾಧ್ಯಮ ಬೋಧನೆ ಮಾಡುವ ಬಗ್ಗೆ ಇಲಾಖೆಯಿಂದ ಪೂರ್ವಾನುಮತಿ ಪಡೆಯಬೇಕಾಗಿರುತ್ತದೆ.
2. ಕೆಲವು ಪ್ರೌಢಶಾಲೆಗಳು ಮಾನ್ಯತೆಯನ್ನು ಮತ್ತು ಬೋಧನಾ ಮಾಧ್ಯಮದ ಬಗ್ಗೆ ಇಲಾಖೆಯಿಂದ ಪೂರ್ವಾನುಮತಿ ಪಡೆಯದೆ ಮಂಡಳಿಗೆ ಪ್ರಸ್ತಾವನೆಗಳನ್ನು ಸಲ್ಲಿಸಿರುವುದನ್ನು ಗಮನಿಸಲಾಗಿದೆ. ಇಂತಹ ಪ್ರಸ್ತಾವನೆಗಳನ್ನು ಮಂಡಳಿಯು ಪುರಸ್ಕರಿಸುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮ ಬೀರುವುದಲ್ಲದೆ ಪೋಷಕರಿಗೆ ಗೊಂದಲದ ಸನ್ನಿವೇಶಗಳುಂಟಾಗುತ್ತವೆ. ಇದನ್ನು ತಪ್ಪಿಸಲು ಆಡಳಿತ ಮಂಡಳಿಗಳು ತಮ್ಮ ಶಾಲೆಯ ನಾಮಫಲಕಗಳಲ್ಲಿ ಇಲಾಖೆಯಿಂದ ಅನುಮತಿ ಪಡೆದ ಮಾಧ್ಯಮಗಳ ವಿವರಗಳನ್ನು ಕಡ್ಡಾಯವಾಗಿ ನಮೂದಿಸಬೇಕಾಗುತ್ತದೆ. ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೂಕ್ತ ಸುತ್ತೋಲೆಗಳನ್ನು ನೀಡಲು ಸೂಚಿಸಿದೆ.
3. ಅನಧಿಕೃತ ಶಾಲೆಗಳ ವಿವರಗಳನ್ನು ಸ್ಪಷ್ಟವಾಗಿ ವಿವರಿಸಿ ವರದಿ ಮಾಡಬೇಕು. ಯಾವುದೇ ಕಾರಣಗಳಿಂದ ಅನಧಿಕೃತ ಶಾಲೆಗಳಿಂದ ಪ್ರಸ್ತಾವನೆ ಸಲ್ಲಿಸದಂತೆ ಕ್ರಮವಹಿಸಬೇಕು. ಕಳೆದ ಸಾಲಿನಲ್ಲಿ ಕೆಲವು ಅನಧಿಕೃತ ಶಾಲೆಗಳಿಂದ ಪ್ರಸ್ತಾವನೆಗಳು ಬಂದಿದ್ದು, ಮಂಡಳಿ ಇದನ್ನು ಗಂಭೀರವಾಗಿ ಪರಿಗಣಿಸಿ ಸಂಬಂದಿಸಿದವರ ಮೇಲೆ ಶಿಸ್ತು ಕ್ರಮ ಜರುಗಿಸುವಲ್ಲಿ ಕ್ರಮಕೈಗೊಳ್ಳಲಾಗಿದೆ. ಇಂತಹ ಕ್ರಮಗಳನ್ನು ತಡೆಗಟ್ಟುವುದು ಅನಿವಾರ್ಯ ಹಾಗೂ ಕಡ್ಡಾಯ. ಆದ್ದರಿಂದ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಇಂತಹ ಅನಧಿಕೃತ ಶಾಲೆಗಳನ್ನು ಗುರುತಿಸಿ, ಬರುವಂತಹ ಪ್ರಸ್ತಾವನೆಗಳನ್ನು ತಡೆಗಟ್ಟಲು ಕ್ರಮವಹಿಸಬೇಕು.
4. ಕೆಲವು ಶಾಲೆಗಳು ಇಲಾಖಾ ಅನುಮತಿ, ಶಾಲಾ ಸಂಕೇತ ಪಡೆದು ಶಾಲೆಗಳನ್ನು ಸತತವಾಗಿ ನಡೆಸದೆ ಅನಂತರ ಏಕಾಏಕಿ ಶಾಲೆಗಳನ್ನು ಇಲಾಖಾ ಅನುಮತಿ ಪಡೆಯದೇ ಪ್ರಾರಂಭಿಸಿ ಅಥವಾ ಸ್ಥಳಾಂತರಿಸಿ ಅರ್ಜಿಗಳನ್ನು ಸಲ್ಲಿಸುತ್ತಿರುವುದನ್ನು ಗಮನಿಸಿದೆ. ಇಂತಹ ಸಂದರ್ಭಗಳಲ್ಲಿ ಪುನಃ ಶಾಲೆ ಪ್ರಾರಂಭವಾಗುವ ವರ್ಷಕ್ಕೆ ಇಲಾಖಾ ಅನುಮತಿ ಪತ್ರ ಸಲ್ಲಿಸುವುದು ಕಡ್ಡಾಯ. ಮಾನ್ಯತೆ ನವೀಕರಣ ದಾಖಲಾತಿ ಸಲ್ಲಿಸುವುದು ಕಡ್ಡಾಯ. ಈ ಯಾವ ದಾಖಲಾತಿಗಳನ್ನು ಸಲ್ಲಿಸದೇ ಇರುವ ಶಾಲೆಗಳನ್ನು ಅನಧಿಕೃತ ಶಾಲೆ ಎಂಬುದಾಗಿ ಪರಿಗಣಿಸಬೇಕು.

- ಆಯಾಯ ಕ್ಷೇತ್ರಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರಿಗಳಿಂದ ಶಾಲೆಗಳನ್ನು ಮುಚ್ಚಿಸಲು ಆದೇಶ ನೀಡಿದ್ದಲ್ಲಿ ಹಾಗೂ ವಿದ್ಯಾರ್ಥಿಗಳು ಇಲ್ಲದೇ ಶಾಲೆಯನ್ನು ಮುಚ್ಚಿದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಸಂಕೇತವನ್ನು ರದ್ದುಪಡಿಸಲು ಕಡ್ಡಾಯವಾಗಿ ಶಿಫಾರಸ್ಸು ಮಾಡತಕ್ಕದ್ದು.

- ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ತಾಲ್ಲೂಕಿನಲ್ಲಿ ನಡೆಯುತ್ತಿರುವ ಎಲ್ಲಾ ಪ್ರೌಢ ಶಾಲೆಗಳು ಅಧಿಕೃತ ಶಾಲೆಯೇ ಅಥವಾ ಅನಧಿಕೃತ ಶಾಲೆಯೇ ಎಂಬ ಬಗ್ಗೆ ಮಂಡಳಿಗೆ ದಿನಾಂಕ: **25.10.2018** ರೊಳಗೆ ನಿಗದಿಪಡಿಸಿರುವ ನಮೂನೆಯಲ್ಲಿ ಮಾಹಿತಿ ನೀಡಲು ತಿಳಿಸಿದೆ. ಈ ಮಾಹಿತಿ ನೀಡದೆ ಒಂದು ವೇಳೆ ಅನಧಿಕೃತ ಶಾಲೆಯಿಂದ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡರೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆ ಬಗ್ಗೆ ಮಾಹಿತಿ ನೀಡದಿರುವ ಬಗ್ಗೆ ಹೊಣೆಗಾರರನ್ನಾಗಿ ಮಾಡಲಾಗುವುದು.

- ಆಂತರಿಕ ಮೌಲ್ಯ ಮಾಪನದ ಅಂಕಗಳನ್ನು ಒಮ್ಮೆ ಮಂಡಳಿಗೆ SATS ಜಾಲತಾಣದ ಮುಖಾಂತರ ಸಲ್ಲಿಸಿದ ನಂತರ ತಿದ್ದುಪಡಿ ಮಾಡಿ ಪರಿಷ್ಕರಿಸಲು ಅವಕಾಶವಿರುವುದಿಲ್ಲ. ಆದ್ದರಿಂದ SATS ಜಾಲತಾಣದಲ್ಲಿ ನಮೂದಿಸಿ ದೃಢೀಕರಿಸಿರುವ ಅಂಕಗಳನ್ನು ಮಾತ್ರ ಪರಿಗಣಿಸಲಾಗುತ್ತದೆ. ಯಾವುದೇ ಕಾರಣಗಳಿಂದ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಪರಿಷ್ಕರಣೆ ಮಾಡಲು ಅವಕಾಶವಿರುವುದಿಲ್ಲ.
- ಎಲ್ಲಾ ಆರೂ ವಿಷಯಗಳ ಆಂತರಿಕ ಮೌಲ್ಯ ಮಾಪನದ ಅಂಕಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು. ಭಾಗಶಃ ವಿಷಯಗಳಿಗೆ ಆಂತರಿಕ ಮೌಲ್ಯ ಮಾಪನದ ಅಂಕಗಳನ್ನು ನಮೂದಿಸಿ ದೃಢೀಕರಿಸುವುದನ್ನು ಪರಿಗಣಿಸಲಾಗುವುದಿಲ್ಲ (ಉದಾ:06 ವಿಷಯಗಳ ಪೈಕಿ 03 ಅಥವಾ 04 ವಿಷಯಗಳಿಗೆ ನಮೂದಿಸುವುದು) ಅಂದರೆ ಓರ್ವ ವಿದ್ಯಾರ್ಥಿ ಆರೂ ವಿಷಯಗಳಲ್ಲೂ ಗಳಿಸಿದ ಆಂತರಿಕ ಮೌಲ್ಯಮಾಪನದ ಅಂಕಗಳನ್ನು SATS ಜಾಲತಾಣದಲ್ಲಿ ನಮೂದಿಸುವುದು ಕಡ್ಡಾಯ.

- ಈ ಅಂಶಗಳು ಆಂತರಿಕ ಮೌಲ್ಯ ಮಾಪನದ PART-B ನಲ್ಲಿರುವ 04 ಸಹ ಶೈಕ್ಷಣಿಕ ವಿಷಯಗಳಿಗೂ ಅನ್ವಯಿಸುತ್ತದೆ. ಆಂತರಿಕ ಮೌಲ್ಯ ಮಾಪನದಲ್ಲಿ ಗೈರು ಹಾಜರಾಗಿದ್ದು ಬಾಹ್ಯ ಪರೀಕ್ಷೆಯಲ್ಲಿ ಕುಳಿತುಕೊಳ್ಳಲು ಮುಖ್ಯ ಗುರುಗಳು ಅನುಮತಿಸಿದ್ದಲ್ಲಿ ಇಂತಹ ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗುವುದು. ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಮುಖ್ಯಸ್ಥರುಗಳಿಗೆ ಅಗತ್ಯ ಸೂಚನೆಗಳನ್ನು ನೀಡತಕ್ಕದ್ದು.

## ಮೌಲ್ಯಮಾಪಕರ ಸಂಕೇತದ (Evaluators Code) ಬಗ್ಗೆ

ಈವರೆಗೆ ಶಿಕ್ಷಕರುಗಳಿಗೆ ಮೌಲ್ಯ ಮಾಪನಾ ಕಾರ್ಯಕ್ಕೆ ನೀಡಲಾಗುತ್ತಿದ್ದ ಸಂಕೇತ Alpha-Numeric ರೂಪದಲ್ಲಿದ್ದು, ವರ್ಗಾವಣೆ ಮತ್ತು ಇತರೆ ಕಾರಣಗಳಿಂದಾಗಿ ಈ ಸಂಕೇತಗಳಲ್ಲಿ ಬದಲಾವಣೆಯಾಗುವ ಸಂಭವಗಳಿದ್ದು, ಇಂತಹ ಸಂಕೇತಗಳು Unique ಆಗಬೇಕೆಂಬ ನಿಟ್ಟಿನಲ್ಲಿ ಮಂಡಳಿಯು ಈ ಕೆಳಕಂಡಂತೆ ಕ್ರಮವಹಿಸಿದೆ.

Alpha numeric ಹೊರತುಪಡಿಸಿ Numeric ರೂಪದಲ್ಲಿ ಸಂಕೇತಗಳನ್ನು ನೀಡಲು ಕೆಳಕಂಡ ಮಾನದಂಡಗಳನ್ನು ಅಳವಡಿಸಿದೆ. ಪ್ರೌಢಶಾಲಾ ಸಹಶಿಕ್ಷಕರ ವೃಂದದ ಸೇವೆಗೆ ಸೇರಿದ ದಿನಾಂಕ ಮತ್ತು ಆ ದಿನಾಂಕದ ಎಲ್ಲಾ ಶಿಕ್ಷಕರಿಗೆ ಜನ್ಮ ದಿನಾಂಕ ಜೇಷ್ಠತೆ ಆಧಾರದ ಮೇಲೆ ಕ್ರಮ ಸಂಖ್ಯೆಗಳನ್ನು ನೀಡಿ ಕೋಡ್ ರೂಪಿಸಲಾಗಿದೆ. ಉದಾ: ಕನ್ನಡ ಭಾಷಾ ವಿಷಯದ ಸಂಕೇತ ಕನ್ನಡ ಭಾಷಾ ಶಿಕ್ಷಕರು ಪ್ರೌಢಶಾಲೆಯಲ್ಲಿ ಭಾಷಾ ಶಿಕ್ಷಕರಾಗಿ ದಿನಾಂಕ:29/09/1995 ಆಗಿದ್ದಲ್ಲಿ ನೀಡಬಹುದಾದ ಸಂಕೇತ 199509290001 ಅಗುತ್ತದೆ.

12 ಅಂಕಿಗಳಿಂದ ಕೂಡಿದ್ದು, ಕೆಳಕಂಡಂತೆ ವರ್ಗೀಕರಿಸಿ ಗುರುತಿಸಲಾಗಿದೆ.

- 1995–1,2,3,4 ಸ್ಥಾನದ ಅಂಕಿಗಳು – ಸೇವೆಗೆ ಸೇರಿದ ವರ್ಷ
- 09–5 ಮತ್ತು 6ನೇ ಸ್ಥಾನದ ಅಂಕಿಗಳು – ಸೇವೆಗೆ ಸೇರಿದ ಮಾಹೆ
- 29–7 ಮತ್ತು 8ನೇ ಸ್ಥಾನದ ಅಂಕಿಗಳು – ಸೇವೆಗೆ ಸೇರಿದ ದಿವಸ
- 0001–9,10,11 ಮತ್ತು 12ನೇ ಸ್ಥಾನದ ಅಂಕಿಗಳು – ಮೇಲ್ಕಂಡ ದಿನಾಂಕದಲ್ಲಿನ ಎಲ್ಲಾ ಶಿಕ್ಷಕರ ಜನ್ಮ ದಿನಾಂಕ ಜೇಷ್ಠತೆ ಆಧಾರದ ಮೇಲೆ ಕ್ರಮ ಸಂಖ್ಯೆ.

ಈ ರೀತಿಯಾಗಿ ಮಾಹಿತಿಗಳನ್ನು ಶಿಕ್ಷಕರುಗಳು ಗುರುತಿಸಿಕೊಳ್ಳಬಹುದಾಗಿದೆ.

ನಿಮ್ಮ ಶಾಲೆಗಳಿಗೆ ಸಂಬಂಧಿಸಿದಂತೆ, ಮುಖ್ಯ ಶಿಕ್ಷಕರುಗಳನ್ನೊಳಗೊಂಡಂತೆ ಎಲ್ಲಾ ಶಿಕ್ಷಕರುಗಳ ವಿವರಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸುವುದು ಮುಖ್ಯ ಶಿಕ್ಷಕರ ಕರ್ತವ್ಯವಾಗಿರುತ್ತದೆ. ಸದರಿ ಮಾಹಿತಿಯನ್ನು ಯಾವ ಜಾಲತಾಣದಲ್ಲಿ ದಾಖಲಿಸಬೇಕೆಂಬುದರ ಬಗ್ಗೆ ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಮಾರ್ಚ್/ಏಪ್ರಿಲ್-2019ರ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೌಲ್ಯಮಾಪನ ಕಾರ್ಯಕ್ಕೆ ಮಂಡಳಿಯಲ್ಲಿ ಶಾಲಾ ಸಂಕೇತ ಪಡೆದು ನೋಂದಣಿಯಾಗಿರುವ ಶಾಲೆಗಳು ಮೌಲ್ಯಮಾಪನಕ್ಕೆ ನೋಂದಣಿ ಮಾಡಿಸದೇ ಇರುವ ಪ್ರೌಢಶಾಲೆಗಳು ಕಡ್ಡಾಯವಾಗಿ ಮೂರು ವರ್ಷ ಸೇವೆ ಸಲ್ಲಿಸಿರುವ ಶಿಕ್ಷಕರನ್ನು ಮಂಡಳಿಯಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯ. ಕರ್ನಾಟಕ ಶಿಕ್ಷಣ ಕಾಯ್ದೆ-28 ಹಾಗೂ 122ರನ್ವಯ ಹಾಗೂ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿಯಮ (ತಿದ್ದುಪಡಿ) 2012ರನ್ವಯ ಪ್ರತಿಯೊಬ್ಬ ಶಿಕ್ಷಕರು ಮೌಲ್ಯಮಾಪನಾ ಕಾರ್ಯಕ್ಕೆ ಹಾಜರಾಗುವುದು ಕಡ್ಡಾಯ. ಮೌಲ್ಯಮಾಪನ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಶಿಸ್ತುಕ್ರಮ ಜರುಗಿಸಲು ಅವಕಾಶವಿದೆ.

ಮಂಡಳಿಯಿಂದ ವಿತರಿಸಿದ ಗುರುತಿನ ಚೀಟಿಗೆ ಪಾಸ್‌ಪೋರ್ಟ್ ಸೈಜ್ ಭಾವಚಿತ್ರವನ್ನು ಅಂಟಿಸಿ ಜಂಟಿಮುಖ್ಯ ಪರೀಕ್ಷಕರ ಸಹಿ ಪಡೆದು ಕಡ್ಡಾಯವಾಗಿ ಮೌಲ್ಯಮಾಪನ ಕೇಂದ್ರದಲ್ಲಿ ಸಹಾಯಕ ಮೌಲ್ಯಮಾಪಕರು/ಉಪಮುಖ್ಯ ಮೌಲ್ಯಮಾಪಕರು/ಜಂಟಿಮುಖ್ಯ ಮೌಲ್ಯಮಾಪಕರು ಹಾಕಿಕೊಳ್ಳುವುದು. ಸಹಾಯಕ ಮೌಲ್ಯಮಾಪಕರು ಹಾಗೂ ಉಪಮುಖ್ಯ ಮೌಲ್ಯಮಾಪಕರ ಶಾಲಾ ಸಂಕೇತ, ಸಹಾಯಕ ಮೌಲ್ಯಮಾಪಕರು/ಉಪಮುಖ್ಯ ಮೌಲ್ಯಮಾಪಕರ ಸಂಕೇತ ಸಂಖ್ಯೆ, ವಿಷಯ ಸಂಕೇತ, ಇತ್ಯಾದಿ ವಿವರಗಳೊಂದಿಗೆ ಮುಖ್ಯ ಶಿಕ್ಷಕರಿಂದ ದೃಢೀಕರಿಸಿದ ಗುರುತಿನ ಪತ್ರವನ್ನು ಸ್ವೀಕರಿಸಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ಸಹಿ ಪಡೆದು ವಿಷಯವಾರು ಮೌಲ್ಯಮಾಪನ ಕೇಂದ್ರಕ್ಕೆ ಹಾಜರಾಗುವುದು. ಗುರುತಿನ ಚೀಟಿಯನ್ನು ಹೊಂದಿರದ ವ್ಯಕ್ತಿಗಳನ್ನು ಮೌಲ್ಯಮಾಪನ ಕೇಂದ್ರಕ್ಕೆ ಪ್ರವೇಶಿಸಲು ನಿಷೇಧಿಸಿದೆ.

ಏಪ್ರಿಲ್-2019ರ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೌಲ್ಯಮಾಪನ ಕಾರ್ಯಕ್ಕೆ ಶಿಕ್ಷಕರುಗಳಿಗೆ ಪರಿಷ್ಕೃತವಾಗಿ ನೀಡಿರುವ ಸಂಕೇತಗಳನ್ನು ನಮೂದಿಸಬೇಕಾಗುತ್ತದೆ. ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮ 28 ಹಾಗೂ 122ರನ್ವಯ ಹಾಗೂ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ 1966ರ (ತಿದ್ದುಪಡಿ) ನಿಯಮಗಳು 2012ರಂತೆ ಮೌಲ್ಯಮಾಪನ ಕಾರ್ಯವನ್ನು ಕಡ್ಡಾಯಗೊಳಿಸಲಾಗಿದೆ.

**XVIII. <u>ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದಲ್ಲಿ ಬಿ.ಇ.ಓ. ಮತ್ತು ಡಿ.ಡಿ.ಪಿ.ಐ.ಗಳು ಅನುಸರಿಸಬೇಕಾದ ಕರ್ತವ್ಯಗಳು ಮತ್ತು ಜವಾಬ್ದಾರಿಗಳು:-</u>**

1. ಕರ್ನಾಟಕ ಶಿಕ್ಷಣ ಕಾಯ್ದೆ-28 ಹಾಗೂ 122ರನ್ವಯ ಹಾಗೂ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿಯಮ- ತಿದ್ದುಪಡಿ-2012ರನ್ವಯ ಪ್ರತಿಯೊಬ್ಬ ಶಿಕ್ಷಕರು ಮೌಲ್ಯಮಾಪನಾ ಕಾರ್ಯಕ್ಕೆ ಹಾಜರಾಗುವುದು ಕಡ್ಡಾಯ. ಮೌಲ್ಯಮಾಪನಕ್ಕೆ ಹಾಜರಾಗದಿದ್ದಲ್ಲಿ ಶಿಸ್ತುಕ್ರಮದ ಪ್ರಕ್ರಿಯೆಯನ್ನು ಪ್ರಾರಂಭಿಸಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೆಚ್ಚಿನ ಜವಾಬ್ದಾರಿಗಳನ್ನು ತೆಗೆದುಕೊಂಡು ಶಿಕ್ಷಕರುಗಳನ್ನು ಮೌಲ್ಯಮಾಪನಾ ಕಾರ್ಯಕ್ಕೆ ಹಾಜರಾಗುವಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

2. ಜಿಲ್ಲಾ ಉಪನಿರ್ದೇಶಕರು ಹಾಗೂ ಜಿಲ್ಲಾ ನೋಡಲ್ ಅಧಿಕಾರಿಗಳು ತಮ್ಮ ಜಿಲ್ಲಾ ಕೇಂದ್ರಗಳಲ್ಲಿನ ವಿಷಯವಾರು ಮೌಲ್ಯಮಾಪನಾ ಕೇಂದ್ರಗಳಿಗೆ ದಿನಕ್ಕೆ ಕನಿಷ್ಠ ಎರಡು ಬಾರಿ ಭೇಟಿ ನೀಡಿ ಮೌಲ್ಯಮಾಪನ ಕೇಂದ್ರಗಳಲ್ಲಿನ ಕಾರ್ಯನಿರ್ವಹಣೆಯ ಮಾನಿಟರಿಂಗ್ ಮಾಡತಕ್ಕದ್ದು.

3. ಮೌಲ್ಯಮಾಪನ ಕೇಂದ್ರಗಳಲ್ಲಿ ಕಡ್ಡಾಯವಾಗಿ ಮೊಬೈಲ್ ಫೋನ್‌ಗಳನ್ನು ನಿಷೇಧಿಸಲಾಗಿದೆ. ಈ ಬಗ್ಗೆ ಮೌಲ್ಯಮಾಪನ ಕೇಂದ್ರದ ಮುಖ್ಯ ಅಧೀಕ್ಷಕರು ತಮ್ಮ ಕೇಂದ್ರಗಳಲ್ಲಿ ಬರುವ ಎಲ್ಲಾ ಮೌಲ್ಯಮಾಪಕರುಗಳ ಮೊಬೈಲ್ ಫೋನ್‌ಗಳನ್ನು ತಮ್ಮ ವಶದಲ್ಲಿ ಪಡೆದುಕೊಳ್ಳತಕ್ಕದ್ದು. ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿರುತ್ತದೆ. ಮೊಬೈಲ್ ಫೋನುಗಳು ಯಾವುದೇ ಕಾರಣದಿಂದ ಮೌಲ್ಯಮಾಪಕರುಗಳಲ್ಲಿ ಇರತಕ್ಕದ್ದಲ್ಲ.

4. ಅನಧಿಕೃತ/ಬಾಹ್ಯ ವ್ಯಕ್ತಿಗಳು ಮೌಲ್ಯಮಾಪನ ಕೇಂದ್ರಕ್ಕೆ ಪ್ರವೇಶಿಸಿ ಜಂಟಿಮುಖ್ಯ ಮೌಲ್ಯಮಾಪಕರು/ ಉಪಮುಖ್ಯ ಮೌಲ್ಯಮಾಪಕರು/ ಸಹಾಯಕ ಮೌಲ್ಯಮಾಪಕರುಗಳಿಗೆ ಮೌಲ್ಯಮಾಪನ ಮಾಡಲು ಅಡಚಣೆ ಉಂಟು ಮಾಡಿದಲ್ಲಿ ಜಂಟಿಮುಖ್ಯ ಮೌಲ್ಯಮಾಪಕರು ಹಾಗೂ ಮೌಲ್ಯಮಾಪನ ಕೇಂದ್ರದ ವ್ಯವಸ್ಥಾಪಕರು ಇಬ್ಬರು ಸೇರಿ ಮೌಲ್ಯಮಾಪನ ಕೇಂದ್ರಕ್ಕೆ ಹತ್ತಿರವಿರುವ ಪೊಲೀಸ್ ಠಾಣೆಯಲ್ಲಿ ಅನಧಿಕೃತ/ಬಾಹ್ಯ ವ್ಯಕ್ತಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.

5. ಮೌಲ್ಯಮಾಪಕರುಗಳು ನಿಗದಿತ ಸಮಯವನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಮಾದರಿ ಉತ್ತರಪತ್ರಿಕೆಗಳನ್ನು ಚೆನ್ನಾಗಿ ಅಭ್ಯಸಿಸಿ, ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡಿ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಕಾರ್ಯನಿರ್ವಹಿಸಲು ಸೂಚನೆಗಳನ್ನು ನೀಡತಕ್ಕದ್ದು.

6. ಮೌಲ್ಯಮಾಪನ ಕೇಂದ್ರದ ಸುತ್ತ-ಮುತ್ತ ಪೊಲೀಸ್ ಬಂದೋಬಸ್ತ್ ಮಾಡತಕ್ಕದ್ದು. ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳತಕ್ಕದ್ದು. ಪರೀಕ್ಷಾ ಕೇಂದ್ರಗಳಲ್ಲಿ ಸಹಾಯಕ ಮೌಲ್ಯಮಾಪಕರು ಮೌಲ್ಯಮಾಪನ ಮಾಡಲು ಇಚ್ಛಿಸುವ ಮಾಧ್ಯಮದ ಉತ್ತರಪತ್ರಿಕೆಗಳನ್ನು ಜಂಟಿಮುಖ್ಯ ಮೌಲ್ಯಮೌಪಕರು ಹಾಗೂ ಉಪಮುಖ್ಯ ಮೌಲ್ಯಮಾಪಕರು ನೀಡುವುದು. ಕನ್ನಡ ಮಾಧ್ಯಮದಲ್ಲಿ ಮೌಲ್ಯಮಾಪನಕ್ಕೆ ನೋಂದಣಿಯಾಗಿರುವವರು ಆಂಗ್ಲ ಮಾಧ್ಯಮದಲ್ಲಿ ಮೌಲ್ಯಮಾಪನ ಮಾಡಲು ಇಚ್ಛಿಸಿದಲ್ಲಿ ಮಾತ್ರ ಆಂಗ್ಲ ಮಾಧ್ಯಮದ ಉತ್ತರಪತ್ರಿಕೆಗಳನ್ನು ಮೌಲ್ಯಮಾಪಕರುಗಳಿಗೆ ನೀಡಬಹುದಾಗಿದೆ.

7. ಉತ್ತರಪತ್ರಿಕೆಗಳಿಗೆ ಸೂಕ್ತ ರಕ್ಷಣೆ-ಭದ್ರತೆ ಒದಗಿಸತಕ್ಕದ್ದು. ವಿದ್ಯುತ್, ಗಾಳಿ, ನೀರು ಮತ್ತು ಬೆಂಕಿ ಇವುಗಳಿಂದ ಹಾನಿಗೊಳಗಾಗದಂತೆ ಅಗತ್ಯವಾದ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಸ್ಟ್ರಾಂಗ್ ರೂಂ ಆಯ್ಕೆ ಮಾಡಿಕೊಳ್ಳುವಲ್ಲಿ ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸುರಕ್ಷತೆಯಾಗಿ ಕಾಪಾಡಿಕೊಳ್ಳತಕ್ಕದ್ದು.

8. ಮೌಲ್ಯಮಾಪಕರು ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರಿಂದ ಗುರುತಿನ ಪತ್ರದ ದೃಢೀಕರಣದೊಂದಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲುಸಹಿ ಪಡೆದು ಮೌಲ್ಯಮಾಪನ ಕೇಂದ್ರಗಳಿಗೆ ಹಾಜರಾಗುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಗತ್ಯ ಕ್ರಮ ತೆಗೆದುಕೊಳ್ಳುವುದು.

9. ವಿಷಯವಾರು ಮೌಲ್ಯಮಾಪನ ಕೇಂದ್ರವಾರು ಫಾರಂ ನಂ.26, ಬ್ಲಾಕ್ ರಿಜಿಸ್ಟರ್‌ನ ವಿವರದ ನಮೂನೆಗಳನ್ನು ನೀಡಲಾಗಿದೆ. ವಾಸ್ತವಿಕವಾಗಿ ಮೌಲ್ಯಮಾಪನ ಮಾಡಿದ ಉತ್ತರಪತ್ರಿಕೆಗಳ ಸಂಖ್ಯೆ ಕಂಪ್ಯೂಟರ್ ಸಂಖ್ಯೆ ಹಾಗೂ ಎ.ಎಂ.ಎಲ್. ದಾಖಲಾತಿಯ ಕ್ರಮ ಸಂಖ್ಯೆ ಇವುಗಳನ್ನು ತಪ್ಪದೇ ಸರಿಯಾಗಿ ನಮೂದಿಸಲು ಕ್ರಮ ವಹಿಸುವುದು. ಮೌಲ್ಯಮಾಪನ ಪ್ರಕ್ರಿಯೆ ಮುಗಿದ ನಂತರ ಫಾರಂ ನಂ.26, ಬ್ಲಾಕ್ ರಿಜಿಸ್ಟರ್‌ನ ಪೂರ್ಣ ವಿವರಗಳನ್ನು ಭರ್ತಿಮಾಡಿ ಯಾವುದೇ ಪುಟಗಳನ್ನು ಖಾಲಿ ಬಿಡದೆ ಬೈಂಡಿಂಗ್ ಮಾಡಿ ಮೌಲ್ಯಮಾಪನ ಕೇಂದ್ರದ ಹೆಸರು, ವಿಷಯ, ವಿಷಯ ಸಂಕೇತ ನಮೂದಿಸಿ ಉತ್ತರಪತ್ರಿಕೆಗಳನ್ನು ಮಂಡಳಿಗೆ ವಾಪಸ್ ನೀಡುವ ಸಂದರ್ಭದಲ್ಲಿ ಹಿಂದಿರುಗಿಸುವ ಬಗ್ಗೆ ನೋಡಲ್ ಅಧಿಕಾರಿಗಳು ಜವಾಬ್ದಾರಿ ತೆಗೆದುಕೊಳ್ಳುವುದು.

10. ಜೂನ್-2018ರ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯ ಮೌಲ್ಯಮಾಪನ ಕೇಂದ್ರದಲ್ಲಿ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ನಂತರ ಅಂಕಗಳನ್ನು ಆನ್‌ಲೈನ್‌ನಲ್ಲಿ ನೇರವಾಗಿ ಮಂಡಳಿಗೆ ಪಡೆಯಲಾಗಿದೆ. ಇದೇ ಪದ್ಧತಿಯನ್ನು ಮಾರ್ಚ್/ಏಪ್ರಿಲ್ 2019ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿಯೂ ಮುಂದುವರೆಸಲಾಗುವುದು.

11. ಸಹಾಯಕ ಮೌಲ್ಯಮಾಪಕರು, ಉಪಮುಖ್ಯ ಮೌಲ್ಯಮಾಪಕರು ನೋಂದಾಯಿಸಿಕೊಂಡಿರುವ ಕೋಡ್ ಸಂಖ್ಯೆಗಳನ್ನು ಸ್ಪುಟವಾಗಿ ಕಾಣುವಂತೆ ಉತ್ತರ ಪತ್ರಿಕೆಗಳಲ್ಲಿ ಹಾಗೂ ಎ.ಎಂ.ಎಲ್ ದಾಖಲಾತಿಯಲ್ಲಿ ನಮೂದಿಸುವುದು ಹಾಗೂ ಸಹಿಯನ್ನು ಈ ಮೇಲಿನ ಮೂರು ದಾಖಲೆಗಳಲ್ಲಿ ಒಂದೇ ಮಾದರಿಯಲ್ಲಿ ಮಾಡಲು ಸೂಚಿಸಿದೆ.

## XIX. ಅರ್ಜಿಗಳನ್ನು ಸಲ್ಲಿಸಲು ಮುಖ್ಯೋಪಾಧ್ಯಾಯರು ಪಾಲಿಸಬೇಕಾದ ಸೂಚನೆಗಳು:–

1. ಮಾರ್ಚ್/ಏಪ್ರಿಲ್ 2019ರ ಎಸ್ಎಸ್ಎಲ್ಸಿ ಪರೀಕ್ಷೆಗೆ ಹಾಜರಾಗುವ CCERF, CCEPF, CCERR, CCEPR, NSR ಮತ್ತು NSPR ವಿದ್ಯಾರ್ಥಿಗಳ ನೋಂದಣಿ ಮಾಹಿತಿಯನ್ನು SATS ಜಾಲತಾಣದಲ್ಲಿ ಅಪ್‌ಲೋಡ್‌ಮಾಡುವುದು. ಹಾಗೂ 2002 ಮತ್ತು ಹಿಂದಿನ NSR/NSPR ಅಭ್ಯರ್ಥಿಗಳ ನೋಂದಣಿಯನ್ನು SATS ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ ನಂತರ ಕಳೆದ ಸಾಲಿನಂತೆ ಎಂಎಸ್ಎ ಮುಖಾಂತರವೂ ಸಹ ಪ್ರಸ್ತಾವನೆಯನ್ನು ಮಂಡಳಿಗೆ ಕಳುಹಿಸುವುದು ಕಡ್ಡಾಯವಾಗಿರುತ್ತದೆ.
2. 2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪುನರಾವರ್ತಿತ ಅಭ್ಯರ್ಥಿಗಳಿಗೆ (NSR/NSPR) ಎಂ.ಎಸ್.ಎ. ಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಎಂ.ಎಸ್.ಎ. ಲಭ್ಯವಿಲ್ಲದಿದ್ದಲ್ಲಿ, ರೂ.50/– ಶುಲ್ಕವನ್ನು ಸಕ್ಷಮ ಪ್ರಾಧಿಕಾರವಾದ ವಿಭಾಗೀಯ ಪ್ರಾದೇಶಿಕ ಪರೀಕ್ಷಾ ಮಂಡಳಿಗಳಿಗೆ ಪಾವತಿಸಿ ಎಂ.ಎಸ್.ಎ. ಪ್ರತಿಯನ್ನು ಪಡೆದು ನಿಗದಿತ ದಿನಾಂಕದೊಳಗೆ ಸಲ್ಲಿಸುವುದು ಕಡ್ಡಾಯ. ಶಾಲಾ ಸಂಕೇತ ಬದಲಾದ ಎಂ.ಎಸ್.ಎಗಳಲ್ಲಿ ಶಾಲಾ ಸಂಕೇತ ಬದಲಾವಣೆಯಾಗಿರುವ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ಬದಲಾದ ಶಾಲಾಸಂಕೇತವನ್ನು ಮುಖ್ಯಶಿಕ್ಷಕರು ಸಹಿ ಮತ್ತು ಮೊಹರಿನೊಂದಿಗೆ ದೃಢೀಕರಿಸಿ ಸಲ್ಲಿಸುವುದು ಕಡ್ಡಾಯವಾಗಿದೆ.
3. 2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪುನರಾವರ್ತಿತ ಅಭ್ಯರ್ಥಿಗಳ ಛಾಯಾಪ್ರತಿಯ ಎಂ.ಎಸ್.ಎ. ಮತ್ತು ವಿಭಾಗೀಯ ಕಾರ್ಯದರ್ಶಿಗಳ ಸಹಿ ಇಲ್ಲದ ಕೈಬರಹದ ಎಂ.ಎಸ್.ಎ.ಗಳನ್ನು ತಿರಸ್ಕರಿಸಲಾಗುವುದು.
4. ದಿನಾಂಕ:01.03.2019 ರಂದು 15 ವರ್ಷ ವಯೋಮಿತಿ ಪೂರೈಸುವ ಅಭ್ಯರ್ಥಿಗಳು ಖಾಸಗಿ ಅಭ್ಯರ್ಥಿಗಳಾಗಿ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಇವರುಗಳು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರವರಲ್ಲಿ ನಿಗದಿತ ನೋಂದಣಿ ಶುಲ್ಕ ನೀಡಿ ನೋಂದಣಿ ಮಾಡಿಸಿಕೊಂಡಿರಬೇಕು.
5. ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಪ್ರಕಾರ ರಾಜ್ಯದ ಪ್ರತಿಯೊಂದು ಖಾಸಗಿ ಅನುದಾನಿತ/ ಅನುದಾನ ರಹಿತ ಪ್ರೌಢಶಾಲೆಗಳು ಬೋಧಿಸುವ ಮಾಧ್ಯಮಗಳಿಗನುಗುಣವಾಗಿ ಇಲಾಖೆಯ ಸಕ್ಷಮ ಪ್ರಾಧಿಕಾರದ ಅನುಮತಿ/ಮಾನ್ಯತೆ ಪಡೆಯುವುದು ಕಡ್ಡಾಯ.
6. ಪ್ರಸ್ತುತ ರಾಜ್ಯದ ಕೆಲವು ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಹಲವಾರು ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದನ್ನು ಗಮನಿಸಿ ಮತ್ತು ಅನುತ್ತೀರ್ಣರಾಗುತ್ತಾರೆಂಬ ಪೂರ್ವಗ್ರಹ ಪೀಡಿತರಾಗಿ ಹಾಗೂ ಶಾಲೆಯ ಒಟ್ಟಾರೆ ಶೇಕಡಾ 100ರಷ್ಟು ಫಲಿತಾಂಶ ಪಡೆಯಬೇಕೆಂಬ ಹೆಬ್ಬಯಕೆಯಿಂದ, ಕೆಲವು ಶಾಲಾ ವಿದ್ಯಾರ್ಥಿಗಳನ್ನು ಖಾಸಗಿ ವಿದ್ಯಾರ್ಥಿಗಳಾಗಿ ಪರಿಗಣಿಸಿ ಪ್ರಸ್ತಾವನೆ ಸಲ್ಲಿಸುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಶಾಲಾ ವಿದ್ಯಾರ್ಥಿಯನ್ನು ಯಾವುದೇ ಕಾರಣಗಳಿಂದಾಗಿ ವರ್ಗಾವಣೆ ಪ್ರಮಾಣ ಪತ್ರ ನೀಡಿ ಖಾಸಗಿ ಅಭ್ಯರ್ಥಿಯಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಇನ್ನು ಮುಂದೆ ಇಂತಹ ಪ್ರಕರಣಗಳು ಮರುಕಳಿಸಿದಲ್ಲಿ ಶಿಕ್ಷಣ ಕಾಯ್ದೆ–1983ರ ನಿಯಮ–39 ರನ್ವಯ ಮಾನ್ಯತೆಯನ್ನು ಹಿಂಪಡೆಯಲು ಸೂಕ್ತ ಕ್ರಮಜರುಗಿಸಲಾಗುವುದು. ಹಾಗೂ ಸಂಬಂಧಿಸಿದ ಶಾಲೆಗಳ ಶಾಲಾ ಸಂಕೇತವನ್ನು ಸಹ ರದ್ದುಪಡಿಸಲು ಕ್ರಮವಹಿಸಲಾಗುವುದು.
7. ಶಾಲಾ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಬೋಧನೆ ಮಾಡುವ ವಿಷಯಗಳನ್ನು ಮಾತ್ರ ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳತಕ್ಕದ್ದು.
8. CCERF, CCEPF, CCERR, CCEPR, NSR ಮತ್ತು NSPR ವಿದ್ಯಾರ್ಥಿಗಳ ವಿವರಗಳನ್ನು SATS ಮೂಲಕ್ ಆನ್‌ಲೈನ್‌ನಲ್ಲಿ ನೋಂದಾಯಿಸಲು **ದಿನಾಂಕ:20.10.2018** ರಂದು ಕೊನೆಯ ದಿನಾಂಕವಾಗಿರುತ್ತದೆ. ಈ ದಿನಾಂಕದ ನಂತರ ವಿದ್ಯಾರ್ಥಿಗಳ ನೋಂದಣಿಗೆ ಅವಕಾಶವಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಶಾಲಾ

ಮುಖ್ಯೋಪಾಧ್ಯಾಯರು ನಿಗಧಿತ ದಿನಾಂಕದೊಳಗೆ ಅನ್‌ಲೈನ್‌ನಲ್ಲಿ ನೋಂದಾಯಿಸಲು ಕ್ರಮಕೈಗೊಳ್ಳುವುದು. ಹಾಗೂ ಎಂಎಸ್‌ಎಗಳನ್ನು ಅಂಚೆಮುಖಾಂತರ ಮಂಡಳಿಗೆ ರವಾನಿಸುವುದು.

9. ಖಾಸಗಿ ಅಭ್ಯರ್ಥಿಗಳ ಪರೀಕ್ಷಾ ಅರ್ಜಿಯ ಜೊತೆಗೆ ನೋಂದಣಿ ಪ್ರಮಾಣ ಪತ್ರವನ್ನೂ ಶಾಲೆಯಲ್ಲಿ ಸಂರಕ್ಷಿಸಿಡಲು ಕ್ರಮವಹಿಸುವುದು. ಸಕಾರಣದಿಂದ ತಿರಸ್ಕರಿಸುವ ಅರ್ಜಿಗಳ ಪರೀಕ್ಷಾ ಶುಲ್ಕವನ್ನು ಹಿಂದಿರುಗಿಸುವುದಿಲ್ಲ. ಶುಲ್ಕ ವಿನಾಯಿತಿ ಪಡೆಯುವ ಖಾಸಗಿ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ ಅಥವಾ **ವರ್ಗಾವಣೆ ಪ್ರಮಾಣ ಪತ್ರ(ಟಿ.ಸಿ.)ವನ್ನು ಮುಖ್ಯಶಿಕ್ಷಕರು ವಿದ್ಯಾರ್ಥಿಗಳಿಂದ ಪಡೆದು ಶಾಲೆಯಲ್ಲಿ ಸಂರಕ್ಷಿಸಿ ಇಡತಕ್ಕದ್ದು.**

10. 2002 ಮತ್ತು ಹಿಂದಿನ ವರ್ಷದಲ್ಲಿ ಪರೀಕ್ಷೆ ಬರೆದು ಅನುತ್ತೀರ್ಣರಾದ ಪುನರಾವರ್ತಿತ ಅಭ್ಯರ್ಥಿಗಳ ಎಂ.ಎಸ್.ಎ ಗಳಲ್ಲಿ ನಿಗದಿತ ಸ್ಥಳದಲ್ಲಿ ವಿದ್ಯಾರ್ಥಿಯ ಭಾವಚಿತ್ರವನ್ನು ಅಂಟಿಸಿ ನಿಗಧಿತ ಸ್ಥಳದಲ್ಲಿ ಅಭ್ಯರ್ಥಿಯ ಸಹಿ ಪಡೆಯಬೇಕು. **ಎಂಎಸ್‌ಎಯಲ್ಲಿ ಅಂಟಿಸಿರುವ ಭಾವಚಿತ್ರಗಳ ಮೇಲೆ ಮುಖ್ಯೋಪಾಧ್ಯಾಯರ ರುಜು ಹಾಗೂ ಶಾಲೆಯ ಮೊಹರು ಹಾಕತಕ್ಕದ್ದು.**

11. ಪುನರಾವರ್ತಿತ ವಿದ್ಯಾರ್ಥಿಗಳಿಗೆ ಶಾಲಾ ಬದಲಾವಣೆಗೆ ಅವಕಾಶವಿಲ್ಲ. ವಿದ್ಯಾರ್ಥಿಗಳು ಪುನ: ಪರೀಕ್ಷೆ ಬರೆಯಲು ಬಯಸಿದಲ್ಲಿ ಅದೇ ಶಾಲೆಯ ಮೂಲಕ ಪರೀಕ್ಷೆ ತೆಗೆದುಕೊಳ್ಳಲು ಮುಖ್ಯಶಿಕ್ಷಕರು ಅವಕಾಶ ಕಲ್ಪಿಸಬೇಕು. ಒಂದು ವೇಳೆ ಇಂತಹ ವಿದ್ಯಾರ್ಥಿಗಳ ವರ್ಗಾವಣೆ ಪತ್ರ ತೆಗೆದುಕೊಂಡು ಹೋಗಿದ್ದರೂ ಸಹ, ನಿಯಮಾನುಸಾರ ಅದೇ ಶಾಲೆಯ ಮೂಲಕ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವುದು.

12. ಸರ್ಕಾರದಿಂದ ಮಾನ್ಯತೆ ಪಡೆದು ಅಧಿಕೃತ ಶಾಲೆಗಳಾಗಿ ಮಂಡಳಿಯಿಂದ ಶಾಲಾ ಸಂಕೇತ ಪಡೆದಿರುವ ಸರ್ಕಾರಿ/ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳ ವಿಷಯವಾರು ಶಿಕ್ಷಕರು ಕಡ್ಡಾಯವಾಗಿ ಮಂಡಳಿಯಲ್ಲಿ ಮೌಲ್ಯಮಾಪನಕ್ಕೆ ನೋಂದಣಿ ಮಾಡಿಸತಕ್ಕದ್ದು.

13. ಮೌಲ್ಯಮಾಪನದ ನೋಂದಣಿಗೆ ಪದವಿ ಹಾಗೂ ಬಿ.ಇಡಿ., ವಿದ್ಯಾರ್ಹತೆ ಹೊಂದಿರುವವರು ಅರ್ಹತೆ ಹೊಂದಿರುತ್ತಾರೆ.

14. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಪ್ರೌಢಶಾಲೆಗೆ ಬಡ್ತಿ ಹೊಂದಿದ ದಿನಾಂಕವನ್ನು ಜೇಷ್ಠತೆಗಾಗಿ ಪರಿಗಣಿಸಿ ಮೌಲ್ಯಮಾಪನಕ್ಕೆ ನೋಂದಣಿ ಮಾಡಿಸುವುದು.

15. ಪ್ರಾಥಮಿಕ ಶಾಲಾ ಶಿಕ್ಷಕರು ಪ್ರೌಢಶಾಲೆಗೆ ಬಡ್ತಿ ಪಡೆದು ಕರ್ತವ್ಯಕ್ಕೆ ಹಾಜರಾದ ದಿನಾಂಕವನ್ನು ಪ್ರೌಢಶಾಲಾ ಸೇವೆಗೆ ಜೇಷ್ಠತಾ ದಿನಾಂಕವನ್ನಾಗಿ ಮೌಲ್ಯಮಾಪನಕ್ಕೆ ಪರಿಗಣಿಸುವುದು. ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆಗೆ ಸೇರಿದ ದಿನಾಂಕವನ್ನು ಮೌಲ್ಯಮಾಪನದ ನೋಂದಣಿಗೆ ಪರಿಗಣಿಸತಕ್ಕದ್ದಲ್ಲ.

16. ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆಗೆ ಸೇರಿದ ದಿನಾಂಕವನ್ನೇ ಮೌಲ್ಯಮಾಪನದ ನೊಂದಣಿಗೆ ಸೇವೆಗೆ ಸೇರಿದ ದಿನಾಂಕವನ್ನಾಗಿ ಪರಿಗಣಿಸಿ ಮುಖ್ಯಶಿಕ್ಷಕರು ಕಳುಹಿಸಿದ್ದಲ್ಲಿ ಶಿಸ್ತುಕ್ರಮ ಜರುಗಿಸಲಾಗುವುದು.

17. ಪ್ರಥಮ ಭಾಷೆ ಆಂಗ್ಲ ವಿಷಯವನ್ನು ಬೋಧಿಸುತ್ತಿರುವ ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲಾ ಅರ್ಹ ಶಿಕ್ಷಕರು ಕಡ್ಡಾಯವಾಗಿ ಮಂಡಳಿಯಲ್ಲಿ ನೊಂದಣಿ ಮಾಡಿಸುವುದು. ಹಾಗೂ ಸಂಬಂಧಿಸಿದ ಮುಖ್ಯಶಿಕ್ಷಕರು ಪ್ರಥಮ ಭಾಷೆ ಆಂಗ್ಲ ವಿಷಯದ ಅರ್ಹ ಶಿಕ್ಷಕರನ್ನು ಕಡ್ಡಾಯವಾಗಿ ನೋಂದಣಿ ಮಾಡಲು ಅಗತ್ಯಕ್ರಮವಹಿಸುವುದು.

18. ರಾಜ್ಯದಲ್ಲಿರುವ ಆದರ್ಶ ವಿದ್ಯಾಲಯಗಳ ಎಲ್ಲಾ ಶಿಕ್ಷಕರು ಕಡ್ಡಾಯವಾಗಿ ಮೌಲ್ಯಮಾಪನಕ್ಕೆ ನೋಂದಣಿ ಮಾಡಿಸುವುದು.

19. ಸರ್ಕಾರದ ಆದೇಶ ಸಂಖ್ಯೆ:ಅಇ/47/ಟಿಎಆರ್/2014, ಬೆಂಗಳೂರು ದಿನಾಂಕ:22.12.2014 ರನ್ವಯ, ಸಹಾಯಧನ/ಪ್ರೋತ್ಸಾಹಧನ/ಗೌರವಧನ ಮುಂತಾದವುಗಳನ್ನು RTGS / NEFT ಮುಖಾಂತರ ನೇರವಾಗಿ ಫಲಾನುಭವಿಗಳಿಗೆ ರಾಷ್ಟ್ರೀಯ ಬ್ಯಾಂಕ್ ಖಾತೆಗಳ ಮೂಲಕ ವಿತರಿಸುವಂತೆ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ 2019ನೇ

ಸಾಲಿನ ಮಾರ್ಚ್/ ಏಪ್ರಿಲ್ ಮಾಹೆಗಳ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್ ಹೆಸರು, ವಿಳಾಸ, ಐ.ಎಫ್.ಎಸ್.ಸಿ ಕೋಡ್ ಮುಂತಾದ ವಿವರಗಳನ್ನು ರಾಜ್ಯದ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ಎಸ್ಎಟಿಎಸ್ ಜಾಲತಾಣದಲ್ಲಿ ನಿಖರವಾಗಿ ತಪ್ಪಿಲ್ಲದೆ ದಾಖಲಿಸುವುದು.

**ವಿಶೇಷ ಸೂಚನೆ:– CCERF,CCEPF,CCERR, CCEPR, NSR & NSPR ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪಾವತಿಸಲು SATS ಜಾಲತಾಣದಲ್ಲಿ ಚಲನ್ ಜನರೇಟ್ ಮಾಡಿಕೊಂಡು, ನೆಫ್ಟ್ ಮೂಲಕ ರಾಷ್ಟ್ರೀಕೃತ ಬ್ಯಾಂಕ್‌ನಲ್ಲೇ ಜಮಾ ಮಾಡಬೇಕು. ಯಾವುದೇ ಕಾರಣಕ್ಕೂ ಪರೀಕ್ಷಾ ಶುಲ್ಕವನ್ನು ಬ್ಯಾಂಕ್ ಹುಂಡಿಯ ಮೂಲಕ ಸಲ್ಲಿಸಬಾರದು.**

20. **2019ರ ಏಪ್ರಿಲ್ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕೆಳಕಂಡ ದಾಖಲೆಗಳನ್ನು ಶಾಲಾ ಮುಖ್ಯೋಪಾಧ್ಯಾಯರು ದಿನಾಂಕ:20.11.2018ರೊಳಗೆ ಸಲ್ಲಿಸುವುದು ಕಡ್ಡಾಯ:–**

1. ಮುಖಪುಟ (Covering Letter)
2. ಶುಲ್ಕ ಪಾವತಿಸಿದ ಮೂಲ ನೆಫ್ಟ್ ಚಲನ್–(Original NEFT Challan)
3. ಅನುಬಂಧ–1 (ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬಂದಂತಹ ವಿದ್ಯಾರ್ಥಿಗಳ ಮಾಹಿತಿ)
4. 2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾದ NSR/NSPR ಅಭ್ಯರ್ಥಿಗಳ ಎಂಎಸ್ಎ ಮತ್ತು ನಾಮಿನಲ್ ರೋಲ್‌ಗಳನ್ನು ಸಲ್ಲಿಸುವುದು.

**ಏಪ್ರಿಲ್–2019ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕ್ರಮ ಸಂಖ್ಯೆ:21ರಲ್ಲಿ ನಮೂದಿಸಿರುವ ದಾಖಲೆಗಳನ್ನು ಮಂಡಳಿಯ ಈ ಕೆಳಗಿನ ಅಧಿಕಾರಿಗಳಿಗೆ ದಿನಾಂಕ:20.11.2018 ರೊಳಗಾಗಿ ತಲುಪಿಸಬೇಕು.**

| ಕ್ರ ಸ | ಶಾಖೆ | ಪರಿಶೀಲನಾ ಅಧಿಕಾರಿಗಳು ಶ್ರೀಮತಿ: ಶ್ರೀ | ಜಿಲ್ಲೆ | ದೂರವಾಣಿ ಸಂಖ್ಯೆ | ಕಛೇರಿಯ ದೂರವಾಣಿ |
|---|---|---|---|---|---|
| 1 | ಎಫ್ | ಸಂಧ್ಯಾ ಎಂ ಪಾಟೀಲ್ ಹಿರಿಯ ಸಹಾಯಕ ನಿರ್ದೇಶಕರು | ಬೆಂಗಳೂರು ದಕ್ಷಿಣ / ಹಾವೇರಿ / ಶಿವಮೊಗ್ಗ | 9341677111 | 08023345579 / 08023344676 |
| 2 | ಜಿ | ಎಂ.ವಿ.ಕುಮಾರಿ ಹಿರಿಯ ಸಹಾಯಕ ನಿರ್ದೇಶಕರು | ಬೆಂಗಳೂರು ಉತ್ತರ / ಚಿಕ್ಕಬಳ್ಳಾಪುರ / ಕೋಲಾರ | 8762404243 | 08023345579 / 08023344676 |
| 3 | ಹೆಚ್ | ಎಂ.ಎನ್.ಶ್ರೀನಿವಾಸ್ ಸಹಾಯಕ ನಿರ್ದೇಶಕರು | ಚಿತ್ರದುರ್ಗ /ದಾವಣಗೆರೆ/ ಬೆಂಗಳೂರು ಗ್ರಾಮಾಂತರ/ ರಾಮನಗರ | 9449052591 | 08023345579 / 08023344676 |
| 4 | ಐ | ಎಂ.ಜಿ.ಜಯಪ್ರಕಾಶ್, ಸಹಾಯಕ ನಿರ್ದೇಶಕರು | ಚಾಮರಾಜನಗರ/ಮಂಡ್ಯ/ ತುಮಕೂರು/ ಮಧುಗಿರಿ | 9845401773 | 08023345579 / 08023344676 |
| 5 | ಜೆ | ಎಂ.ಎನ್.ಶ್ರೀನಿವಾಸ್ ಸಹಾಯಕ ನಿರ್ದೇಶಕರು | ಮೈಸೂರು/ಹಾಸನ/ ಚಿಕ್ಕಮಗಳೂರು/ಕೊಡಗು | 9449052591 | 08023345579 / 08023344676 |
| 6 | ಕೆ | ಸೀತಾಲಕ್ಷ್ಮೀ, ಸಹಾಯಕ ನಿರ್ದೇಶಕರು | ಗದಗ/ ಕೊಪ್ಪಳ/ ಬಿಜಾಪುರ /ಬಾಗಲಕೋಟೆ | 9480590754 | 08023345579 / 08023344676 |
| 7 | ಎಲ್ | ಚಂದ್ರಕಾಂತಮ್ಮ, ಸಹಾಯಕ ನಿರ್ದೇಶಕರು | ಧಾರವಾಡ/ ಚಿಕ್ಕೋಡಿ/ ಬೆಳಗಾವಿ | 8971124869 | 08023345579 / 08023344676 |
| 8 | ಎಂ | ಎಸ್.ಎನ್.ವೆಂಕೋಬರಾವ್ ಸಹಾಯಕ ನಿರ್ದೇಶಕರು | ಮಂಗಳೂರು/ ಉಡುಪಿ/ ಕಾರವಾರ/ಶಿರಸಿ/ರಾಯಚೂರು | 9341076615 | 08023345579 / 08023344676 |
| 9 | ಎನ್ | ಕೆ.ಎನ್.ನಾಗರಾಜು, ಸಹಾಯಕ ನಿರ್ದೇಶಕರು | ಗುಲ್ಬರ್ಗಾ/ ಯಾದಗಿರಿ/ ಬೀದರ್/ ಬಳ್ಳಾರಿ | 9019242936 | 08023345579 / 08023344676 |

ಫ್ಯಾಕ್ಸ್ :  080–23347670
ನಿರ್ದೇಶಕರು :  080–23349434
ಕಾರ್ಯದರ್ಶಿಗಳು :  080–23445579
ಉಪನಿರ್ದೇಶಕರು(ಆಡಳಿತ) :  080–23562267
ಲೆಕ್ಕಾಧಿಕಾರಿಗಳು :  9480706792, 080–23561271

ಹೆಚ್ಚಿನ ವಿವರಗಳಿಗಾಗಿ ಮಂಡಳಿಯ kseeb.kar.nic.in ಜಾಲತಾಣದಲ್ಲಿ ನೋಡುವುದು.

(ವಿ. ಸುಮಂಗಲ)
ನಿರ್ದೇಶಕರು, ಪರೀಕ್ಷೆಗಳು

**ಪ್ರತಿಯನ್ನು ಈ ಕೆಳಕಂಡವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.**

1. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅಂಗೀಕೃತ ಪ್ರೌಢ ಶಾಲೆ/ಸಂಯುಕ್ತ ಪದವಿ ಪೂರ್ವ ಕಾಲೇಜು ಮುಖ್ಯಸ್ಥರುಗಳಿಗೆ (ಪರಿಶೀಲನಾ ಶಾಖೆಗಳ ಮೂಲಕ)
2. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ (ಪರಿಶೀಲನಾ ಶಾಖೆಗಳ ಮೂಲಕ)
3. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ,ಇವರ ಮಾಹಿತಿಗಾಗಿ ಹಾಗೂ ಖಾಸಗಿ ಅಭ್ಯರ್ಥಿಗಳನ್ನು ಮತ್ತು ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ವಿದ್ಯಾರ್ಥಿಗಳನ್ನು ಈ ಹಿಂದಿನ ವರ್ಷದಂತೆ ಶುಲ್ಕ ಪಡೆದು, ನೋಂದಣಿ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ನಮೂನೆಯೊಂದಿಗೆ ಮಂಡಳಿಗೆ ಸಲ್ಲಿಸಲು ಅಗತ್ಯ ಕ್ರಮ ಕೈಗೊಳ್ಳುವುದು ಮತ್ತು ಉಪ ನಿರ್ದೇಶಕರ ಕಚೇರಿಯಲ್ಲಿ ನಾಮಾಂಕಿತರಾದ ಎಸ್.ಎಸ್.ಎಲ್.ಸಿ. ಪರೀಕ್ಷಾ ನೋಡಲ್ ಅಧಿಕಾರಿಯವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ)
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ) ಅವರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ಬಗ್ಗೆ ಮಾಹಿತಿ ಹಾಗೂ ದೃಢೀಕರಣ ನೀಡಲು ತಿಳಿಸಿದೆ.
5. ಶಾಖಾಧಿಕಾರಿಗಳು, ಗಣಕಶಾಖೆರವರಿಗೆ ಎಸ್‌ಎಟಿಎಸ್ ಜಾಲತಾಣದಲ್ಲಿ ಮತ್ತು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.
6. ಮಂಡಳಿಯಲ್ಲಿನ ಆಪ್ತ ಶಾಖೆಗೆ/ ಎಲ್ಲಾ ಶಾಖಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ
7. ಮಂಡಳಿಯ ವೆಬ್‌ಸೈಟ್
8. ಶಿಕ್ಷಣ ವಾರ್ತೆ
9. ಕಛೇರಿ ಪ್ರತಿ.

**ಪ್ರತಿಯನ್ನು ಗೌರವಪೂರ್ವಕವಾಗಿ:–**

1. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ,
3. ನಿರ್ದೇಶಕರು, ಅಂಗವಿಕಲ ಮತ್ತು ಹಿರಿಯ ನಾಗರೀಕ ಕಲ್ಯಾಣ ಇಲಾಖೆ, ಬೆಂಗಳೂರು.

**ಅನುಬಂಧ – ಅ**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.**

**ಮಾರ್ಚ್/ಏಪ್ರಿಲ್–2019ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಭಾಷಾ ಸಂಯೋಜನೆಯ ವಿಷಯ ಸಂಕೇತಗಳು**

ಸರ್ಕಾರದ ಆದೇಶ ಸಂಖ್ಯೆ: ಮ.ಮ.ಅ:65:ಪಿಹೆಚ್‌ಪಿ:2000 ದಿನಾಂಕ:10.03.2000ದ ಅನ್ವಯ ಕಿವುಡ ಮತ್ತು ಮೂಗ ಹಾಗೂ ಕಲಿಕಾ ನ್ಯೂನತೆ ಹೊಂದಿದ ವಿದ್ಯಾರ್ಥಿಗಳಿಗೆ: ಶಿಕ್ಷಣ ಮಾಧ್ಯಮದ ಒಂದು ಭಾಷೆ ಹೊರತು ಪಡಿಸಿ ಉಳಿದ ಎರಡು ಭಾಷೆಗಳ ಕಲಿಕೆಯಿಂದ ವಿನಾಯಿತಿ ಇದೆ.

| | | |
|---|---|---|
| 01 | 31 | 61 |
| 01 | 31 | 64 |
| 01 | 31 | 65 |
| 01 | 31 | 66 |
| 01 | 31 | 67 |
| 01 | 31 | 68 |
| 01 | 31 | 69 |

| | | |
|---|---|---|
| 04 | 31 | 62 |
| 04 | 33 | 61 |
| 04 | 33 | 63 |
| 04 | 33 | 64 |
| 04 | 33 | 65 |
| 04 | 33 | 66 |
| 04 | 33 | 67 |
| 04 | 33 | 68 |
| 04 | 33 | 69 |

| | | |
|---|---|---|
| 06 | 31 | 62 |
| 06 | 33 | 63 |
| 06 | 33 | 64 |
| 06 | 33 | 65 |
| 06 | 33 | 66 |
| 06 | 33 | 67 |
| 06 | 33 | 68 |
| 06 | 33 | 69 |

| | | |
|---|---|---|
| 08 | 31 | 62 |
| 08 | 33 | 61 |
| 08 | 33 | 63 |
| 08 | 33 | 64 |
| 08 | 33 | 65 |
| 08 | 33 | 66 |
| 08 | 33 | 67 |
| 08 | 33 | 68 |
| 08 | 33 | 69 |

| | | |
|---|---|---|
| 10 | 31 | 62 |
| 10 | 33 | 61 |
| 10 | 33 | 63 |
| 10 | 33 | 64 |
| 10 | 33 | 65 |
| 10 | 33 | 66 |
| 10 | 33 | 67 |
| 10 | 33 | 68 |
| 10 | 33 | 69 |

| | | |
|---|---|---|
| 12 | 31 | 62 |
| 12 | 33 | 61 |
| 12 | 33 | 63 |
| 12 | 33 | 64 |
| 12 | 33 | 65 |
| 12 | 33 | 67 |
| 12 | 33 | 68 |
| 12 | 33 | 69 |

| | | |
|---|---|---|
| 14 | 33 | 61 |
| 14 | 33 | 64 |
| 14 | 33 | 65 |
| 14 | 33 | 66 |
| 14 | 33 | 67 |
| 14 | 33 | 68 |
| 14 | 33 | 69 |

| | | |
|---|---|---|
| 16 | 31 | 62 |
| 16 | 33 | 61 |
| 16 | 33 | 63 |
| 16 | 33 | 64 |
| 16 | 33 | 65 |
| 16 | 33 | 66 |
| 16 | 33 | 68 |
| 16 | 33 | 69 |

| ಅಂಧ ವಿದ್ಯಾರ್ಥಿಗಳಿಗೆ ಕೋರ್ ವಿಷಯಗಳ ಸಂಯೋಜನೆ (ಕಡ್ಡಾಯವಲ್ಲ – ಐಚ್ಛಿಕ) (ತ್ರಿ ಭಾಷೆಗಳು ಕಡ್ಡಾಯ) ಪುನರಾವರ್ತಿತ ವಿದ್ಯಾರ್ಥಿಗಳಿಗೆ | | |
|---|---|---|
| 91 | 92 | 85 |
| 91 | 93 | 85 |
| 91 | 94 | 85 |
| 92 | 91 | 85 |
| 92 | 93 | 85 |
| 92 | 94 | 85 |
| 93 | 91 | 85 |
| 93 | 92 | 85 |
| 93 | 94 | 85 |

| ಕಲಿಕಾ ನ್ಯೂನತೆ ಹೊಂದಿದ ವಿದ್ಯಾರ್ಥಿಗಳಿಗೆ ಕೋರ್ ವಿಷಯಗಳ ಸಂಯೋಜನೆ (ಕಡ್ಡಾಯವಲ್ಲ – ಐಚ್ಛಿಕ) ಪುನರಾವರ್ತಿತ ವಿದ್ಯಾರ್ಥಿಗಳು | | |
|---|---|---|
| 91 | 92 | 85 |
| 91 | 93 | 85 |
| 91 | 94 | 85 |
| 92 | 91 | 85 |
| 92 | 93 | 85 |
| 92 | 94 | 85 |
| 93 | 91 | 85 |
| 93 | 92 | 85 |
| 93 | 94 | 85 |

| ಸಿ.ಸಿ.ಇ. ಪದ್ದತಿಯ CCERF/CCERR ವಿದ್ಯಾರ್ಥಿಗಳಿಗೆ | | |
|---|---|---|
| 95 | 96 | 85 |
| 95 | 97 | 85 |
| 95 | 98 | 85 |
| 96 | 95 | 85 |
| 96 | 97 | 85 |
| 96 | 98 | 85 |
| 97 | 95 | 85 |
| 97 | 96 | 85 |
| 97 | 98 | 85 |

**ಭಾಷಾ ವಿಷಯ ಸಂಕೇತ ಸೂಚಿ:–**

01/33/62–ಕನ್ನಡ, 14/31/63–ಇಂಗ್ಲಿಷ್, 16/67–ಸಂಸ್ಕೃತ, 04–ತೆಲುಗು, 08–ಮರಾಠಿ, 10–ತಮಿಳು, 61/06–ಹಿಂದಿ, 12/66–ಉರ್ದು, 64–ಅರೇಬಿಕ್, 65–ಪರ್ಷಿಯನ್, 68–ಕೊಂಕಣಿ(ದೇವನಾಗರಿ–ಕನ್ನಡ), 69–ತುಳು.

**ಕೋರ್ ವಿಷಯಗಳಲ್ಲಿ ಬದಲಿಸಿಕೊಳ್ಳಬಹುದಾದ ಪರ್ಯಾಯ ವಿಷಯಗಳು ಹಾಗೂ ವಿಷಯ ಸಂಕೇತ:–**

95–ಸಮಾಜ ಶಾಸ್ತ್ರ, 96 ಅರ್ಥಶಾಸ್ತ್ರ, 97 ರಾಜ್ಯ ಶಾಸ್ತ್ರ, 98–ಹಿಂದೂಸ್ಥಾನಿ ಕರ್ನಾಟಕ ಸಂಗೀತ CCERF ಮತ್ತು CCEPF ಅಭ್ಯರ್ಥಿಗಳಿಗೆ

**ತೃತೀಯ ಭಾಷೆಗೆ ವಿನಾಯಿತಿ ನೀಡಿ ಎನ್‌ಎಸ್‌ಕ್ಯೂಎಫ್ ವೃತ್ತಿ ಶಿಕ್ಷಣದ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದಾದ ವಿಷಯ ಹಾಗೂ ವಿಷಯ ಸಂಕೇತ**

86–ಮಾಹಿತಿ ತಂತ್ರಜ್ಞಾನ, 87–ರೀಟೇಲ್, 88–ಆಟೋಮೊಬೈಲ್, 89–ಹೆಲ್ತ್‌ಕೇರ್, 90–ಬ್ಯೂಟಿ ಅಂಡ್ ವೆಲ್‌ನೆಸ್

## ಅನುಬಂಧ–1

**ಕೇಂದ್ರ ಪಠ್ಯ ಕ್ರಮ ಮತ್ತು ಹೊರರಾಜ್ಯ ಪಠ್ಯಕ್ರಮದಿಂದ ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬಂದ ವಿದ್ಯಾರ್ಥಿಗಳಿಗೆ ರಾಜ್ಯ ಪಠ್ಯಕ್ರಮದಲ್ಲಿ ವ್ಯಾಸಂಗ ಮುಂದುವರೆಸಲು ಅನುಮತಿಸಲಾದ ವಿದ್ಯಾರ್ಥಿಗಳ ಮಾಹಿತಿಯ ವಿವರ**

**ಜಿಲ್ಲೆಯ ಹೆಸರು:**________________________

| ಕ್ರ ಸಂ | ವಿದ್ಯಾರ್ಥಿಯ ಹೆಸರು | ಲಿಂಗ | | ಜನ್ಮ ದಿನಾಂಕ | ಜಾತಿಯ ಸಂಕೇತ | ನೋಂದಣಿ ಶುಲ್ಕದ ಮೊತ್ತ | ಒಟ್ಟು ಮೊತ್ತ ರೂ. | ಷರಾ |
|---|---|---|---|---|---|---|---|---|
| | | ಗಂ | ಹೆ | | | | | |
| 1 | 2 | 3 | 4 | 5 | 6 | 7 | 8 | 9 |
| | | | | | | | | |
| | | | | | | | | |
| | | | | | | | | |
| | ಒಟ್ಟು | | | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ....................

**ಪರೀಕ್ಷಾ ಮಂಡಳಿಗೆ ಪಾವತಿಸಲಾದ ನೋಂದಣಿ ಶುಲ್ಕದ ವಿವರ**

| ಕ್ರ.ಸಂ. | ಬ್ಯಾಂಕಿನ ಹೆಸರು | NEFT ಬ್ಯಾಂಕ್ ಚಲನ್ ಸಂಖ್ಯೆ | ದಿನಾಂಕ | ಶುಲ್ಕದ ಮೊತ್ತ | ಷರಾ |
|---|---|---|---|---|---|
| 1 | | | | | |
| 2 | | | | | |
| 3 | | | | | |
| | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ.________________________________________.

ಜಿಲ್ಲಾ ಉಪನಿರ್ದೇಶಕರ ಸಹಿ ಕಛೇರಿಯ ಮೊಹರಿನೊಂದಿಗೆ